25

H. Dr. Mögling, Esslingen

mit herzl. Gruss,

19/1/80

von H. Gundert

aus Mang. geschickte

can. Übersetzung der

mal. Prov. & Eccles.

(Mglg hat geschrieben

bis Prov. 27, 5)

4

Prov. 1–9.

1

ಸಾಮತಿಗಳು

೧ ಸಂಧಿ.

ದಾವೀದನ ಮಗನಾದ ಸೊಲೊಮೋನನು ಎಂಬ ಇಸ್ರಾಯೇಲ ೧
ರಾಜನ ಸಾಮತಿಗಳು, ಜ್ಞಾನವನ್ನೂ ಶಿಕ್ಷೆಯನ್ನೂ ತಿಳುಕೊಳ್ಳುವದಕ್ಕೆ ೨
ವಿವೇಕದ ವಾಕ್ಯಗಳನ್ನು ಗ್ರಹಿಸುವದಕ್ಕಾಗಿ - ಬೋಧಕಾಗಿಯೂ ನೀತಿ ೩
ನ್ಯಾಯ ನೆಟ್ಟನೆ ಇವುಗಳಿಗಾಗಿಯೂ ಶಿಕ್ಷೆ ಗ್ರಹಿಸಲಿಕ್ಕಾಗಿ, ಅಜ್ಞರಿಗೆ ಕು ೪
ಶಲತೆಯನ್ನೂ ಬಾಲಗೆ ಅರುಹನ್ನೂ ಯೋಚನೆಯನ್ನೂ ಕೊಡಲಿಕ್ಕಾ
ಗಿಯೇ, ಜ್ಞಾನಿ ಕೇಳಿ ವ್ಯುತ್ಪತ್ತಿ (ಕಲಿಕೆ) ಯನ್ನು ಹೆಚ್ಚಿಸುತ್ತಾ ವಿವೇ ೫
ಕವಂತನು ನಯಸಾಮರ್ಥ್ಯ ಸಂಪಾದಿಸುತ್ತಾ (ಇರಲಿ)! ಸಾಮತಿಯೂ ೬
ಕವಿತೆಯೂ ಜ್ಞಾನಿಗಳ ವಾಕ್ಯಗಳೂ ಒಗಟುಗಳೂ ತಿಳುಕೊಳ್ಳುವ
ಹಾಗೆಯೇ; ಜ್ಞಾನದ ಆರಂಭವು ಯೆಹೋವನ ಭಯವೇ, ೭
ಜ್ಞಾನವನ್ನೂ ಶಿಕ್ಷೆಯನ್ನೂ ಮೂಢರು ಅಸಡ್ಡೆ ಮಾಡುತ್ತಾರೆ.

(೮—) ಜ್ಞಾನವಂತ ತಂದೆಗಳ ನುಡಿಗಳಿಗೆ
ಪಾಲು ಬಿದ್ದ (೧೦) ಪಕೀರರ ಮಾಡುವ
ಪಾಪಿಗಳನ್ನು ಬಿಟ್ಟಗಲು (೨೦) ಜ್ಞಾನವೆಂಬ
ಮಾತೆಯು ಕರೆಯುವದನ್ನೂ (೨೪) ಧಿಕ್ಕರಿ
ಸುವದನ್ನೂ ಕೇಳಿ ವಿಧೇಯನಾಗತಕ್ಕದ್ದು.

ನನ್ನ ಮಗನೇ ನಿನ್ನ ಅಪ್ಪನ ಶಿಕ್ಷೆಯನ್ನು ಕೇಳು ತಾಯಿಯ ೮

೯. ಧರ್ಮೋಪದೇಶವನ್ನು ತ್ಯಜಿಸಬೇಡ! ಯಾಕಂದರೆ ಇವು ನಿನ್ನ
ತಲೆಗೆ ಲಾವಣ್ಯ ಮಾಲೆಯೂ ಕೊರಳಿಗೆ (ಬಂಗಾರದ) ಸರಪಳಿಯೂ
೧೦. ಆಗಿದೆ — ನನ್ನ ಮಗನೇ ಪಾಪಿಗಳು ನಿನ್ನನ್ನು ವಶೀಕರಣ ಮಾಡಿ
೧೧. ದರೆ ಮನಸ್ಸೊಪ್ಪದಿರು! ಎಲವಾ ನಮ್ಮೊಂದಿಗೆ ಬಾ, ರಕ್ತಕ್ಕೆ ನಾ
ವು ಹೊಂಚಿಕೊಳ್ಳುವ, ಸುಮ್ಮನೆ ನಿರ್ದೋಷಿಗಾಗಿ ಅಡಗಿಕೊಂಡು
೧೨. ಕಾಯುವ; ಪಾತಾಳದಂತೆ ನಾವು ಜೀವದೊಂದಿಗೆ ಅವರನ್ನು
ನುಂಗುವ, ಗುಣಿಗೆ ಇಳಿಯುವವರನ್ನು ಎಂಬಂತೆ ಪೂರ್ಣರಾದ
೧೩. ವರನ್ನೇ ಪೂರ್ಣವಾಗಿ! ಅಮೂಲ್ಯವಾದ ವಸ್ತುವೆಲ್ಲಾ ಸಿಕ್ಕುವದು
೧೪. ಕೊಳ್ಳೆಯಿಂದ ನಮ್ಮ ಮನೆಗಳನ್ನು ತುಂಬಿಸುವೆವು; ನಮ್ಮ ಮಧ್ಯ
ದಲ್ಲಿ ನೀನು ಚೀಟು ಹಾಕು ನಮ್ಮೆಲ್ಲರಿಗೆ ಚೀಲವು ಒಂದೇ
೧೫. ಆದೆ, ಎಂದು ಅವರು ಹೇಳಿದರೆ ನನ್ನ ಮಗನೆ ಸಂಗಡ ಆ ಮಾ
ರ್ಗದಲ್ಲಿ ಹೋಗಬೇಡ, ಅವರ ಹಾದಿಯಿಂದ ನಿನ್ನ ಪಾದ
೧೬. ವನ್ನು ಹಿಂದೆಗೆ! ಯಾಕಂದರೆ ಅವರ ಕಾಲುಗಳು ದುಷ್ಟತ್ವಕ್ಕಾಗಿ
೧೭. ಓಡಿ ರಕ್ತ ಚೆಲ್ಲುವದಕ್ಕೆ ತ್ವರೆ ಪಡುವವು. ಪಕ್ಷಿಯುಳ್ಳವುಗಳ
೧೮. ಕಣ್ಣುಗಳೆಲ್ಲಾ ಕಾಣುತ್ತಲೇ ಬಲೆ ಹಾಕುವದೂ ವ್ಯರ್ಥವಲ್ಲವಾ - ಯಾ
ಕಂದರೆ ಇವರು ಹೊಂಚಿಕೊಳ್ಳುವದು ಸ್ವಂತ ರಕ್ತಕ್ಕಾಗಿಯೇ, ಅ
೧೯. ಡಗಿಕೊಂಡು ಕಾಯುವದು ಸ್ವಂತ ಪ್ರಾಣಗಳಿಗಾಗಿಯೇ, ಲಾಭವನ್ನು
ಅಪೇಕ್ಷಿಸುವ ಎಲ್ಲರ ಹಾದಿಗಳು ಹಾಗೆಯೇ. ಲಾಭವುಳ್ಳ
ವರ ಪ್ರಾಣವನ್ನು ಅಪಹರಿಸಿ ತೆಗೆಯುತ್ತದೆ.

ಜ್ಞಾನವೆಂಬಾಕೆಯು ಹೊರಗೆ ಕೂಗಿ ಬೀದಿಗಳಲ್ಲಿ ಶಬ್ದ ೨೦
ವನ್ನೆತ್ತಿ, ಗುಂಪಾರು ಸ್ಥಳಗಳ ತುದಿಯಲ್ಲಿಂದ ಕರೆದು ನಗರ ದ್ವಾರಗ ೨೧
ಳ ಪ್ರವೇಶಗಳಲ್ಲಿ ತಂನ ನುಡಿಗಳಂನು ನುಡಿಯುವದೇನಂದರೆ:
ಎಲವಾ ಅಜ್ಞಾನಿಗಳೇ ನೀವು ಅಜ್ಞತೆಯಂನು ಪ್ರೀತಿಸುವದು ಎಷ್ಟು ೨೨
ವರೆಗೆ, ಕುಚೋದ್ಯಗಾರರು ಕುಚೋದ್ಯದಲ್ಲಿ ಆನಂದ ಪಡುವದೂ
ಬುದ್ಧಿಹೀನರು ಅರುವಂನು ಹಗೆ ಮಾಡುವದೂ ಎಷ್ಟು ಮಟ್ಟಿಗೆ?
ನಂನ ಗದರಿಕೆಗೆ ಹಿಂದಿರುಗಬ್ಬಾದರೆ ಇಗೋ ನಂನ ಆತ್ಮವಂನು ೨೩
ನಿಮಗೆ ಸುರಿಸಿ ಬಿಟ್ಟೇನು ನಂನ ಮಾತುಗಳಂನು ನಿಮಗೆ ತಿಳಿಸಿ
ಬಿಟ್ಟೇನು. ಆದರೆ ನಾನು ಕೂಗಿದರೂ ನೀವು ಕೇಳಲೊಲ್ಲದೆ ೨೪
ಅಂದರೆ ನಾನು ಕೈ ಚಾಚಿದರೂ ಲಕ್ಷ್ಯ ಕೊಡುವವರು ಇಲ್ಲದೆ
ಹೋದರು, ನಂನ ಮಂತ್ರಾಲೋಚನೆಲ್ಲಾ ನೀವು ತಳ್ಳಿ ನಂನ ಗದರಿಕೆ ೨೫
ಯಲ್ಲಿ ಮನಸ್ಸು ಕೊಡಗದಿದ್ದುದರಿಂದ, ನಿಂಮ ಆಪತ್ತಿನಲ್ಲಿ ನಾನು ೨೬
ನಗುವೆನು ನಿಂಮಂನು ಹೆದರಿಕೆ ಬರುವಾಗ ಗೇಲಿಮಾಡುವೆನು, ೨೭
ನಾಶನದ ಹಾಗೆ ನಿಂಮ ಹೆದರಿಕೆಯು ಬಂದು ತುಫಾನಿನಂತೆ
ನಿಂಮ ಆಪತ್ತು ಬರುವಾಗ ಇಕ್ಕಟ್ಟೂ ಸಂಕಟವೂ ನಿಂಮ ಮೇಲೆ
ಬರುವಾಗಲೇ. ಅಂದು ನಂನಂನು ಕರೆಯುವರು ನಾನು ಪ್ರತ್ಯುತ್ತರ ಕೊ ೨೮
ಡೆನು, ನಂನನು ಹುಡುಕುವರು ಆದರೆ ಕಂಡುಕೊಳ್ಳರು;
ತಿಳುವಳಿಕೆಯಂನು ಹಗೆ ಮಾಡಿ ಯೆಹೋವನ ಭಯವಂನು ೨೯
ಆರಿಸಿ ಕೊಳ್ಳದ್ದರಿಂದಲೇ. ನಂನ ಮಂತ್ರದಲ್ಲಿ ಮನಸ್ಸು ೩೦
ಕೊಡಗದೆ ನಂನ ಗದರಿಕೆಯಂನು ಅಸಹ್ಯವಾಗಿ ಪ್ರತಿಕ್ಷೇಪ ಮಾಡಿದ

೩೧. ನಿಮಿತ್ತ, ಅವರ ಮಾರ್ಗಗಳ ಫಲವನ್ನು ತಿಂದು ಸ್ವಂತ ಆಲೋಚನೆ
೩೨. ಗಳಿಂದ ತೃಪ್ತರಾಗುವರು. ಯಾಕಂದರೆ ಅಜ್ಞರ ಹಿಂದಿರುಗುವಿಕೆ ಅವ
ರನ್ನು ಕೊಲ್ಲುವದು ಬುದ್ಧಿಹೀನರ ನಿಶ್ಚಿಂತೆ ಅವರನ್ನು ಕೆಡಿಸುವದು.
೩೩. ಆದರೆ ನನ್ನನ್ನು ಆಲೋಚಿಸುವವನು ನಿರ್ಭೀತಿಯವನಾಗಿಯೂ ಮತ್ತು
ಭೀತಿಯಿಂದ ಶಾಂತವಾಗಿಯೂ ಇರುವನು.

ಸಾಮತಿಗಳು. ೨. ಸಂಧಿ.

(೧) ಜ್ಞಾನವನ್ನು ಹುಡುಕುವವನಿಗೆ (೫) ದೇವರ
ಭಯಭಕ್ತಿಯೂ (೯—) ನೀತಿ ಬೋಧವೂ (೧೧)
ವ್ಯಭಿಚಾರಾದಿ ಶೋಧನೆಗಳಲ್ಲಿ ಎಚ್ಚರವೂ
ರಕ್ಷಣೆಯೂ ಉಂಟಾಗುವದು.

೧. ನನ್ನ ಮಗನೇ ನನ್ನ ನುಡಿಗಳನ್ನು ನೀನು ಅಂಗೀಕರಿಸಿ ನನ್ನ
೨. ಅಪ್ಪಣೆಗಳನ್ನು ನಿನ್ನ ಹತ್ತಿಲಿ ಮಡಗಿ, ಜ್ಞಾನದ ಕಡೆಗೆ ನಿನ್ನ
ಕಿವಿಯನ್ನು ಸಿದ್ಧಮಾಡಿ ವಿವೇಕದ ಕಡೆಗೆ ಹೃದಯವನ್ನು ಬಾ
೩. ಗ್ಗಿಸಿದರೆ, ಅದಲ್ಲದೆ ಬುದ್ಧಿಯನ್ನು ಕರೆದು ವಿವೇಕಕ್ಕಾಗಿ ಶಬ್ದವನ್ನೆತ್ತಿ
೪. ದರೆ, ಬೆಳ್ಳಿಯಂತೆ ಅದನ್ನು ಹುಡುಕಿ ನಿಧಿಗಳಂತೆ ಅರಸಿ ನೋಡು
೫. ವದಾದರೆ, ಆಗ ಯೆಹೋವನ ಭಯವು ನಿನಗೆ ಗ್ರಹಿಕೆಯಾ
೬. ಗುವದು. ದೇವರ ತಿಳುವಳಿಕೆಯನ್ನು ನೀನು ಕಂಡುಕೊಳ್ಳುವಿ. ಯಾಕಂದ
ರೆ ಜ್ಞಾನವನ್ನು ಕೊಡುವವನು ಯೆಹೋವನೇ. ಗ್ರಹಿಕೆಯೂ ವಿವೇಕವೂ
೭. ಆತನ ಬಾಯಿಂದ ಬರುವದು. ನೆಟ್ಟನೆಯವರಿಗೆ ಆತನು ವಾಸ್ತವ್ಯ
ವನ್ನು ಮಡಗುವನು ಸಂಪೂರ್ಣತೆಯಲ್ಲಿ ನಡೆದುಕೊಳ್ಳುವವರಿಗೆ

ಸುರಕ್ಷಿ (ಆಗಿರುವವನು), ನ್ಯಾಯದ ಹಾದಿಗಳನ್ನು ಕಾಯುತ್ತಾ ೮
~~ಅಕ್ತಾಗಿಯೇ~~ ಭಕ್ತರ ಮಾರ್ಗವನ್ನು ಕಾಪಾಡುತ್ತಾನೆ.—
ಆಗ ನೀತಿಯನ್ನೂ ನ್ಯಾಯವನ್ನೂ ನೆಟ್ಟನೇತನವನ್ನೂ ಪ್ರತಿಯೊಂದು ಒಳ್ಳೆ ೯
ಹಾದಿಗಳನ್ನೂ ನೀನು ಗ್ರಹಿಸುವಿ. ಯಾಕಂದರೆ ಜ್ಞಾನವು ೧೦
ನಿನ್ನ ಹೃದಯದೊಳಗೆ ಪ್ರವೇಶಿಸುವದು; ತಿಳುವಳಿಕೆಯು ನಿನ್ನ ಪ್ರಾಣಕ್ಕೆ
ಸವಿಯಾಗಿರುವದು.

ಚಿಂತೆಯು ನಿನ್ನ ಮೇಲೆ ಕಾದುಕೊಂಡು ವಿವೇಕವು ನಿನ್ನನ್ನು ೧೧
ಕಾಪಾಡುವದು, ದುರ್ಮಾರ್ಗದಿಂದಲೂ ತಪ್ಪು ಮಾತಾಡುವ ಮನು ೧೨
ಷ್ಯನಿಂದಲೂ ನಿನ್ನನ್ನು ತಪ್ಪಿಸಿ ಬಿಡುತ್ತಾಗಿಯೇ. ಅವರು ನೆ ೧೩
ಟ್ಟನೆಯ ಮಾರ್ಗಗಳನ್ನು ಬಿಟ್ಟು ಕತ್ತಲೆಯ ಹಾದಿಗಳಲ್ಲಿ ನಡೆದು,
ಕೆಟ್ಟತನವನ್ನು ಮಾಡುವದಕ್ಕೆ ಸಂತೋಷಪಟ್ಟು ಮಿಥ್ಯಾ ಮೋಸ ೧೪
ಗಳಲ್ಲಿ ಆನಂದಪಟ್ಟು, ತಾವು ಹಾದಿಗಳು ವಕ್ರವಾಗಿ ೧೫
ಸೊಟ್ಟನಾದ ದಾರಿಗಳಲ್ಲಿ ತಪ್ಪಿ ಹೋಗುತ್ತಾರೆ. ಮಾತುಗಳನ್ನು ೧೬
ನುಣ್ಣಗೆ ಮಾಡುವ ಅಪರಾಧಿನಿಯಾದ ಪರಸ್ತ್ರೀಯಿಂದ ನಿನ್ನನ್ನು
ತಪ್ಪಿಸಿ ಬಿಡುತ್ತಾಗಿಯೇ, ಆಕೆಯು ಯೌವನದ ಕಾಂತನನ್ನು ಬಿ ೧೭
ಟ್ಟು ಬಿಟ್ಟು ತನ್ನ ದೇವರ ನಿಯಮವನ್ನು ಮರೆತುಬಿಟ್ಟಳು.
ಸಾಕ್ಷಾತ್ ಆಕೆಯ ಮನೆ ಸಮೀಪವಾಗಿ ಮರಣಕ್ಕೆ ಹಾದಿಗ ೧೮
ಳು ಪ್ರೇತಗಳ ಕಡೆಗೂ ಇಳಿಯುತ್ತವೆ; ಆಕೆಯನ್ನು ಗಮಿಸು ೧೯
ವವರು ಯಾರೂ ಹಿಂದಿರುಗಿ ಬರುತ್ತಲ್ಲು ಜೀವದ ಹಾದಿಗಳಿಗೆ ಮು
ಟ್ಟುವದಿಲ್ಲ. ಇಷ್ಟು— ಸಾತ್ವಿಕರ ಮಾರ್ಗದಲ್ಲಿ ನೀನು ನಡೆದು ೨೦

೨೧. ನೀತಿವಂತರು ಭೂಮಿಗಳನ್ನು ಕೈಕೊಳ್ಳುವರು; ನಿಷ್ಕಳಂಕರಾಗಿಯೇ ನಡೆಯುವವರು
ಭೂಮಿಯಲ್ಲಿ ವಾಸಮಾಡುವವರು ಸಂಪೂರ್ಣರು ಅದರಲ್ಲಿ ಉಳಿ-
೨೨. ಯುವರು. ಆದರೆ ದುಷ್ಟರು ದೇಶದಿಂದ ಛೇದಿಸಲ್ಪಡುವರು.
(ಕೀರ್ತ. ೩೭, ೨೮) ದ್ರೋಹಗಾರರು (ವಂಚಿಸುವವರು) ಅದರಿಂದ ಕಿ-
ತ್ತು ಹಾಕಲ್ಪಡುವರು.

೩. ಸಂಧಿ.

ಜ್ಞಾನದ ಮಹಾಫಲ, ಭಾಗ್ಯವು ಬೇಕಾದರೆ, (೫)
ಯೆಹೋವನಲ್ಲಿ ಭರವಸವಿಟ್ಟು (೧೧) ಶಿಕ್ಷೆ ತಾಳು (೧೨)
ನಿತ್ಯಜೀವವನ್ನು ಹುಡುಕಬೇಕು (೧೮) ಲೋಕ-
ವನ್ನು ನಿರ್ಮಿಸಿದ ಜ್ಞಾನವು ಭಕ್ತನನ್ನು ಕಾಪಾಡು-
ವದು (೨೬) ಪ್ರೀತಿಯನ್ನು ಮಾಡು (೨೭) ದ್ರೋಹಿಗಳಲ್ಲಿ
ಹೊಟ್ಟೆಕಿಚ್ಚು ಪಡಬಾರದು.

೧. ೧ ನನ್ನ ಮಗನೇ ನನ್ನ ಧರ್ಮೋಪದೇಶವನ್ನು ಮರೆಯಬೇಡ
೨. ನಿನ್ನ ಹೃದಯವು ನನ್ನ ಅಪ್ಪಣೆಗಳನ್ನು ಕಾಪಾಡಲಿ! ಯಾಕಂದರೆ
ಆಯುಷ್ಯಗಳ ದೀರ್ಘಾಯುಷ್ಯವನ್ನೂ ಜೀವವರುಷಗಳನ್ನೂ ಸ-
೩. ಮಾಧಾನವನ್ನೂ ನಿನಗೆ ಕೂಡಿಸುವವು. ದಯವೂ ಸತ್ಯವೂ ನಿ-
ನ್ನನ್ನು ಬಿಡದಿರಲಿ; ನಿನ್ನ ಕೊರಳಿಗೆ ಅವುಗಳನ್ನು ಬಿಗಿದುಕೋ; ಹೃ-
೪. ದಯದ ಹಲಗೆಯ ಮೇಲೆ ಬರೆ, ಹೀಗೆ ನೀನು ದೇವರ ಮತ್ತು ಮನು-
ಷ್ಯರ ದೃಷ್ಟಿಗಳಲ್ಲಿ ಕೃಪೆಯನ್ನೂ ಸುಬುದ್ಧಿಯನ್ನೂ ಕಂಡುಕೊಳ್ಳು
೫. ನೀ. ಯೆಹೋವನಲ್ಲಿ ಪೂರ್ಣ ಹೃದಯದಿಂದ ಭರವಸವಿಡು.

ನಿನ್ನ ಬುದ್ಧಿಯಲ್ಲಿ ಆತುಕೊಳ್ಳಬಾರದು. ನಿನ್ನ ಎಲ್ಲಾ ಮಾರ್ಗ ೬
ಗಳಲ್ಲಿ ಆತನನ್ನು ತಿಳುಕೊಳ್ಳು; ಆತನು ನಿನ್ನ ಹಾದಿಗಳನ್ನು
ನೆಟ್ಟಗೆ ಮಾಡುವನು. ನಿನ್ನ ಕಣ್ಣುಗಳಿಗೆ ನೀನು ಜ್ಞಾನಿಯಾಗದೆ ೭
ಯೆಹೋವನನ್ನು ಭಯಪಟ್ಟು ಕೇಡಿಗೆ ದೂರವಾಗು. ಇದು ನಿನ್ನ ೮
ನಾಭಿಗೆ ಕ್ಷೇಮಕರವಾಗಿ (ಶರೀರಕ್ಕೆ) ಆಗಿಯೂ ನಿನ್ನ ಎಲುಬುಗಳಿಗೆ
ತಂಪಾಗಿಯೂ ಇರುವದು. ನಿನ್ನ ಸಂಪತ್ತಿನಿಂದಲೂ ಎಲ್ಲಾ ಆದಾ ೯
ಯಗಳ ಪ್ರಥಮ ಫಲಗಳಿಂದಲೂ ಯೆಹೋವನನ್ನು ಸನ್ಮಾನಿಸು,
ಹಾಗಾದರೆ ನಿನ್ನ ಕಣಜಗಳು ಪೂರ್ಣವಾಗಿ ತುಂಬುವವು ಗಾಣ ೧೦
ಗಳು ರಸವು ತುಂಬಿ ಹರಿಯುವದು. ನನ್ನ ಮಗನೇ ಯೆಹೋ ೧೧
ವನ ಶಿಕ್ಷೆಗೆ ಅಸಹ್ಯಪಡಬೇಡ ಅವನ ಗದರಿಕೆಗೆ ಬೇಸರ(ಬೇಜಾ
ರಿಸ)ಬೇಡ. ಯಾಕಂದರೆ ಯೆಹೋವನು ಪ್ರೀತಿ ಮಾಡುವ ೧೨
ವನನ್ನೇ ಗದರಿಸುತ್ತಾನೆ ಮೆಚ್ಚುವ ಮಗನನ್ನು ಅಪ್ಪನು ಹಾ
ಗೆ ಮಾಡುವಂತೆ (ಇಬ್ರಿಯ. ೧೨). ಜ್ಞಾನವನ್ನು ಕಂಡು ಹೊಂದಿದ ೧೩
ಮನುಷ್ಯನೂ ವಿವೇಕವನ್ನು ಹೊಂದುವ ಮನುಷ್ಯನೂ ಭಾಗ್ಯ
ವಂತನು! ಅದರ ಲಾಭವು ಬೆಳ್ಳಿಯದಕ್ಕಿಂತಲೂ ಅದರ ಆದಾ ೧೪
ಯವು ಅಪರಂಜಿಗಿಂತಲೂ ಒಳ್ಳೇದಾದದ್ದೆಯಲ್ಲಾ. ಮುತ್ತುಗ ೧೫
ಳಿಗಿಂತ ಅದು ಅಮೂಲ್ಯವಾಗಿರುವದು ನಿನ್ನ ಎಲ್ಲಾ ಶ್ರೇಷ್ಠವಾದ
ಮಣಿಗಳೂ ಸಮಾನವಾಗಲಿಕ್ಕಿಲ್ಲ (ಯೋಬ ೨೮, ೧೮.) ದೀರ್ಘಾಯುಷ್ಯ ೧೬
ವು ಅದರ ಬಲಗೈಯಲ್ಲಿಯೂ ಧನ ಘನ ಸಂಪತ್ತು ಎಡಗೈಯಲ್ಲಿ
ಯೂ ಅವೆ. ಅದರ ಮಾರ್ಗಗಳು ಸಂತೋಷವಾದ ಮಾರ್ಗಗಳು ೧೭

5

೧೮. ಆಕೆಯ ಹಾದಿಗಳು ಪ್ರಾಣ ಸಮಾಧಾನವೂ ಆಗಿದೆ; ತನ್ನನ್ನು ಹಿ
ಡಿಯುವವರಿಗೆ ಆಕೆಯು ಜೀವ ವೃಕ್ಷವೇ. ಆಕೆಯನ್ನು ಸಂಗ್ರಹಿ
ಸುವವನೇ ಧನ್ಯನು.
೧೯. ಯೆಹೋವನು ಜ್ಞಾನದಿಂದ ಭೂಮಿಯನ್ನು ಸ್ಥಾಪಿಸಿ ವಿವೇಕ
೨೦. ದಿಂದ ಸ್ವರ್ಗಗಳನ್ನು ನಿಲ್ಲಿಸಿದನು; ಆತನ ತಿಳುವಳಿಕೆಯಿಂದ ಅಗಾಧಗ
೨೧. ಳು ಒಡೆದವು ಮೇಘಗಳು ಮಂಜನ್ನು ಸುರಿಸುವವು. ನನ್ನ
ಮಗನೇ, ನಿನ್ನ ಕಣ್ಣುಗಳಿಂದ ಅವು ತೊಲಗದಿರಲಿ, [illegible] ಬುದ್ಧಿಗ
೨೨. ಳನ್ನು ಕಾಯುವಾಗ, ನಿನ್ನ ಪ್ರಾಣಕ್ಕೆ ಜೀವವೂ [illegible] ಜೀವವೂ ಆಗುವವು
೨೩. ಗಳು. ಆಗ ನಿನ್ನ ಮಾರ್ಗದಲ್ಲಿ ~~[illegible]~~ ನಿರ್ಭಯವಾಗಿ ನಡೆದಿ
೨೪. ನಿನ್ನ ಕಾಲು (ಎಡವದಷ್ಟು) ತಗಲದಿರಲು, ನೀನು ಮಲಗಿದರೆ ಹೆದರದಿರ
೨೫. ಲು ಮಲಗಿ ಸುಖವಾಗಿ (ಸುಖ) ನಿದ್ರೆ ತೆಗೆಯಲು ಬಹುದು. ಅಕಸ್ಮಾ
ತ್ತಾಗಿ ಬರುವ ಹೆದರಿಕೆಗೂ ದುಷ್ಟರ [illegible] ಬರುವದರಲ್ಲಿಯೂ ಬೆದರ
೨೬. ಬೇಕಾಗಿಲ್ಲ. ಯಾಕಂದರೆ ಯೆಹೋವನು ನಿನ್ನ (ಭ)ರವಸೆಯಾಗಿದ್ದು
ನಿನ್ನ [illegible] ಕಾಲನ್ನು (ಪ)ರುಳಿನಲ್ಲಿ ಸಿಕ್ಕದೆ ಕಾಯುವನು.
೨೭. (ಒಳ್ಳೇದನ್ನು) ಮಾಡಲಿಕ್ಕೆ ನಿನ್ನ ಕೈಗೆ ಸಾಧ್ಯವಾಗುವಲ್ಲಿ ಪಾತ್ರರಾದ
೨೮. ವರಿಂದ ಒಳ್ಳೇದು ಮಾಡದಂತೆ ಹಿಂತೆಗೆಸಬೇಡ. ಇದ್ದಾಗ
ಜೊತೆಗಾರನಿಗೆ [illegible] ಬಾ, ನಾಳೆ ಕೊಡುವೆನೆಂದು ಹೇಳ
೨೯. ಬೇಡ! ಜೊತೆಗಾರನು ನಿರ್ಭಯವಾಗಿ ನಿನ್ನ ಕಡೆಗೆ ವಾಸ ಮಾಡುವಾಗ
೩೦. ಅವನಿಗಾಗಿ ಕೇಡನ್ನು ಯೋಚಿಸಿ ಮಾಡಬೇಡ! ನಿನಗೆ ಕೇಡನ್ನು ಮಾ
ಡದಿದ್ದರೆ ಮನುಷ್ಯನ ಸಂಗಡ [illegible] ಜಗಳ ತೆಗೆಯಬೇಡ!

ಸಾಹಸದ ಮನುಷ್ಯನಲ್ಲಿ ಪ್ರೀತಿ ಪಡಬೇಡ ಆತನ ಮಾರ್ಗಗಳಿಂದಲೂ ೩೧
ದರೂ ಆದುಕೊಳ್ಳಬಾರದು. ಯಾಕಂದರೆ ವಕ್ರ ಮಾರ್ಗಿಯು ೩೨
ಯೆಹೋವನಿಗೆ ಅಸಹ್ಯವೇ. ಆತನ ರಹಸ್ಯವು ನೀತಿವಂತರ ಸಂಗ
ಡಲಿದೆ. ದುಷ್ಟನ ಮನೆಯಲ್ಲಿ ಯೆಹೋವನ ಶಾಪವು (ಇದೆ) ನೀ ೩೩
ತಿವಂತರ ಬಿಡಾರವನ್ನು ಆತನು ಆಶೀರ್ವದಿಸುವನು. ಆದರೆ ೩೪
ಕುಚೋದ್ಯಗಾರರನ್ನು ಆತನು ಹಾಸ್ಯ ಮಾಡುವನು ದೀನರಿಗೆ ೩
(ಸಾಧು ಜನರಿಗೆ) ದಯಪಾಲಿಸುವನು. ಜ್ಞಾನಿಗಳು ಕೀರ್ತಿಯನ್ನು ಸ್ವಾ ೩೫
ಧೀನ ಮಾಡಿಕೊಳ್ಳುವರು ಆದರೆ ಬುದ್ಧಿಹೀನರು ಅವಮಾನವನ್ನು
ಆದಾಯ ಮಾಡಿಕೊಳ್ಳುವರು.

೪ ಸಂಧಿ. (-೩; ೬)

ತಂದೆಯ ಮಾತಿಗೆ ಲಕ್ಷ್ಯಕೊಟ್ಟು ಜ್ಞಾನಾಭ್ಯಾಸವನ್ನು
ಸರ್ವೋತ್ತಮವಾಗಿ ಹುಡುಕಿ (೧೦) ದುಷ್ಟಮಾರ್ಗಗಾರರ ಸಂಸರ್ಗವ
ನ್ನು ತ್ಯಜಿಸಿ ಬಿಟ್ಟು (೨೦) ಹೃದಯವನ್ನು ಸತ್ಯದಲ್ಲಿ
ಕಾಪಾಡಿ ~~ಹೃದಯವನ್ನು ಸ~~ (೩; ೧.) ಯೌವನದಲ್ಲಿ
ಎಚ್ಚರಿಕೆಯನ್ನು ತಕ್ಕೊಳ್ಳಬೇಕು.

ಎಲೈ ಮಕ್ಕಳಿರಾ, ಅಪ್ಪನ ಶಿಕ್ಷೆಯನ್ನು ಕೇಳಿ ಬುದ್ಧಿ ಕಲಿಯುವುದಕ್ಕೆ ೧
ಲಕ್ಷ್ಯಕೊಡಿರಿ! ನಿಮಗೆ ಒಳ್ಳೇ ಕಲಿಕೆಯನ್ನು ಕೊಡುವಾಗ ನನ್ನ ೨
ಧರ್ಮೋಪದೇಶವನ್ನು ಬಿಟ್ಟು ಬಿಡಬೇಡಿರಿ! ನಾನು ಸಹ ನನ್ನ ೩
ಅಪ್ಪನಿಗೆ ಮಗನೂ ಕೋಮಲನೂ ಮುಂದೆ ತಾಯಿಗೆ ಮುದ್ದು ಮಗನೂ
ಆಗಿದ್ದೆನು. ಆತನು ನನಗೆ ಬೋಧಿಸಿದ್ದು: ನಿನ್ನ ಹೃದಯವು ನನ್ನ ೪

ನುಡಿಗಳನ್ನು ಹೃದಯದಲ್ಲಿ ಹಿಡಿದುಕೋ; ನನ್ನ ಅಪ್ಪಣೆಗಳನ್ನು ಕೈಕೊಂಡು ಬದುಕು.

೫. ಸೆ! ಜ್ಞಾನವನ್ನು ಪಡೆ, ಬುದ್ಧಿಯನ್ನು ಪಡೆ, ನನ್ನ ಬಾಯಿಯ ಮಾತುಗಳನ್ನು [illegible]

೬. [illegible] ತಾಳಬೇಡ! ಅದನ್ನು [illegible] ಬಿಟ್ಟುಬಿಡದಿರು, ಆಗ ಅದು ನಿನ್ನನ್ನು ಕಾಪಾಡುವದು, ಅದನ್ನು ಒಲಿ [illegible] ಆಗ

೭. ಅದು ನಿನ್ನನ್ನು ಕಾಯುವದು. ಜ್ಞಾನವೇ [illegible] ವೇನೆಂದರೆ, ಜ್ಞಾನವನ್ನು ಪಡೆ, ನಿನ್ನ ಎಲ್ಲಾ ಸಂಪತ್ತಿನಿಂದ ಬುದ್ಧಿಯನ್ನು ಪಡೆ.

೮. ದುಕೊ [illegible] ಅದನ್ನು ವಿಶ್ವಾಸಿಸು! ಅದನ್ನು [illegible] ಆಗ ಅದು ನಿನ್ನನ್ನು ಘನವಡೆ [illegible] ವದು, ಅದನ್ನು [illegible] ಅಪ್ಪಿಕೊಂಡರೆ [illegible]

೯. [illegible] ನಿನ್ನನ್ನು ಘನ ಪಡಿಸುವದು, ನಿನ್ನ ತಲೆಗೆ [illegible] ಲೆಯನ್ನು [illegible] ಅಲಂಕಾರ ಕಿರೀಟವನ್ನು [illegible] ಕೊಡುವದು — ಎಂದೆ ಹೇಳುತ್ತಾ.

೧೦. ನನ್ನ ಮಗನೇ ಕೇಳು ನನ್ನ ಮಾತುಗಳನ್ನು ಕೈಕೊ [illegible] ವರ್ಷಗಳು ನಿನಗೆ

೧೧. ಹೆಚ್ಚುವ ಹಾಗೆಯೇ ಜ್ಞಾನ ಮಾರ್ಗದಲ್ಲಿ ನಾನು ನಿನ್ನನ್ನು ಬೋಧಿಸಿ ನೆಟ್ಟಗಾದ

೧೨. ಹಾದಿಗಳಲ್ಲಿ ನಿನ್ನನ್ನು ನಡೆಸಿದೆನು. ನಡೆಯುವಾಗ ನಿನ್ನ

೧೩. ನಡೆ [illegible] ಇಲ್ಲ; ಓಡುವಾಗ ಎಡವಲಿಕ್ಕಿಲ್ಲ ಸಹ. [illegible] ತಾಳಗದಿರು [illegible] ಬಿಡದಿರು, ನಿನ್ನ ಜೀವವು [illegible] ಅದನ್ನು ಕಾಯ

೧೪. ಕಾ. ಕೆಡುಕರ ಹಾದಿಯಲ್ಲಿ ಹೋಗದಿರು [illegible] ಮಾರ್ಗದಲ್ಲಿ [illegible]

೧೫. [illegible] ಅದನ್ನು ಬಿಟ್ಟು ಬಿಡು ಅದರಲ್ಲಿ ಹಾದು ಹೋಗಬೇಡ ಅದರಲ್ಲಿ

೧೬. [illegible] ಯಾಕಂದರೆ ಕೇಡು ಮಾಡುವದರ ಹೊರತು ಮಲಗಲಿಕ್ಕಿಲ್ಲ ಕೆಡವದಿದ್ದರೆ (ಬೀಳಿಸದಿದ್ದರೆ) ನಿದ್ರಾಹೀನರಾಗುವರು.

ಕೆಟ್ಟತನದ ರೊಟ್ಟಿ ತಿಂದು ಸಾಹಸದ ಮದ್ಯವನ್ನು ಕುಡಿಯುವವರಂತಲೇ. ೧೭
ಆದರೆ ನೀತಿವಂತರ ಹಾದಿಯು ಮಧ್ಯ ಮಧ್ಯಾಹ್ನದ ವರೆಗೂ (ಹೋಗಿ) ೧೮
ಬೆಳಗಿ ಪ್ರಕಾಶವನ್ನು ಹೊಂದುವ ಬೆಳಗಿನ ಹೋಲುವದು; ದುಷ್ಟರ ೧೯
ಮಾರ್ಗವು ಕಾರ್ಗತ್ತಲೆಗೆ ಸಮವಾಗಿವದರಲ್ಲಿ ಎಡವುವರು ಎಂತ ಅವರು ಅರಿ
ಯರು.

ನನ್ನ ಮಗನೇ ನನ್ನ ಮಾತುಗಳಿಗೆ ಲಕ್ಷ್ಯಕೊಟ್ಟು ನುಡಿಗಳಿಗೆ ಕಿವಿಕೊಡು! ೨೦
ನಿನ್ನ ಕಣ್ಣುಗಳಿಂದ ಅವು ತಪ್ಪಿ ಹೋಗಲು ಬಾರದು ಹೃದಯದ ಮಧ್ಯದಲ್ಲಿ ೨೧
ಅವುಗಳನ್ನು ಕಾಯಿ! ಅವು ಕಂಡುಕೊಳ್ಳುವವರಿಗೆ ಜೀವವೂ ಅವರ ಸಕಲ ೨೨
ಶರೀರಕ್ಕೆ ಚಿಕಿತ್ಸೆಯೂ ಆಗಿದೆ ಸರ್ವ (ಬೇರೆ) ಎಲ್ಲಾ ಕಾವಲಿಗಿಂತ ನಿನ್ನ ೨೩
ಹೃದಯವನ್ನು ಕಾಯಿ ಯಾಕಂದರೆ ಜೀವದ ಹೊರಡುವಿಕೆಗಳು ಅದರಿಂದ ೨೪
ಆಗಿವೆ. ಬಾಯ ವಕ್ರತೆಯನ್ನು ನಿನ್ನಿಂದ ತೊಲಗಿಸಿ ತುಟಿಗಳ ದಗಲುಬಾ ೨೪
ಜಿಯನ್ನು ಅಗಲಿಸಿಬಿಡು! ನಿನ್ನ ಕಣ್ಣುಗಳು ನೆಟ್ಟಗೆ ನೋಡಲಿ ರೆಪ್ಪೆಗಳು ೨೫
ನಿನ್ನ ಮುಂದಾಗಿರಲಿ, ಕಾಲು ಹೆಜ್ಜೆಯನ್ನು ತೂಗಿ ನೋಡಿ ನಿನ್ನ ಮಾರ್ಗಗಳೆಲ್ಲಾ ೨೬
ಸ್ಥಿರ, ಎಡ ಬಲಕ್ಕೆ ನೀನು ತಿರುಗದೆ ಕೇಡಿನಿಂದ ನಿನ್ನ ಕಾಲನ್ನು ತೊಲಗಿಸು! ೨೭

೫. ಸಂಧಿ.

(೨) ವ್ಯಭಿಚಾರಣಿಯಿಂದ ಆಗುವ ಗಂಡಾಂತ್ರವನ್ನು
ತೊಲಗಿ (೧೪) ಸ್ವಂತ ಹೆಂಡತಿಗೆ ಅಂಟಿಕೊಂಡು (೨೧)
ದೇವರ ನೀತಿಯನ್ನು ಕಾದುಕೊಳ್ಳಬೇಕು

ನನ್ನ ಮಗನೆ ಜ್ಞಾನವನ್ನು ಲಕ್ಷ್ಯಮಾಡಿ ನನ್ನ ವಿವೇಕಕ್ಕೆ ಕಿವಿಗೊಡು, ೧
ಒಳ್ಳೇ ಯೋಚನೆಗಳನ್ನು ಕಾಪಾಡಿ ನಿನ್ನ ಅಧರಗಳು ಅರುಹನ್ನು ಕಾಯಲಿ ೨

೩. ಅಯ್ಯೋ! ಆದರೆ ಪರಸ್ತ್ರೀಯ ಅಧರಗಳು ಮಧು ಸುರಿಸಿ ಎಣ್ಣೆಗಿಂ-
೪. ತ ಆಕೆಯ ಅಂಗಳು ನುಣುಪಾಗಿದ್ದರೂ, ಆಕೆಯ ಅಂತ್ಯವು ಮಾಚಿ-
ಪತ್ರೆಯ ಹಾಗೆ ಕಹಿಯಾಗಿಯೂ ಇಬ್ಬಾಯಿ ಕತ್ತಿಯ ಹಾಗೆ ಹರಿತವಾಗಿಯೂ
೫. ಇದೆಯಲ್ಲಾ. ಆಕೆಯ ಕಾಲುಗಳು ಮರಣದ ಕಡೆಗೆ ಇಳಿಯುತ್ತವೆ ಆಕೆಯ
೬. ಹಾದಿಗಳು ಪಾತಾಳವನ್ನು ಅವಲಂಬಿಸುತ್ತವೆ. ಜೀವದ ಹಾದಿಯನ್ನು ಆಕೆ
ಗಮನಿಸದ ಹಾಗೆ ಆಕೆಯ ಗಮನವು ತಿಳಿಯದೆ ~~[illegible]~~ ಮಾರ್ಗ ಚಲಿಸುತ್ತವೆ

೭. ಹೀಗಾದರೆ ಮಕ್ಕಳೇ ನನ್ನನ್ನು ಕೇಳಿರಿ ನನ್ನ ಬಾಯಿ ನುಡಿಗಳನ್ನು
೮. ಬಿಡಬೇಡಿರಿ! ನಿನ್ನ ಮಾರ್ಗವನ್ನು ಆಕೆಯ ಬಳಿಯಿಂದ ಅಗಲಿಸಿ ಆ-
೯. ಕೆಯ ಮನೆ ಬಾಗಿಲಿಗೆ ಹತ್ತಿರ ಬಾರದೆ ಹೋಗು, ನಿನ್ನ ಘನವನ್ನು ಬೇರೆ
೧೦. ಯವರಿಗೂ ನಿನ್ನ ವರುಷಗಳನ್ನು ಕ್ರೂರನಿಗೂ ಕೊಡದಂತೆ; ಅನ್ಯರಿಗೆ ನಿನ್ನ
ಸತ್ವದಿಂದಲೂ ಪರನ ಮನೆಯಲ್ಲಿ ನೀನು ಕಷ್ಟ ಮಾಡುವದರಿಂದಲೂ ತೃಪ್ತಿ
೧೧. ಯಾಗದ ಹಾಗೆಯೇ. ಇಲ್ಲದಿದ್ದರೆ ನಿನ್ನ ಮಾಂಸವೂ ಶರೀರವೂ ಕ್ಷಯಿಸಿ
ಹೋದ ಮೇಲೆ ನಿನ್ನ ಅಂತ್ಯದಲ್ಲಿ ನೀನು ನಿಟ್ಟುಸಿರು ಬಿಟ್ಟು ಹೇ-
೧೨. ಳುವದೇನಂದರೆ: ಅಯ್ಯೋ ನಾನು ಶಿಕ್ಷೆಯನ್ನು ಹಗೆ ಮಾಡಿ ಗದರಿಕೆಯನ್ನು
೧೩. ನನ್ನ ಹೃದಯವು ಅಸಹ್ಯಮಾಡಿದ್ದು ನನಗೆ ಬೋಧಿಸುವವರ ಶಬ್ದ-
ವನ್ನು ಕೇಳದೆ ಕಲಿಸುವವರಿಗೆ ಕಿವಿ ಕೊಡದೆ ಹೋದದ್ದು ಹೇಗೆ!
೧೪. ಸುಮಾರು ನಾನು ಎಲ್ಲಾ ಕೇಡಿನಲ್ಲಿ ಆದೆನು ಸಭಾಸಂಘದ ಮಧ್ಯದಲ್ಲಿಯೇ!
ಎಂಬುದಕ್ಕೆ ಕಾರಣವಾದೀತಲ್ಲಾ.

೧೫. ನಿನ್ನ ಹೊಂಡದಿಂದಲೇ ನೀರು ಕುಡಿ ಸ್ವಂತ ಬಾವಿಯ ಮಧ್ಯದಲ್ಲಿ
ಊರುವದನ್ನೇ! ನಿನ್ನ ಬುಗ್ಗೆಗಳು ಹೊರಗೆ ಹೊರಿಯಲಿ ನೀರಿನ ಹೊಳೆ

ನಾದ ಉಟೆಗಳು ಬೀದಿಗಳಲ್ಲಿ (ಹೊರಿಗುಲಿ). ಅವು ನಿನಗೆ ಮಾತ್ರವಾಗಲಿ ೧೭
ಪರರ ಸಂಗಡ ಆಗಬಾರದು! ನಿನ್ನ ಬುಗ್ಗೆಯು ಆಶೀರ್ವದಿಸಲ್ಪಡಲಿ ನಿ ೧೮
ನ್ನ ಯೌವನದ ಹೆಂಡತಿಯಲ್ಲಿ ಸಂತೋಷಪಡು! ಪ್ರೀತಿಕರವಾದ ಜಿಂಕೆ- ೧೯
ಯು ಲಾವಣ್ಯವಾದ ಹುಲ್ಲೆಯು ಆಕೆಯ ಮೊಲೆಗಳು ಯಾವಾಗಲೂ ನಿ
ನ್ನನ್ನು ತಣಿಸಲಿ! ಆಕೆಯ ಪ್ರೀತಿಯಲ್ಲಿ ನಿತ್ಯವಾಗಲೂ ಮರುಳಾಗಿರು.
ಹೀಗಾದರೆ ಪರಸ್ತ್ರೀಯಲ್ಲಿ ಮರುಳಾಗಲಿಕ್ಕೂ ಅನ್ಯಳ ಎದೆಯನ್ನು ಅಪ್ಪಿ ೨೦
ಕೊಳ್ಳಲಿಕ್ಕೂ ನನ್ನ ಮಗನೇ ಏನು? ಒಬ್ಬೊಬ್ಬನ ಹಾದಿಗಳು ಯೆಹೋ ೨೧
ವನ ಕಣ್ಣುಗಳ ಮುಂದೆ ಇರುತ್ತವೆಯಲ್ಲಾ; ಅವನ ಹಾದಿಗಳನ್ನೆಲ್ಲಾ
ಆತನು ತೂಗಿ ನೋಡುತ್ತಾನೆ. ಸ್ವಂತ ಅಕ್ರಮಗಳು ದುಷ್ಟನನ್ನು ಹಿಡಿ- ೨೨
ಯುವವು ಸ್ವಂತ ಪಾಪದ ಪಾಶಗಳಲ್ಲಿ ಆತನು ಸಿಕ್ಕುವನು. ಶಿಕ್ಷೆ ಇಲ್ಲದ
ರಿಂದ ತಾನೇ ಸಾಯುವನು ಮೂರ್ಖತ್ವದ ಬಾಹುಳ್ಯದಿಂದ ತಪ್ಪಿ ಹೋಗು
ವನಷ್ಟೇ.

೬. ಸಂಧಿ.

ಜಾಮೀನುದಾರನಾದಿಯೂ (೫) ಮೈಗಳ್ಳನೂ (೧೧.) ಬಾಡಿ
ಗಾರನೂ ಆಗಬಾರದು (೧೯) ಸಪ್ತ ವ್ಯಸನಗಳು ಯಾವವು
(೨೦) ತಂದೆಗಳಿಗೆ ವಿಧೇಯನಾಗಿ ವ್ಯಭಿಚಾರತ್ವವನ್ನು
ಬಿಟ್ಟು ಬಿಡಬೇಕು.

ನನ್ನ ಮಗನೇ ಜಾಮೀನುಗಾರನಿಗಾಗಿ ನೀನು ಮಿತ್ರನಾದ ಹೊರ ೧
ಪರನಿಗಾಗಿ ಕೈ ಹೊಡೆದರೆ, ನಿನ್ನ ಬಾಯ ಮಾತುಗಳಲ್ಲಿ ನೀನು ಸಿಕ್ಕಿದ್ದೀಯ ೨
ಮಾತುಗಳಲ್ಲಿ ಹಿಡಿಯಲ್ಪಟ್ಟಿದ್ದೀ, ಹಾಗಾದರೆ ~~ಇದನ್ನು~~ ಈದನ್ನು ಮಾಡು,

೩. ನಿನ್ನ ಮಗನೇ ಜೊತೆಗಾರನ ಕೈಯಲ್ಲಿ ಸಿಕ್ಕಿರುವದರಿಂದ ನಿನ್ನನ್ನು ನಿನ್ನೇ
ಬಿಡಿಸಿಕೋ! ಅವಸರ ಪಟ್ಟು ಹೋಗಿ ಜೊತೆಗಾರನ ಸಂಗಡ ಕಾಡಾಡಿ-
೪. ಕೋ! ಕಣ್ಣುಗಳಿಗೆ ನಿದ್ರೆಯನ್ನೂ ರೆಪ್ಪೆಗಳಿಗೆ ತೂಕಡಿಕೆಯನ್ನೂ ಕೊಡದಿರು,
೫. ಜಿಂಕೆಯು ಕೈತೋಡಿಯಿಂದಲೂ ಗುಬ್ಬಿಯು ಬೇಡನ ಕೈಯಿಂದಲೂ
೬. ಎಂಬ ಹಾಗೆ ನಿನ್ನನ್ನು ಬಿಡಿಸಿಕೋ! ಮೈಗಳ್ಳನೇ ಇರುವೆಯ ಬಳಿಗೆ ಹೋಗಿ
೭. ಅದರ ಮಾರ್ಗಗಳನ್ನು ನೋಡಿ ಜ್ಞಾನಿಯಾಗಿರು! ಅಧಿಕಾರಿಯೂ ಮೇಲು
೮. ವಿಚಾರಕನೂ ದೊರೆಯೂ ಇಲ್ಲ. ಅದರೆ ಬೇಸಿಗೆಯಲ್ಲಿ ತನ್ನ ಆಹಾರ
ವನ್ನು ಸಂಪಾದಿಸಿ ಸುಗ್ಗೀಕಾಲದಲ್ಲಿ ಆಹಾರವನ್ನು ಕೂಡಿಸಿಡುತ್ತದೆ.
೯. ಎಷ್ಟು ವರೆಗೆ ಮೈಗಳ್ಳನೇ ನೀನು ಮಲಗುವಿ? ನಿದ್ರೆಯಿಂದ ಯಾವಾಗ
೧೦. ಏಳುವಿ? ಇನ್ನೂ ಸ್ವಲ್ಪ ನಿದ್ರೆ ಸ್ವಲ್ಪ ತೂಕಡಿಕೆ ಸ್ವಲ್ಪ ಕೈಕಟ್ಟಿ ಮಲಗಿ-
೧೧. ಕೋ! ಆ ಮೇಲೆ ಕಳ್ಳನ ಹಾಗೆ ನಿನ್ನ ದಾರಿದ್ರ್ಯವೂ ಆಯುಧಧಾರಿ-
ಯಾದವನ ಹಾಗೆ ಕೊರತೆಯೂ ನಿನ್ನ ಕಡೆಗೆ ಬರುವವು.
೧೨. (ತೊಂದರೆಯ ಮನುಷ್ಯನಾದ) ~~ದು~~ ದುಷ್ಟ ಪುರುಷನು ಬಾಯ ವಕ್ರ-
೧೩. ತೆಯಲ್ಲಿ ನಡೆಯುವವನೂ, ಕಣ್ಣು ಸಂಜ್ಞೆ ಮಾಡುವವನೂ, ಕಾಲಿನಿಂದ
~~೧೪~~ ಮಾತಾಡುವವನೂ (ಬೆರಳುಗಳಿಂದ ಸೂಚಿಸುವವನೂ ~~ಆಗಿದ್ದಾನೆ~~) ಸನ್ನೆ
೧೪. ಮಾಡುವವನೂ ಆಗಿದ್ದಾನೆ. ಹೃದಯದಲ್ಲಿ ವಕ್ರತೆ ಉಳ್ಳವನಾಗಿ ಯಾವಾಗಲೂ ಕೇ-
೧೫. ಡನ್ನು ಯೋಚಿಸಿ ಕಲಹಗಳನ್ನು ಕಲ್ಪಿಸುತ್ತಾನೆ. ಆದ್ದರಿಂದ
ಅವನ ಆಪತ್ತು ಫಕ್ಕನೆ ಬರುವದು ಉಪಶಮನವಿಲ್ಲದೆ ಕ್ಷಣದಲ್ಲಿ
ಜಜ್ಜಲ್ಪಡುವನು. ಯೆಹೋವನು ಹಗೆ ಮಾಡುವ ಆರರೂ ಅವನ ಅಂತ-
ರಂಗಕ್ಕೆ ಹೇಸುವ ಏಳೂ ಯಾವವೆಂದರೆ ಗರ್ವವಾದ ಕಣ್ಣುಗಳು

ಮೋಸದ ನಾಲಿಗೆ, ನಿರ್ದೋಷ ರಕ್ತವನ್ನು ಚೆಲ್ಲುವ ಕೈಗಳು, ಕ್ರೂರತನದ= ಅಲ-
=(ಅಕ್ರಮದ) ಯೋಚನೆಗಳನ್ನು ಹೊಂಚಿಕೆ ಮಾಡುವ ಹೃದಯ, ಕೇಡಿಗೆ
ತ್ವರೆಪಟ್ಟು ಓಡುವ ಕಾಲುಗಳು, ಸುಳ್ಳು ಸಾಕ್ಷಿಯಾಗಿ ಕಪಟಗಳನ್ನು ಊದು- ೧೮
ರುವವನು, ಸಹೋದರರ ಮಧ್ಯದಲ್ಲಿ ಜಗಳಗಳನ್ನು ಕಲ್ಪಿಸುವವ
ನು ಸಹ. ೧೯

ನನ್ನ ಮಗನೇ, ನಿನ್ನ ತಂದೆಯ ಆಜ್ಞೆಯನ್ನು ಕಾಪಾಡು ತಾಯಿಯ ೨೦
ಧರ್ಮೋಪದೇಶವನ್ನು ತ್ಯಜಿಸಬೇಡ =(ಹೋಗಿ ಬಿಡಬೇಡ). ಅವುಗ ೨೧
ಳನ್ನು ನಿತ್ಯ ನಿನ್ನ ಹೃದಯದ ಮೇಲೆ ಕಟ್ಟು; ಕೊರಳಿಗೆ ಬಿಗಿದುಕೋ!
ನೀನು ತಿರುಗಾಡುವಾಗ ಅದು ನಿನ್ನನ್ನು ನಡಿಸುವದು ಮಲಗಲು ನಿನ್ನನ್ನು ೨೨
ಕಾಯುವದು ಎಚ್ಚರುವಾಗ ನಿನ್ನ ಸಂಗಡ ಮಾತಾಡುವದು. ಯಾಕಂದರೆ ೨೩
ಆಜ್ಞೆಯು ದೀಪವು, ಧರ್ಮೋಪದೇಶವು ಬೆಳಕು; ಶಿಕ್ಷಾರ್ಥ ಶಿಕ್ಷೆಯ
ಗದರಿಕೆಗಳು ಜೀವದ ಮಾರ್ಗವಾಗಿದೆ; ಪಾತಕಿಯಳಿಂದ ನಿನ್ನನ್ನು ೨೪
ಕಾಯುವ ಹಾಗೆಯೂ, ನಾಲಿಗೆಯನ್ನು ನುಣ್ಣಗೆ ಮಾಡುವ ಪರಸ್ತ್ರೀ
ಯಿಂದಲೇ. ಆಕೆಯ ಸೌಂದರ್ಯವನ್ನು ಹೃದಯದಿಂದ ಆಶಿಸಬೇಡ ೨೫
ರೆಪ್ಪೆಯಿಂದ ಆಕೆಯು ನಿನ್ನನ್ನು ಸ್ವಾಧೀನ ಮಾಡಿಕೊಳ್ಳದಿರಲಿ. ೨೬
ಯಾಕಂದರೆ ವೇಶ್ಯಾಸ್ತ್ರೀಯ ನಿಮಿತ್ತವಾಗಿ ರೊಟ್ಟಿ ಚೂರು ವರೆಗೆ ತಗ್ಗುವ- ೨೬
ಮತ್ತೆ ತೆರೆಯು =(ಗಂಡನುಳ್ಳ ಹೆಂಡತಿಯು) ಅಮೂಲ್ಯವಾದ ಪ್ರಾಣವನ್ನು
ಬೇಟೆಯಾಡುತ್ತಾಳೆ. ಒಂದು ವೇಳೆ ಬೆಂಕಿಯನ್ನು ಮಡಿಯಲ್ಲಿ ಇಟ್ಟು- ೨೭
ಹಾಕಿ ಯಾವನಿಗಾದರೂ ವಸ್ತ್ರಗಳು ಸುಡದೆ ಇರುವದೋ? ಬೆಂಕಿ ಕೆಂಡ ೨೮
ದ ಮೇಲೆ ಯಾರು ನಡೆದು ಕಾಲು ಸುಡಲಾಗದೆ ಇರುವದು? ಜೊತೆಗಾರನ ೨೯

ಹೆಂಡತಿಯಂನು ಹೊಂದುವವನು ಹೀಗೆಯೇ. ಅವಳಂನು ಮುಟ್ಟುವ
೩೦. ವರು ಯಾರೂ ನಿರ್ದೋಷಿಯಾಗಿ ಹೋಗನು. ಹಸಿದು ಹೋದವನು
ತಣಿಸಲಿಕ್ಕಾಗಿ ಮಾತ್ರ ಕದ್ದರೆ ಕಳ್ಳನನ್ನು ಉಪೇಕ್ಷೆ ಮಾಡುವದಿಲ್ಲವಲ್ಲಾ;
೩೧. ಸಿಕ್ಕಿದರೆ ಅವನು ಏಳ್ಮಡಿ ಸಲ್ಲಿಸಲಾಪನು. ಮನೆ ಸಾಮಗ್ರಿಗಳನ್ನೆಲ್ಲಾ ಕೊಡ-
೩೨. ಲಾಪನು. (ಪರ) ಸ್ತ್ರೀಯ ಕೂಡ ವ್ಯಭಿಚಾರ ಮಾಡುವವನು ಬುದ್ಧಿಹೀ
೩೩. ನನೇ. ಆತ್ಮಹಿಂಸಕನಾಗಿ ಅದನ್ನು ಮಾಡುವನು. ಏಟೂ ಮಾನಭಂಗವೂ ಅವ
ನಿಗೆ ಸಿಗುವವು. ಅವನ ನಿಂದೆಯು ಮಾಜಲಿಕ್ಕಿಲ್ಲ ಸರಿ. ಯಾಕಂದರೆ ಪ್ರೇಮರೋಷ (ಗಂಡ
೩೪. ನಿಗೆ) ಉಗ್ರವಾಗಿದೆ. (ಪ್ರತಿಕಾರಾದ ಸಂಪತ್ತಿನಲ್ಲಿ ಆತನು ಉಳಿಸ ಸಲ
ಕ್ಕಿಲ್ಲ; ಪರಿಹಾರ (ದ್ರವ್ಯ) ವನ್ನಾದರೂ ಅಂಗೀಕರಿಸಲಿಕ್ಕಿಲ್ಲ; ದಾನಾದಿಯು (ಬಹಳ)
ಹೆಚ್ಚಾದರೂ ಸುಖ ಪಡಲಿಕ್ಕಿಲ್ಲ.

೭. ಸಂಧಿ.

ಜ್ಞಾನವನ್ನು ಆದುಕೊಂಡು (೬) ಹಾದರದವಳಂನು
ವಶೀಕರಣ ಮಾಡುವ ಪರಸ್ತ್ರೀಯಂನು ತ್ಯಜಿಸಿದರೆ (೨೪.)
ದೊಡ್ಡ ರಕ್ಷಣೆಯು.

೧. ನಂನ ಮಗನೇ ನಂನ ನುಡಿಗಳನ್ನು ಕಾಯು ನಂನ ಆಜ್ಞೆಗಳಂನು
೨. ನಿಂನಲ್ಲಿ ಮುಚ್ಚಿಡು! ನಂನ ಅಪ್ಪಣೆಗಳಂನು ಕಾಯುಕೊಂಡು ಬದುಕು,
೩. ಕಂಣು ಗೊಂಬೆಯಂತೆ ನಂನ ಧರ್ಮೋಪದೇಶವನ್ನು (ಕಾಯು)! ಅವುಗ
೪. ಳಂನು ಬೆರಳುಗಳಿಗೆ ಕಟ್ಟಿಸಿ ಹೃದಯದ ಹಲಗೆಯ ಮೇಲೆ ಬರೆ. ಜ್ಞಾನ
ಕ್ಕೆ ನೀನೇ ನಂನ ಸಹೋದರಿ ಎಂದು ಹೇಳು ವಿವೇಕಕ್ಕೆ ನಂನ ಬಂಧುಗಳು
೫. ಎಂದು ಕರೆ. ನುಡಿಗಳಂನು ನುಣುಪು ಮಾಡುವ ಅಪರಾಧಿನಿಯಾದ ಪರ

ಶ್ರೀಯೆಹೋವ ನಿಂನಂನು ಕಾಯಲಿಕ್ಕಾಗಿಯೇ (೨, ೧೬)!

. ಯಾಕಂದರೆ ಮನೆಗೆ ಶಿಬಿರ ಯಜ್ಞಗಳ ನಂನ ಬಾಲಾಂತರದಾಗ್ಗಿನಿಂದ ೬.
ಕೈಗೆ ನಾಗಡಲು, ಅಷ್ಟರಲ್ಲಿ ಬಲ್ಲನಂನು ತಂದೆನು ಬುದ್ಧಿ ಹೀನನಾದ ೭.
ಹರೇದವನಂನು ಮಕ್ಕಳ್ಗೆ (ನಿಲ್ಲುತ್ತಿರುವಾಗ) ಕಿಗ್ಗಾಂತೆನು. ಅವಾಕನು ೮.
ಮೂಳೆನು ಪ್ರತಿರ ಬೀದಿಯಲ್ಲಿ ಹೋದು ಅವಳ ಮನೆಯ ಹಾದಿಗೆ
ಹೋಗಾಯೆಂದಾಡು (ಹೋಲು) ತ್ತಾನೆ, ಹಗಲು ನೇರುವ ಹೊತ್ತು ಸಂಜೆಯಲ್ಲಿ ೯.
ರಾತ್ರಿ ಕತ್ತಲೆ ಹೆಚ್ಚುವಾಗ. ಅಗಾ. ಸೂಳೆಯ ದುಸ್ತು ಹಾಕಿದ ಹೃದ ೧೦.
ಯವುಳ್ಳ ಒಬ್ಬ ನಾರಿಯೊಬ್ಬಳು ಅವನಂನು ಎದುರುಗೊಂಡ್ಡಳು. ಕಲಹಕಾರಿ ೧೧.
ಯೂ ಜಗಳಗಂಟಿ ಹಾಗೂ ತಾಳುಗಳಿಗೆ ಮನೆಯಲ್ಲಿ ನಿಲ್ಲವು, ಈಗ ಹೊರಗೆ ೧೨.
ಬೀದಿಗಳು ಈಗ ಬೀದಿಗಳಲ್ಲಿಯೂ ಎಲ್ಲಾ ಮೂಲೆಗಳಲ್ಲಿಯೂ ಹೊಂಚು ಹಾ
ಕುತ್ತಾಳೆ. ಆಕೆಯು ಅವನಂನು ಹಿಡಿದು ಮುದ್ದಾಡಿ ನಾಚಿಕೆಯಿಲ್ಲದೆ ೧೩.
ಲಜ್ಜೆಗೆಟ್ಟು ಮುಖದಿಂದ ಅವನಿಗೆ ಹೇಳಿದ್ದು: ಸಮಾಧಾನದ ಬಲಿಗಳು ನಂನ ೧೪.
ಮೇಲೆ ಇದ್ದವು; ನಂನ ಹರಕೆಗಳಂನು ನಾನು ಇಂದು ಸಲ್ಲಿಸಿದೆನು. ಆದ್ದ ೧೫.
ರಿಂದ ನಿಂನಂನು ಎದುರುಗೊಳ್ಳಲಿಕ್ಕಾಗಿ ನಾನು ಹೊರಟೆನು, ನಿಂನ
ಮುಖವಂನು ಹುಡುಕಲಿಕ್ಕಾಗಿಯೇ, ನಿಂನಂನು ಕಂಡೆನು ಸಹ. ನಂನ ೧೬.
ಮಂಚದ ಮೇಲೆ ಜಮಖಾನ ಹಾಸಿದೆನು. ಐಗುಪ್ತದ ನಾನಾ ಬಣ್ಣದ
ಪಟ್ಟೆಯುಳ್ಳ ಹಾಸುವೆಗಳಂನೇ. ಗುಗ್ಗುಳ ಧೂಪ ಅಗರು ದಾಲ್ಚಿನಿ ಪ ೧೭.
ಟ್ಟೆಯಂನು ಸಿಂಪಿಸಿ ಹಾಸಿಗೆಯ ಮೇಲೆ ಸುರಿಸಿದ್ದೇನೆ. ಬಾ ಬೆಳಗಾಗುವ ೧೮.
ವರೆಗೆ ನಾವು ಪ್ರೇಮದಲ್ಲಿ ಮುಳುಗಿರುವ ಆಲಿಂಗನದಲ್ಲಿ ವಿನೋದಿಸುವ!
ಗಂಡನು ಮನೆಯಲ್ಲಿ ಇಲ್ಲವಲ್ಲ, ದೂರದ ಪಯಣ ಹೋಗಿದ್ದಾನೆ. ಹಣದ ೧೯.

ಸಾಮತಿಗಳು. ೭ನೇ ಸಂಧಿ.

೨೦. ಇವನು ಕೈಯಲ್ಲಿ ಹಣವನ್ನು ತಕ್ಕೊಂಡು ಹೋಗಿದ್ದಾನೆ ಹುಣ್ಣಿಮೆ ದಿನಕ್ಕೆ ತನ
೨೧. ಮನೆಗೆ ಹಿಂದಿರುಗಿ ಬರುವನು. ಹೀಗೆ ಬಹಳ ಕಲಿಸಿ ಆಕೆಯು
ಅವನನು ಬಲಿಸಿ ಅಧರಗಳ ಮಾರ್ದವದಿಂದ ಅವನನು ಅಟ್ಟಿ
೨೨. ದಳು. ಆಕೆಯನು ಹಿಂಬಾಲಿಸುವವನು ಎತ್ತನು ಕೊಯ್ಯು
ವ ಸ್ಥಳಕ್ಕೆ ಹೋಗುವ ಹಾಗೆ, ಮೂರ್ಖನು ಬೇಡಿಯಿಂದ ಬಂಧಿಸಿ
೨೩. ದಂಡನೆಕ್ಕೆ ಹೋಗುವಷ್ಟರಲ್ಲಿ, ಹಕ್ಕಿಯು ಬಲೆಗೆ ಹೋಗುವಂತೆ
ತನ ಪ್ರಾಣವನು ಕುರಿತು ಎಂತ ತಿಳಿಯದೆ ಬಾಣವು ಕರುಳನು ಸೀಳುವ
ವರೆಗೆ ಹೋಗುತ್ತಾನೆ.
೨೪. ಹೀಗಾದರೆ ಮಕ್ಕಳೇ ನಂನಂನು ಕೇಳಿ ನಂನ ಬಾಯಿ ಮಾತುಗ
೨೫. ಳಂನು ಲಕ್ಷ್ಯಮಾಡಿರಿ! ನಿಂನ ಹೃದಯವು ಆಕೆಯ ಹಾದಿಗಳಿಗೆ
೨೬. ತಿರುಗದಿರಲಿ, ಆಕೆಯ ಮಾರ್ಗಗಳಲ್ಲಿ ತಪ್ಪಿಹೋಗದಿರಲಿ! ಯಾಕೆಂದರೆ
ಗಾಯಪಟ್ಟವರನು ಕೆಡಿಸಿದವಳು ಆಕೆಯೇ. ಆಕೆಯು ಕೊಂದ
೨೭. ವರೆಲ್ಲಾ ಬಲಾಢ್ಯರೇ. ಯಾಕೆಂದರೆ ಆಕೆಯ ಮನೆಯು ಸಾವಿನ ಕೋ
ಣೆಗಳಿಗೆ ಇಳಿಯುವ ಪಾತಾಳದ ಹಾದಿಗಳೇ.

೮ನೇ ಸಂಧಿ.

ಜ್ಞಾನವು ಸರ್ವತ್ರ ಎಲ್ಲವರನು ಕರೆಯುವದರಿಂದಲೂ (೧) ಶ್ರೇಷ್ಠವಾದ ಪುರುಷಾರ್ಥಗಳನು ದೊರಕಿಸುವದರಿಂದಲೂ (೨) ಸೃಷ್ಟಿಗಿಂತ ಮುಂಚೆ ಯೆಹೋವನ ಬಳಿಯಲ್ಲಿ ಗೆಳೆಯನಾಗಿ ವಾಸಿಸುವದರಿಂದಲೂ (೩) ಆಕೆಯನು ಅಂಗೀಕರಿಸಬೇಕು.

ಜ್ಞಾನವು ಕರೆಯುತ್ತಾ ವಿವೇಕವು ಶಬ್ದವೆತ್ತುತ್ತಾ ಇರುವದಿಲ್ಲವೋ? ಮಾ ೧
ರ್ಗದ ಪಕ್ಕದ ಮೇಡುಗಳ ಮೇಲೆಯೂ ಹಾದಿಗಳು ಕೂಡುವಲ್ಲಿಯೂ ಆ ೨
ಕೆಯು ನಿಂತುಕೊಂಡು, ನಗರ ಬಾಯಿಲದ ಬಾಗಿಲುಗಳ ಕಡೆಯಲ್ಲಿಯೂ ೩
ದ್ವಾರಗಳ ಪ್ರವೇಶದಲ್ಲಿಯೂ ಆರ್ಭಟಿಸುವದೇನಂದರೆ:

ಎಲಾ ಗಂಡಸರೇ ನಿಮಗೆ ನಾನು ಕೂಗುತ್ತೇನೆ ಮನುಷ್ಯ ಪುತ್ರ ೪
ರ ಕಡೆಗೆ ನನ್ನ ಶಬ್ದವೇನಂದರೆ: ಅಜ್ಞರೇ ಯುಕ್ತಿಯನ್ನು ಗ್ರಹಿಸಿಕೊ ೫
ಳ್ಳಿರಿ ಬುದ್ಧಿಹೀನರೆ ಹೃದಯದ ಬೋಧೆ ಹೊಂದಿರಿ. ನಾನು ನುಡಿಯು ೬
ವದು ಪ್ರಧಾನತ್ವವು ನನ್ನ ತುಟಿಗಳನ್ನು ತೆರೆಯುವದಾದ್ದು ನೆಟ್ಟನೆಯವ
ವು ಆಗಿರುವದರಿಂದ ಕೇಳಿರಿ! ನನ್ನ ಅಂಗಳು ಸತ್ಯವನ್ನು ನುಡಿಯು ೭
ವದೂ ದುಷ್ಟತನ ನನ್ನ ತುಟಿಗಳಿಗೆ ಅಸಹ್ಯವಾಗುವದೂ ನಿಶ್ಚಯವೇ.
ನನ್ನ ಬಾಯ ನುಡಿಗಳು ಎಲ್ಲಾ ನೀತಿಯಲ್ಲಿಯೇ, ತಪ್ಪು ತಪ್ಪುಗಳು ೮
ಅದರಲ್ಲಿ ವಕ್ರ ಇಲ್ಲ. ಗ್ರಹಿಸುವವನಿಗೆ ಅವುಗಳೆಲ್ಲಾ ಸರಳವಾ ೯
ಗಿಯೂ ತಿಳುವಳಿಕೆಯನ್ನು ಕಂಡುಕೊಳ್ಳುವವರಿಗೆ ನೆಟ್ಟನೆಯಾಗಿಯೂ
ತೋರುವದು. ಬೆಳ್ಳಿಯನ್ನಲ್ಲ ನನ್ನ ಶಿಕ್ಷೆಯನ್ನೂ ಆರಿಸಿ ತೆಕ್ಕೊಂಡು ೧೦
ಅಪರಂಜಿಗಿಂತ ಅರುಹನ್ನೂ ಅಂಗೀಕರಿಸಿರಿ! ಮುತ್ತುಗಳಿಗಿಂತ ಜ್ಞಾನವು ೧೧
ವಾಳ್ಳೇದೇ ಸರಿ. ಅಪೇಕ್ಷೆಗಳು ಯಾವವೂ ಆಕೆಗೆ ತಾಗಲಿಕ್ಕಿಲ್ಲ.

ಜ್ಞಾನವಾಗಿರುವ ನಾನು ಯುಕ್ತಿಯಲ್ಲಿ ವಾಸಮಾಡಿ ಯೋಚನೆಗಳ ತಿಳು ೧೨
ವಳಿಕೆಯನ್ನು ಕಂಡುಕೊಳ್ಳುತ್ತೇನೆ. ಯೆಹೋವನ ಭಯವು ಕೇಡನ್ನು ೧೩
ಹಗೆಮಾಡುವದೇ; ಗರ್ವ ಡಂಭವೂ ದುರ್ಮಾರ್ಗವೂ ತಪ್ಪು ಬಾಯಿಯನ್ನೂ
ನಾನು ಹಗೆ ಮಾಡುತ್ತೇನೆ. ಮಂತ್ರಣವೂ ವಾಸ್ತವ್ಯವೂ ನನಗದೆ, ನಾನೇ ೧೪

೧೫. ವಿವೇಕವು ಶೌರ್ಯವೂ ನನದು. ಅರಸರು ಆಳುವದೂ ರಾಜರು ನೀ
೧೬. ತಿಯಲ್ಲಿ ನ್ಯಾಯ ತೀರಿಸುವದೂ ನನ್ನಿಂದಲೇ. ಪ್ರಭುಗಳು ಆಳುವ
ದೂ ಭೂಮಿಯ ನ್ಯಾಯಾಧಿಪತಿಗಳು ಎಲ್ಲರೂ ಅಧಿಕಾರ ನಡಿಸುವದೂ
೧೭ ನನ್ನಿಂದಲೇ. ನನ್ನನ್ನು ಪ್ರೀತಿ ಮಾಡುವವರನ್ನು ನಾನು ಪ್ರೀತಿ ಮಾ
ಡು~~ತ್ತೇ~~ವೆನು, ನನ್ನನ್ನು ಹುಡುಕುವವರು ನನ್ನನ್ನು ಕಂಡು ಕೊ
೧೮ ಳ್ಳುವರು. ಸಂಪತ್ತೂ ಶ್ರೇಷ್ಠ ಸ್ಥಿರ ಧನವೂ ನನ್ನ ಬಳಿಯಲ್ಲಿ ಅ
೧೯ ದೆ. ನನ್ನ ಫಲವು ಅಪರಂಜಿ ~~ಚಿನ್ನ~~ ಬಂಗಾರಗಳಿಂತಲೂ ನನ್ನ
೨೦. ಆದಾಯವು ಬೆಳ್ಳಿಗಿಂತಲೂ ಒಳ್ಳೇದು. ನೀತಿಯ ಹಾದಿಯಲ್ಲಿ
೨೧ ನ್ಯಾಯದ ಹಾದಿಗಳ ಮಧ್ಯದಲ್ಲಿ ನಾನು ನಡೆಯುವದು, ನನ್ನನ್ನೇ
ಪ್ರೀತಿಸುವವರು ಆಸ್ತಿ ಬಾಧ್ಯವಾಗಿ ಹೊಂದುವ ಹಾಗೆ ಮಾಡಿ ಅವರ
ಭಂಡಾರಗಳನ್ನು ತುಂಬಿಸುವ ಹಾಗೆಯೇ
೨೨. ಯೆಹೋವನು ನನ್ನನ್ನು ತನ್ನ ಮಾರ್ಗದ ಆರಂಭವಾಗಿ ಪಡೆ
ದನು. ಹಿಂದಿನ ಆತನ ಪೂರ್ವ ಸೃಷ್ಟಿಗಳಲ್ಲಿ ಮೊದಲನೇದಾಗಿಯೇ.
೨೩ ಯುಗಯುಗದಿಂದ ನಾನು ಸ್ಥಾಪಿಸಲ್ಪಟ್ಟಿದ್ದೇನೆ. ಭೂಮಿಯ ಉತ್ಪತ್ತಿಗಿಂತ
೨೪ ಮುಂಚೆ. ಅಗಾಧಗಳು ಇಲ್ಲ ನೀರು ತುಂಬಿರುವ ಬುಗ್ಗೆಗಳು ಇಲ್ಲದಿರು
೨೫. ವ ಸಮಯದ(ಲ್ಲಿ) ನಾನು ಹುಟ್ಟಿದೆನು, ಪರ್ವತಗಳು ನಿಲ್ಲಿಸಲ್ಪಡುವದಕ್ಕಾ
೨೬ ಗ ಗುಡ್ಡಗಳಿಗಿಂತ ಮೊದಲು ನಾನು ಹುಟ್ಟಿದೆನು, ಆತನು ಭೂಮಿಯ ಪ್ರ
ದೇಶಗಳು ಭೂಮಿಯ ಮಣ್ಣಿನ ರಾಶಿಯೂ ಉಂಟು ಮಾಡದಿರುವಾಗಲೇ.
೨೭. ಆತನು ಆಕಾಶಗಳನ್ನು ಸ್ಥಾಪಿಸುವಾಗ ಅಗಾಧದ ಮುಖದ ಮೇಲೆ
೨೮ ಮಂಡಲವನ್ನು ಕಟ್ಟುವಾಗ ನಾನು ಅಲ್ಲಿಯೇ. ಮೇಲೆ ಮುಗಿಲನ್ನು

ದೃಢಪಡಿಸಿ ಅಗಾಧದ ಬುಗ್ಗೆಗಳನ್ನು ಸ್ಥಿರಪಡಿಸುವಾಗ, ಆತನು ೨೮
ಸಮುದ್ರಕ್ಕೆ ಮೇರೆ ಕಟ್ಟಿ ~~ನೀರುಗಳು~~ ನೀರುಗಳು ತನ್ನ ತೀರು, ಆತನ ಆಜ್ಞೆಯನ್ನು ಉ- ೨೯
ಲ್ಲಂಘಿಸದಂತೆ ಮಾಡಿ ಭೂಮಿಗೆ ಅಸ್ತಿವಾರಗಳನ್ನು ~~ಹಾಕಿ~~ ಹೊರಿಸಿದಾಗ, ಅಂದು ೩೦
ನಾನು ಆತನ ಬಳಿಯಲ್ಲಿ ಶಿಲ್ಪಿಯಾಗಿ ದಿನ ದಿನವೂ ಹರ್ಷ ಪಡುವವಳಾಗಿ
ಯಾವಾಗಲೂ ತಿರು ಸಮ್ಮುಖದಲ್ಲಿ ಆಡುತ್ತಿದ್ದೆನು, ಆತನ ಭೂ ೩೧
ಲೋಕದಲ್ಲಿ ನಾನು ಆಡುತ್ತೇನೆ ನನ್ನ ಸಂತೋಷವು ಮನುಷ್ಯ
ಪುತ್ರರಲ್ಲಿಯೇ.

ಆದಕಾರಣ ಮಕ್ಕಳೇ ನನ್ನನ್ನು ಕೇಳಿರಿ! ನನ್ನ ಮಾರ್ಗಗಳನ್ನು ೩೨
ಕಾಪಾಡುವವರು ಭಾಗ್ಯವಂತರು. ಶಿಕ್ಷೆಯನ್ನು ಬಿಡದೆ ಕೇಳಿ ಜ್ಞಾನಿ ೩೩
ಗಳಾಗಿರಿ! ನನ್ನ ಕದಗಳಲ್ಲಿ ದಿನ ದಿನಕ್ಕೆ ಜಾಗರಿಸಿ ನನ್ನ ಬಾಗಿಲಿನ ೩೪
ನಿಲುವುಗಳನ್ನು ಕಾಯುತ್ತಾ ನನ್ನನ್ನು ಆಲೈಸುವ ಮನುಷ್ಯ
ನು ಧನ್ಯನು. ಯಾಕಂದರೆ ನನ್ನನ್ನು ಕಂಡವನು ಜೀವವನ್ನು ೩೫
ಕಂಡುಕೊಂಡನು ಯೆಹೋವನ ಮೆಚ್ಚಿಕೆಯನ್ನು ಪಡೆದಿದ್ದಾನೆ.
ಆದರೆ ನನಗೆ ವಿರೋಧವಾಗಿ ದೋಷ ಮಾಡುವವನು ತನ್ನ ಪ್ರಾಣಕ್ಕೆ ೩೬
ದ್ರೋಹ ಮಾಡುತ್ತಾನೆ, ನನ್ನ ಹಗೆಯವರೆಲ್ಲರೂ ಮರಣವನ್ನೇ
ಪ್ರೀತಿ ಮಾಡುತ್ತಾರೆ.

೯. ಸಂಧಿ.

ಜ್ಞಾನವೆಂಬಾಕೆಯು ಶ್ರೇಷ್ಠವಾದ ಔತಣಕ್ಕೆ ಕರೆಯುವದನ್ನು
ಅಜ್ಞರು ಅಂಗೀಕರಿಸ ಮಾಡಿ ಬಿಡುವದಲು (೧೨) ಮೂರ್ಖತ್ವದ ಹೆಂಬಾ
ಕೆಗೆ ವಿಧೇಯರಾಗುವವರು ಸಾಯುವರಷ್ಟೇ.

ಜ್ಞಾನವೆಂಬಾಕೆಯು ತನ್ನ ಮನೆಯನ್ನು ಕಟ್ಟಿ ತನ್ನ ಏಳು ಸ್ತಂಭಗಳನ್ನು ೧.

ಸಾಮತಿಗಳು. ೯ ಸಂಧಿ.

೨. ಮುಗಿಸಿ, ತಂನ ಪಶುಗಳನ್ನು ಕೊಯಿದು ದ್ರಾಕ್ಷಾರಸವನ್ನು ಕಲಸಿ ಮೇಜನ್ನು
೩. ತಯ್ಯಾರು ಮಾಡಿ, ಸ್ತ್ರೀಸೇವಕಿಯರನು ಕಳುಹಿ ನಗರದ ಮೇಡುಗಳ ಮೇಲೆ ನಿಂತು
೪.೫. ಕೂಗುವದೇನಂದರೆ: ಯಾರು ಅಜ್ಞಾನಿ ಇತ್ತ ಬರಲಿ ಎಂತಲೇ. ಯಾರು ಬುದ್ಧಿ ಕಂಮಿ
ಯಾದವನು ಅವನಿಗೆ ಹೇಳುತ್ತಾಳೆ: ಬಾರಾ ನಂನ ಆಹಾರವನ್ನು ತಿಂನಿರಿ ನಾ
೬. ನು ಕಲಸಿದ ದ್ರಾಕ್ಷಾರಸವನ್ನು ಕುಡಿಯಿರಿ, ಅಜ್ಞತ್ವವನ್ನು ಬಿಟ್ಟು ಬದುಕಿರಿ ವಿವೇಕ
೭. ಮಾರ್ಗದಲ್ಲಿ ನಡೆದು ಬಾಳಿರಿ! ~~[illegible]~~ ಚೇಷ್ಟೆಗಾರನನ್ನು ಗದರಿಸುವವನು
ತನಗೆ ಮಾನಭಂಗವನ್ನು ದುಷ್ಟನನ್ನು ಆಕ್ಷೇಪಿಸುವವನು ತಂನ ನಿಂದೆಯನ್ನು
೮. ಬರಮಾಡುತ್ತಾನೆ. ಚೇಷ್ಟೆಗಾರನು ನಿಂನನ್ನು ಹಗೆ ಮಾಡದಂತೆ ಅವನನ್ನು ಆಕ್ಷೇ
ಪಿಸಬಾರದು ಜ್ಞಾನಿಯನ್ನು ಆಕ್ಷೇಪಿಸು ಆಗ ಅವನು ನಿಂನನ್ನು ಪ್ರೀತಿಸುವನು.
೯. ಜ್ಞಾನಿಗೆ ಕಲಿಸು ಆಗ ಜ್ಞಾನದಲ್ಲಿ ಅಭಿವೃದ್ಧಿಸುವನು, ನೀತಿವಂತನಿಗೆ ತಿಳಿಸು ಆಗ
೧೦. ಕಲಿಕೆಯು ಅಧಿಕವಾಗುವದು. ಜ್ಞಾನದ ಆರಂಭವು ಯೆಹೋವನ ಭಯವೇ (೧೨.)
೧೧. ವಿಜ್ಞಾನ- ಪರಿಶುದ್ಧನ ತಿಳುವಳಿಕೆಯೇ ವಿವೇಕವು. ಯಾಕಂದರೆ ನಂನ ಮೂಲಕವಾಗಿ ನಿನ್ನ
೧೨. ದಿವಸಗಳು ಹೆಚ್ಚಿ- ಜೀವದ ವರುಷಗಳು ನಿನಗೆ ಅಧಿಕವಾಗುವವು. ನೀನು
ಜ್ಞಾನಿಯಾಗಿದ್ದರೆ ನಿನಗೇನೇ ಜ್ಞಾನಿಯಾಗಿ, ನೀನು ಪರಿಹಾಸ್ಯ ಮಾಡಿದರೆ ಹೊರಲಿಕ್ಕೆ ನೀನೇ
೧೩. ಮೂರ್ಖತ್ವ ಎಂಬಾಕೆಯು ತೊಂದರೆಗಾರ್ತಿ ಅಜ್ಞಳೆ ಉಂಡ ಸಂಪೂರ್ಣ
೧೪. ವಾಗಿ ಏನೂ ಅರಿಯದವಳು, ಸ್ವಂತ ಮನೆಯ ಬಾಗಿಲಲ್ಲಿ ನಗರದ ಮೇಡುಗಳ ಸಿಂಹಾ
೧೫. ಸನದಲ್ಲಿ ಕೂತುಕೊಂಡು, ಸುಮ್ಮನೆ ಹಾದು ಹೋಗುವವರಂನೂ
೧೬. ತಂಮ ಹಾದಿಗಳಲ್ಲಿ ನೆಟ್ಟಗೆ ನಡೆಯುವವರಂನೂ ಕರೆಯುವದೇನಂದರೆ: ಯಾರು
ಅಜ್ಞಾನಿ ಇತ್ತ ಬರಲಿ ಎಂತಲೇ ಯಾರು ಬುದ್ಧಿ ಕಂಮಿಯಾದವನು ಅವನಿಗೆ
೧೭. ಹೇಳುವದು (೪.): ಕದ್ದು ತಂದ ನೀರು ಸಿಹಿಯಾಗಿರುವದು ಗುಪ್ತವಾದ ರೊಟ್ಟಿ
ಯು ಮನೋಹರ ಎಂತ ಹೇಳಿ (ಹೋಗುವವನು), ಅಲ್ಲಿ ಇರುವವರು (ಪ್ರೇತಗಳು
ಆಕೆಯ ಔತಣದವರು ಪಾತಾಳದ ಹೊಂಡಗಳಲ್ಲಿ ಇದ್ದಾರೆಂತ ತಿಳಿಯುವದಿಲ್ಲವೋ

II ಶಾಲೆಯ ಮೊದಲ ಸಾಮತಿಗಳು ೨೩:

ಎಂತೆಂದರೆ:-

(ಸಂಧಿ ೧೦,-೨೨; ೧೬)

೧೦. ಸಂಧಿ.

ಜ್ಞಾನವುಳ್ಳ ಮಗನು ಅಪ್ಪನನ್ನು ಸಂತೋಷಪಡಿಸುತ್ತಾನೆ. ೧
ಮೂರ್ಖನಾದ ಮಗನು ತಾಯಿಗೆ ಖೇದವೇ. ದುಷ್ಟತನದಿಂದಿರುವ ೨
ನಿಕ್ಷೇಪಗಳು ಉಪಯೋಗಕ್ಕೆ ಬೀಳುವದಿಲ್ಲ ಆದರೆ ನೀತಿಯು
ಮರಣದಿಂದ ಉದ್ಧರಿಸುತ್ತದೆ. ನೀತಿವಂತನ ದೇಹವನ್ನು ಯೆ ೩
ಹೋವನು ಹಸಿಯಗೊಡಿಸನು, ಆದರೆ ದುಷ್ಟರ ಅಪೇಕ್ಷೆ
ಯನ್ನು ತೊಲಗಿಸಿಬಿಡುವನು.

ಸುಸ್ತಿಯ ಕೈಯಿಂದ ಕೆಲಸ ಮಾಡುವವನು ದರಿದ್ರನು ೪
(ಆಗುವನು), ಉತ್ಸಾಹವುಳ್ಳವರ ಕೈ ಸಂಪತ್ತನ್ನು ಹುಟ್ಟಿಸು
ವದು. ಬೇಸಿಗೆ ಕಾಲದಲ್ಲಿ ಕೂಡಿಸಿಡುವವನು ಗ್ರಹಿಕೆಯುಳ್ಳ ಮ ೫
ಗನು ಸುಗ್ಗೀ ಕಾಲದಲ್ಲಿ ನಿದ್ರಾಳುವಾದವನು ನಿಂದ್ಯ ಪುತ್ರನು.
ನೀತಿವಂತನ ತಲೆಗೆ ಅನುಗ್ರಹಗಳು ಉಂಟು ದುಷ್ಟರ ಬಾಯಿ ೬
ಸಾಹಸವನ್ನು ಮುಚ್ಚಿಡುತ್ತದೆ. ನೀತಿವಂತನ ನೆನಪು ಅನುಗ್ರಹಕ್ಕೆ ೭
(ಆಗುವದು) ದುಷ್ಟರ ಹೆಸರು ಕೊಳೆತು ಹೋಗುವದು.

ಹೃದಯ ಜ್ಞಾನವುಳ್ಳವನು ಅಪ್ಪಣೆಗಳನ್ನು ಕೈಕೊಳ್ಳುವನು ೮
ಅಧರಗಳಿಂದ ಹೆಡ್ಡನಾದವನು ತಾನು ಮುರಾಗುವನು (ತಲೆಕೆಳ
ಗಾಗುವನು). ಸಂಪೂರ್ಣತೆಯಲ್ಲಿ ನಡೆಯುವವನು ನಿರ್ಭಯ ೯
ದಲ್ಲಿ ನಡೆಯುವನು ತನ್ನ ಮಾರ್ಗಗಳನ್ನು ಓರೆ ಮಾಡುವವನು

೧೦. ಕಣ್ಣು ಮಿಟುಕಿಸುವವನು ವ್ಯಸನವನ್ನುಂಟು ಮಾಡು
ವವನು ಅಧರಗಳಿಂದ ಹರಟೆಯಾಡುವವನು ಮೂರ್ಖನಾಗುವನು (ತಲೆ ಕೆಳಗಾ
ಗುವನು.) (೮)

೧೧. ನೀತಿವಂತನ ಬಾಯಿ ಜೀವದ ಬುಗ್ಗೆಯೇ. ದುಷ್ಟರ ಬಾಯಿ ಸಾಹಸ
೧೨. ವನ್ನು ಮುಚ್ಚಿಡುತ್ತದೆ (೬). ಹಗೆಯು ಜಗಳಗಳನ್ನು ಎಬ್ಬಿಸುವದು; ಎಲ್ಲಾ
೧೩. ಅಪರಾಧಗಳನ್ನು (ಪ್ರೀತಿಯು ಮುಚ್ಚಿಡುತ್ತದೆ). ವಿವೇಕಿಯ ಅಧರಗಳಲ್ಲಿ
೧೪. ಜ್ಞಾನವು ಸಿಕ್ಕುವದು ಬುದ್ಧಿಹೀನನ ಬೆನ್ನಿಗೆ ಬೆತ್ತ. ಜ್ಞಾನಿಗಳು ಅರಿ
ವನ್ನು ಸಂಗ್ರಹ ಮಾಡುವರು ಆದರೆ ಮೂರ್ಖನ ಬಾಯಿ ಸಮೀಪಿಸು
೧೫. ವ ಬಂದು ನಾಶನವಾಗಿದೆ. ಐಶ್ವರ್ಯವಂತನ ಸಂಪತ್ತು ಅವನ ಬಲವಾ
ದ ನಗರವು ಆದರೆ ಬಡವರ ನಾಶನವು ಅವರ ~~ಸಂಪತ್ತು~~ ದಾರಿದ್ರ್ಯವೇ.
೧೬. ನೀತಿವಂತರ ಕೂಲಿ ಜೀವಕ್ಕಾಗಿ ಇರುವಂಥಾದ್ದು. ದುಷ್ಟರ ಆದಾಯ
೧೭. ವು ಪಾಪದ ಕಡೆಗೇನೇ. ಜೀವದ ಕಡೆಗೆ ಹೋಗುವವನು ಶಿಕ್ಷೆ
ಯನ್ನು ಕಾಯ್ದುಕೊಳ್ಳುವವನು, ಗದರಿಕೆಯನ್ನು ತೊರೆದು ಬಿಡುವವನು ತಪ್ಪಿ
ಹೋಗುತ್ತಾನೆ.

೧೮. ಹಗೆಯನ್ನು ಮುಚ್ಚುವವನು ಸುಳ್ಳು ತುಟಿಯುಳ್ಳವನು, ಚಾಡಿ
೧೯. ಹಬ್ಬಿಸುವವನು ಮೂರ್ಖನಾಗಿದ್ದಾನೆ. ಮಾತುಗಳು ಹೆಚ್ಚಾಗುವಾಗ ಲಂಘನ
೨೦. ವು ಇಲ್ಲದಿರದು. ಅಧರಗಳನ್ನು ಮುಚ್ಚುವವನೇ ಬುದ್ಧಿವಂತನು; ಆಯ್ದು
ಕೊಳ್ಳಲ್ಪಡುವಂಥಾದ್ದು ನೀತಿವಂತನ ನಾಲಿಗೆ, ದುಷ್ಟರ ಬುದ್ಧಿ (ಹೃದಯ)
೨೧. ಸ್ವಲ್ಪವಾಗುವದು. ನೀತಿವಂತನ ಅಧರಗಳು ಅನೇಕರನ್ನು ಸಾಕುತ್ತವೆ
ಆದರೆ ಮೂರ್ಖರು ಬುದ್ಧಿಹೀನತೆಯಿಂದ ಸಾಯುವರು.

ಯೆಹೋವನ ಅನುಗ್ರಹವೇ ಐಶ್ವರ್ಯವಂತನಾಗ ಮಾಡುವದು. ಅದಕ್ಕೆ ೨೨
ವ್ಯಥೆ ಏನೂ ಕೂಡಿಸಲಿಕ್ಕಿಲ್ಲ. ಪಾತಕ ಮಾಡುವದು ಬುದ್ಧಿಹೀನನಿಗೆ ೨೩
ಆಟದಂತೆ, ವಿವೇಕವಂತನಿಗೆ ಜ್ಞಾನವು (ಹಾಗೆ). ದುಷ್ಟನು ಅಂಜುವ ೨೪
ದೇ ಅವನಿಗೆ ಆಗುವದು ನೀತಿವಂತರ ಅನುಗ್ರಹವನ್ನು (ಯೆಹೋವನು)
ಕೊಡುವನು. ಸುಳಿಗಾಳಿ ಹಾದುಹೋದ ದುಷ್ಟನು ಇಲ್ಲವಾದನು ಆದ ೨೫
ರೆ ನೀತಿವಂತನು ನಿತ್ಯವಾದ ಅಸ್ತಿವಾರ. ಹಲ್ಲುಗಳಿಗೆ ಹುಳಿರಸವೂ ಕಣ್ಣು ೨೬
ಗಳಿಗೆ ಹೊಗೆಯೂ ಎಂಬಂತೆ ಮೈಗಳ್ಳನು ತನ್ನನ್ನು ಕಳುಹಿಸಿದವರಿಗೆ
ಇದ್ದಾನೆ.

ಯೆಹೋವನ ಭಯವು ದಿನಗಳನ್ನು ಕೂಡಿಸುವದು ದು ೨೭
ಷ್ಟರ ವರುಷಗಳು ಕಮ್ಮಿಯಾಗುವವು. ನೀತಿವಂತರ ಕಾತರಿಕೆ ಸಂತೋ ೨೮
ಷವಾಗುವದು ದುಷ್ಟರ ಪ್ರತೀಕ್ಷೆಯು ಕೆಡುವದಷ್ಟೆ. ಸಂಪೂರ್ಣನಿಗೆ ೨೯
ಶರಣವಾಗಿರುವಂಥಾದ್ದು ಯೆಹೋವನ ಮಾರ್ಗ, ಅಕ್ರಮ ಮಾಡುವವ
ರಿಗೆ ಅದೇ ನಾಶನವು. ನೀತಿವಂತನು ಎಂದಿಗೂ ಕದಲಲಿಕ್ಕಿಲ್ಲ ದುಷ್ಟರು ೩೦
ಭೂಮಿಯಲ್ಲಿ ನಿವಾಸಿಸರು.

ನೀತಿವಂತನ ಬಾಯಿ ನೀತಿಯನ್ನು ವೃದ್ಧಿ ಮಾಡುವದು ದಗಲಬಾ ೩೧
ಜಿಯ ನಾಲಿಗೆಯು ಛೇದಿಸಲ್ಪಡುವದು. ನೀತಿವಂತನ ಅಧರಗಳು ೩೨
ಮೆಚ್ಚಿಕೆಯನ್ನು ಗುರುತು ಮಾಡಲಿಕ್ಕೆ ತಿಳಿಯುತ್ತವೆ. ದುಷ್ಟರ ಬಾಯಿ
ದಗಲಬಾಜಿಯೇ.

೧೧. ಸಂಧಿ

ಕಳ್ಳತಕ್ಕಡಿ ಯೆಹೋವನಿಗೆ ಅಸಹ್ಯ ಸಂಪೂರ್ಣ ತೂಕ (a ೧
weight equal to that of ten pagodas) ಅವನಿಗೆ ಮೆಚ್ಚಿಗೆ.

೨. ಅಭಿಮಾನ ಬಂದ ಮೇಲೆ ಅದು ಮಾನ ಭಂಗವು ಬಂತು. ವಿನಯವುಳ್ಳ
೩. ವರ ಬಳಿಯಲ್ಲೇ ಜ್ಞಾನವದೆ. ನೆಟ್ಟನೆಯವರ ಸಂಪೂರ್ಣತೆಯು ಅವರನ್ನು
ನಡಿಸುವದು ಸೋಲಿಸುವವರ[1] ದುರುಳತನ ಅವರನ್ನು ಮುರಿಯಬ
ಡಿಯುವದು

1. to cheat

೪. ಕ್ರೋಧದ ದಿನದಲ್ಲಿ ಧನವು ಉಪಯೋಗಕ್ಕೆ ಬೀಳುವದಿಲ್ಲ ಆ
೫. ದರೆ ನೀತಿಯು ಮರಣದಿಂದ ಉದ್ಧರಿಸುತ್ತದೆ. (೧೦;೨). ಸಂಪೂರ್ಣನ
ನೀತಿಯು ಅವನ ಮಾರ್ಗವನ್ನು ನೆಟ್ಟನೆ ಮಾಡುವದು ದುಷ್ಟನು ತನ್ನ
೬. ದುಷ್ಟತನದಿಂದ ಬೀಳುವನಷ್ಟೇ. ನೆಟ್ಟನೆಯವರ ನೀತಿಯು ಅವರ
ನ್ನು ಉದ್ಧರಿಸುವದು ಆದರೆ ವಂಚಕರು ತಮ್ಮ ಅತ್ಯಾಶೆಯಲ್ಲಿ ಸಿಕ್ಕಿ ಬೀ
೭. ಳುವರು. ದುಷ್ಟ ಮನುಷ್ಯನು ಸಾಯುವಾಗ ಆಶೆ ಕೆಡುವದಷ್ಟೇ ವೀರ್ಯ
ಶಾಲಿಗಳ ಪ್ರತೀಕ್ಷೆಯು ನಾಶವಾಯಿತು.

೮. ಇಕ್ಕಟ್ಟಿನಿಂದ ನೀತಿವಂತನು ಬಿಡಿಸಲ್ಪಟ್ಟನು ಅವನಿಗೆ ಬದಲಾಗಿ
೯. ದುಷ್ಟನು ಅದರಲ್ಲಿ ಸಿಕ್ಕುತ್ತಾನೆ. ಭಾವಗೆಟ್ಟನು =(ಬಾಹ್ಯನು) ಬಾಯಿಂದ
ಜೊತೆಗಾರನನ್ನು ನಾಶಮಾಡುವನು ನೀತಿವಂತರು ಅರುವಿನ ದೆಸೆಯಿಂದ
೧೦. ಬಿಡಿಸಲ್ಪಡುವರು. ನೀತಿವಂತರು ಸುಖಪಟ್ಟರೆ ನಗರವು ಉಲ್ಲಾಸಪ
೧೧. ಡುವದು ದುಷ್ಟರು ಕೆಟ್ಟರೆ ~~ಉಲ್ಲಾಸಪಡುವದು~~ ಆರ್ಭಟಿಸುವದು. ನೆಟ್ಟ
ನೆಯವರ ಅನುಗ್ರಹದಿಂದ ನಗರವು ಏಳುವದು ದುಷ್ಟರ ಬಾಯಿಂದ
ಹಾಳಾಗುವದು.

೧೨. ಜೊತೆಗಾರನನ್ನು ಧಿಕ್ಕರಿಸುವವನು ಬುದ್ಧಿಹೀನನು ವಿವೇಕವಂತ
೧೩. ನು ಉಸುರನು. ಚಾಡಿಗಾರನಾಗಿ ತಿರುಗುವವನು ಗುಟ್ಟನ್ನು ಬಯಲು

ಪಡಿಸುವನು. ನಂಬಿಕೆಯ ಆತ್ಮವುಳ್ಳವನು ಸಂಗತಿಯನ್ನು ಮರೆಮಾ
ಡುತ್ತಾನೆ. ನಯಸಾಮರ್ಥ್ಯವಿಲ್ಲದಿದ್ದರೆ ಜನಂ ಬೀಳುವದು; ಮಂತ್ರಿಗಳ ೧೪
ಸಮೃದ್ಧಿಯಲ್ಲಿ ರಕ್ಷೆ ದೊರೆಯುವದು.

ಪರನಿಗಾಗಿ ಉತ್ತರವಾದಿಯಾದರೆ ಕೆಟ್ಟು ಹೋಗಿ ನೋಯುವನು, ೧೫
ಹೊಣೆಗಾರಿಕೆಯಾಗುವವರನ್ನು ಹಗೆ ಮಾಡುವವನು ನಿರ್ಭಯವಾಗಿರು
ವನು. ಲಾವಣ್ಯವಂತೆಯು ಘನವನ್ನು ಹೊಂದುತ್ತಾಳೆ; ಪ್ರೌಢರು ಧ ೧೬
ನವನ್ನು ಹೊಂದುವರು. ದಯಾವಂತನು ತನಗೆ ತಾನೇ ಗುಣವನ್ನು ೧೭
ವುಂಟುಮಾಡುತ್ತಾನೆ; ಕ್ರೂರನು ತನ್ನ ಮಾಂಸವನ್ನು ಉಪದ್ರವಪಡಿ-
ಸುವನು. ದುಷ್ಟನು ವ್ಯಾಜಕೂಲಿಯನ್ನೂ ನೀತಿಯನ್ನು ಬಿತ್ತುವವನು ೧೮
ಸತ್ಯಪ್ರತಿಫಲವನ್ನೂ ಉಂಟುಮಾಡುತ್ತಾನೆ. ದೃಢ ನೀತಿಯುಳ್ಳವನು ೧೯
ಜೀವಕ್ಕೂ ಕೆಟ್ಟತನವನ್ನು ಹಿಂಬಾಲಿಸುವವನು ಸ್ವಮರಣಕ್ಕೂ.

ಹೃದಯವಕ್ರರು ಯೆಹೋವನಿಗೆ ಅಸಹ್ಯ, ಮಾರ್ಗಸಂಪೂ ೨೦
ರ್ಣರು ಅವನಿಗೆ ಆನಂದ (ಮೆಚ್ಚಿಕೆ). ಕೈಗೆ ಕೈ (ಸಖ್ಯ) ಆಗದವನು ೨೧
ನಿರ್ದೋಷಿಯಂತಾಗನು, ನೀತಿವಂತರ ಸಂತತಿಯು ಬಿಡುಗಡೆಯಾಗುವದು.
ಹಂದಿ ಮೂಗಿನಲ್ಲಿರುವ ಮೂಗುತಿ ಸಾರ ರುಚಿಹೀನ ಸುಂದರಿ. ೨೨
ನೀತಿವಂತರ ಆಶೆ ಒಳ್ಳೇತನವೇ, ಆದರೆ ದುಷ್ಟರ ಪ್ರತೀಕ್ಷೆಯು ೨೩
ಅತಿಕೋಪವೇ.

ಚೆಲ್ಲುವವರೂ ಇನ್ನೂ (ವಸ್ತು) ಹೆಚ್ಚಾಗುತ್ತಾ ಇರುವವನೂ ೨೪
ತಕ್ಕದಕ್ಕಿಂತ ಅಧಿಕವಾಗಿ ಸಂಗ್ರಹಿಸಿದರೂ ಕೊರತೆಯನ್ನುಂಟು ಮಾ
ಡುವವನೂ ಇದ್ದಾರೆ. ಅನುಗ್ರಹ ಮಾನಸನಿಗೆ ಪುಷ್ಟಿಯೂ ತಾನೇ ೨೫

೨೮ ಸಾಮತಿಗಳು. ೧೧. ಸಂಧಿ

೨೬ ಸುವವನಿಗೆ ತಾನೇ ನೀರು ಉಂಟಾಗುವದು. ಧಾನ್ಯವನ್ನು ತಡೆಯುವ
ವನನ್ನು ಕುಲವು ಶಪಿಸುವದು ಅದು ಮಾರುವವನ ತಲೆಗೆ ಅನುಗ್ರಹವು
೨೭ ಮೇಲನ್ನು ಹುಡುಕುವವನು ಮೆಚ್ಚಿಕೆಯನ್ನು ಅರಸುತ್ತಾನೆ, ಕೇಡ
೨೮ ನ್ನು ಹುಡುಕುವವನಿಗೆ ಅದು ಸಿಕ್ಕುವದು ಸಹ.. ತನ್ನ ಸಂಪತ್ತಿನಲ್ಲಿ
ಭರವಸವಿಡುವವನೇ ಬೀಳುವನು ಎಲೆಯಂತೆ ನೀತಿವಂತನು ಚಿಗುರುವ
೨೯ ನು. ಸ್ವಕೀಯವನವನ್ನು ಉಪದ್ರವಪಡಿಸುವವನು ಗಾಳಿಯನ್ನು
೩೦ ಸ್ವಾಧೀನಿಸುವನು, ಹುಚ್ಚನು ಜ್ಞಾನ ಹೃದಯನಿಗೆ ದಾಸನಾಗುವನು. ನೀತಿ
ವಂತನ(ಉಂಟು ಮಾಡುವ) ಫಲವು ಜೀವ ವೃಕ್ಷವೇ ಜ್ಞಾನ ವಂತನು
೩೧ ಜೀವಿಗಳನ್ನು ಸಂಪಾದಿಸುವನು ಸಹ. ಇಗೋ ನೀತಿವಂತನಿಗೆ ಭೂಮಿ
ಯಲ್ಲೇ ಬದಲು ಸಿಕ್ಕುವದು ದುಷ್ಟನಿಗೂ ಪಾಪಿಗೂ ಎಷ್ಟೋ ಹೆಚ್ಚು(ಮತ್ತೇನು)

೧೨ ಸಂಧಿ.

೧. ಶಿಕ್ಷೆಯನ್ನು ಪ್ರೀತಿ ಮಾಡುವವನು ಅರುವನ್ನು ಪ್ರೀತಿ ಮಾಡುತ್ತಾನೆ, ಗದ
೨. ರಿಕೆಯನ್ನು ಹಗೆ ಮಾಡುವವನು ಮೃಗ ಭಾವದವನು. ಒಳ್ಳೆಯವನು ಯೆ
ಹೋವನಿಂದ ಮೆಚ್ಚಿಕೆಯನ್ನು ಹೊಂದುವನು ದುರ್ಯೋಚನೆಯವನನ್ನು
೩. ಆತನು ದುಷ್ಟನೆಂತ ನಿರ್ಣಯಿಸುವನು. ದುಷ್ಟತೆಯಿಂದ ಯಾರೂ ಸ್ಥಿರ
ನಾಗಲಿಕ್ಕಿಲ್ಲ ನೀತಿವಂತರ ಬೇರು ಕದಲಲಿಕ್ಕಿಲ್ಲ ಸಹ.
೪. ಜಾಣ್ಮೆಯಾದ ಯೋಗ್ಯಳು ಗಂಡನಿಗೆ ಕಿರೀಟವೇ ಆತನ ಎಲುವುಗಳಲ್ಲಿ
೫. ಹುಳುಗಳಿಗೆ ಸಮ ನಾಚಿಕ್ಕು ನಿಂದ್ಯಳು. ನೀತಿವಂತರ ವಿಚಾರಗಳೂ ನ್ಯಾಯ
೬. ವೇ. ದುಷ್ಟರ ನಯಸಾಮರ್ಥ್ಯಗಳು ಮೋಸವೇ. ದುಷ್ಟರ ಮಾತುಗಳು (ಸಾಧು
ಜನರ) ರಕ್ತಕ್ಕಾಗಿ ಹೊಂಚುವಿಕೆಯಾಗಿವೆ ಅವರನ್ನು ಉದ್ಧರಿಸುವದು

ನೆಟ್ಟಗೆಯವರ ಬಾಯಿ. ಹೊಂದಿರುಗಿದಾಕ್ಷಣ ದುಷ್ಟರು ಇಲ್ಲದೆ .೭
ಹೋಗುವರು ಆದರೆ ನೀತಿವಂತರ ಮನೆಯು ನಿಲ್ಲುವದು.

ಅವನವನಿಗೆ ಬುದ್ಧಿಗನುಸಾರವಾಗಿ ಸ್ತುತಿ ಸಿಕ್ಕುವದು. ಹೃದಯ .೮
ಡೊಂಕುಳ್ಳವನು ಧಿಕ್ಕಾರಕ್ಕೆ ಗುರಿಯಾಗುವನು. ಆಹಾರದ ಕೊರ .೯
ತೆಯುಳ್ಳ ಆತ್ಮ ಪ್ರಶಂಸೆಯವನಿಗಿಂತ ಒಬ್ಬನೇ ದಾಸನಾಗಿಯೂ
ನೀಚನಾಗಿಯೂ ಇರುವವನೇ ಲೇಸು. ತಂನ ದನ ಕರುಗಳ ಮನಸ್ಸ .೧೦
ನ್ನ ನೀತಿವಂತನು ತಿಳುಕೊಳ್ಳುತ್ತಾನೆ ಆದರೆ ದುಷ್ಟರ ಅಂತಃಕರುಣವು
ಕ್ರೂರತನವೇ. ತಂನ ಹೊಲವಂನು ಸಾಗುವಳಿ ಮಾಡುವವನು ಆಹಾ .೧೧
ರತೃಪ್ತನಾಗುವನು ನಿಸ್ಸಾರತಂನು ಹಿಂದಟ್ಟುವವನು ಬುದ್ಧಿಹೀನನೇ.

ಆಗದವರಿಗಿರುವ ಬೇಟೆಯನ್ನು ದುಷ್ಟನು ಇಚ್ಛೈಸುತ್ತಾನೆ ನೀತಿ .೧೨
ವಂತರ ಬೇರು ಚಿಗುರುವದು. ಅಧರಗಳ ದ್ರೋಹದಲ್ಲಿ ಅಪಾಯಕರ .೧೩
ವಾದ ಉರುಳಿವೆ ಇಕ್ಕಟ್ಟಿನಾಗಳಿಂದ ನೀತಿವಂತನು ಹೊರಗೆ ಬರುವನು.
ತಂನ ಬಾಯಿಯ ಫಲದ ದೆಸೆಯಿಂದ ಮೇಲುಗಳಿಂದ ತೃಪ್ತನಾಗುವನು, .೧೪
ಮನುಷ್ಯನ ಕೈಗಳು ಮಾಡಿದ್ದು ಆತನಿಗೆ ತಿರಿಗಿ ಬರುವದು. ಹೆಡ್ಡ .೧೫
ನ ಮಾರ್ಗವು ಆತನ ಕಣ್ಣುಗಳಿಗೆ ನೆಟ್ಟಗಿದೆ ಎಂತ ತೋರುವದು
ಬೇರೊಬ್ಬರ ಮಂತ್ರಣವನ್ನು ಕೇಳುವವನೇ ಜ್ಞಾನಿಯು. ತಂನ ಕೆರಳಿ .೧೬
ಕೆಯಂನು ಅಂದೇ ತಿಳಿಸುವವನು ಹೆಡ್ಡನು ಯುಕ್ತಿವಂತನು ಅ
ಪಮಾನವನ್ನು ಮುಚ್ಚುತ್ತಾನೆ.

ನಂಬಿಕೆಯಂನು ಉಸುರುವವನು ನೀತಿಯಂನೂ ಕಪಟ .೧೭
ಸಾಕ್ಷಿಯವನು ಮೋಸವಂನೂ ತಿಳಿಸುವನು. ಖಡ್ಗ ತಿವಿಯುವಂತೆ .೧೮

೧೯. ಚುಚ್ಚುವವನಿದ್ದಾನೆ ಆದರೆ ಜ್ಞಾನಿಗಳ ನಾಲಿಗೆಯು ಕ್ಷೇಮ. ಸತ್ಯ
ದ ಅಧರವು ಎಂದೆಂದಿಗೂ ಸ್ಥಿರವಾಗಿರುವದು ಮೋಸದ ನಾಲಿಗೆಯು
೨೦. ಕ್ಷಣಮಾತ್ರ. ಕೇಡನ್ನು ಹೂಡುವವರ ಹೃದಯದಲ್ಲಿ ಕಪಟ
ಉಂಟು ಆದರೆ ಸಮಾಧಾನವನ್ನು ಮಂತ್ರಿಸುವವರಿಗೆ ಸಂತೋ
೨೧. ಷವು. ನೀತಿವಂತನಿಗೆ ಬಂದು ವಿಪತ್ತೂ ತಾಗಲಿಕ್ಕಿಲ್ಲಾ ದುಷ್ಟರು ಕೇಡಿ
೨೨. ತನದಿಂದ ತುಂಬುವರು. ಮೋಸದ ತುಟಿಗಳು ಯೆಹೋವನಿಗೆ ಅಸಹ್ಯ
೨೩. ಸತ್ಯವನ್ನು ಮಾಡುವವನು ಅವನಿಗೆ ಮೆಚ್ಚಿಕೆ. ಕುಶಲವಂತನು ಅರಿ
ವನ್ನು ಮರೆ ಮಾಡುವನು, ಬುದ್ಧಿಹೀನರ ಹೃದಯವು ಮೌಢ್ಯವನ್ನು ತಿಳಿ
೨೪. ಸುವದು. ಉತ್ಸಾಹವುಳ್ಳವನ ಕೈ ಆಳುವದು ಆದರೆ ಸುಸ್ತಿಗೆ
೨೫. ಗುಲಾಮ ಚಾಕರಿ ಮಾತ್ರ ತಕ್ಕುವದು. ಗಂಡಸಿನ ಹೃದಯದಲ್ಲಿರುವ ಖೇ
ದವು ಅದಂನು ಅಗ್ಗಿಸುತ್ತದೆ ಒಳ್ಳೇ ಮಾತು ಅದನ್ನು (ತಿರಗಿ) ಸಂತೋ
೨೬. ಷಪಡಿಸುವದು. ನೀತಿವಂತನು ಗೆಳೆಯನಿಗೆ ದಿಕ್ಕು ತೋರಿಸುವನು
೨೭. ದುಷ್ಟರ ಮಾರ್ಗವು ಅವರನ್ನು ತಪ್ಪಿಸುವದು. ಅಲಸನು ಬೇಟೆಯಾ
ಡುವದನ್ನು ಬಿಡುವದಿಲ್ಲ. ಮನುಷ್ಯನಿಗೆ ಅಮೂಲ್ಯ ಧನವು ಉತ್ಸಾಹವೇ.
೨೮. ನೀತಿಯ ಹಾದಿಯಲ್ಲಿ ಜೀವವುಂಟು

೧೩ ಸಂಧಿ

೧. ಜ್ಞಾನವುಳ್ಳ ಮಗನು ತಂದೆಯ ಶಿಕ್ಷೆ (ಫಲವು) ಆಕ್ಷೇಪವನ್ನು ಕೇ
೨. ಳದವನು ಕುಚೋದ್ಯಗಾರನು. ತನ್ನ ಬಾಯ ಫಲದಿಂದ ಆ
ತನು ಮೇಲನ್ನು ಉಣ್ಣುವನು (೧೨, ೧೪.) ವಂಚಕರ ಬಯಕೆಯೋ
೩. ಯು ಸಾಹಸ (ಉಣ್ಣುವದು). ಬಾಯನ್ನು ಕಾಪಾಡುವವನು ಸ್ವಪ್ರಾಣ

ತನ್ನು ಕಾಯುತ್ತಾನೆ ತುಟಿಗಳನ್ನು ಅಗಲವಾಗಿ ತೆರೆಯುವವನಿಗೆ ನಾಶನವು
ನಿಶ್ಚಯವೇ. ಮೈಗಳ್ಳನ ಜೀವಕ್ಕೆ ಮಹಾ ಅಪೇಕ್ಷೆ ಇದ್ದರೂ ಏನೂ ಇಲ್ಲ .೪
ಉತ್ಸಾಹವುಳ್ಳವನ ಜೀವಕ್ಕಾದರೆ ಪುಷ್ಟಿ ಇರುವದು.

ಮೋಸದ ಮಾತನ್ನು ನೀತಿವಂತನು ಹಗೆ ಮಾಡುವನು ದುಷ್ಟನು .೫
ನಿಂದಿಸಿ ದೂಷಿಸುವನು (ತುಚ್ಛಿಸುವನು). ಮಾರ್ಗ ಸಂಪೂರ್ಣತೆಯನ್ನು ನೀತಿಯು .೬
ಕಾಯುವದು ಪಾಪಮಯನನ್ನು ದುಷ್ಟತನವು ಬಾರಮಾಡುವದು. ಏನೂ .೭
ಇಲ್ಲದೆ ಸಂಪನ್ನರಾಗಿಯೂ ಅತಿ ಧನದ ಸಂಗಡ ದರಿದ್ರರಾಗಿಯೂ
ಇದ್ದೇವೆಂದು ನಟಿಸುವವರು (ನೆವತೋರಿಸುವವರು) ಇದ್ದಾರೆ.
ಮನುಷ್ಯನ ಪ್ರಾಣಕ್ಕೆ ಪ್ರಾಯಶ್ಚಿತ್ತವಾದದ್ದು ಆತನ ಸಂಪತ್ತು ದರಿದ್ರ .೮
ನು ಆಕ್ಷೇಪವನ್ನು ಕೇಳದೆ ಹೋಗುವನು. ನೀತಿವಂತರ ಬೆಳಕು .೯
ಥಳಥಳ ಹೊಳೆಯುವದು, ದುಷ್ಟರ ದೀಪವು ಆರಿ ಹೋಗುವದು.
ಝಗಳ ಉಂಟಾಗುವದು ಅಭಿಮಾನದಿಂದಲೇ, ಮಂತ್ರಣವನ್ನು ೧೦
ಕೈಕೊಳ್ಳುವವರ ಬಳಿಯಲ್ಲಿ ಜ್ಞಾನವದೆ. ಮಾಯದಿಂದಿರುವ ಆಸ್ತಿ .೧೧
ಯು ಕಮ್ಮಿಯಾಗುವದು ಕೈಕಷ್ಟದಿಂದ ಕೂಡಿಸುವವನು ಹೆಚ್ಚಿಸುವ
ನು. ವೃದ್ಧಕ್ಕೆ ಹೋಗುವ ನಿರೀಕ್ಷೆಯು ಹೃದಯವನ್ನು ನೋಯಿಸು .೧೨
ತ್ತದೆ ಆಶೆಯು ಸಾಧಿಸುವದು ಜೀವವೃಕ್ಷವೇ. ವಾಕ್ಯವನ್ನು ತಿರಸ್ಕರಿಸು ೧೩
ವವನು ಅದಕ್ಕೆ ಹೊಣೆಯಾಗುವನು ಅಪ್ಪಣೆಯನ್ನು ಹೆದರು
ವವನಿಗೆ ಪ್ರತಿಫಲ (=ಬದಲು) ಸಿಕ್ಕುವದು. ಜ್ಞಾನಿಯ ಉಪದೇಶವು ೧೪.
ಮರಣದ ಉರುಳುಗಳಿಗೆ ಅಗಲುವಕ್ಕೆ (ತಪ್ಪ-) ಜೀವದ ಬುಗ್ಗೆಯು.
ಒಳ್ಳೇ ಬೋಧವು ಕೃಪೆಯನ್ನು ತರುವದು (೩, ೪.) ವಂಚಕರ .೧೫

೧೬. ಮಾರ್ಗವು ಮುಗಿಯಲಿಕ್ಕಿಲ್ಲ. ಎಲ್ಲಾ ಯುಕ್ತಿವಂತನೂ ತಿಳುವಳಿಕೆಯಿಂದ ನಡೆದು
೧೭. ಕೊಳ್ಳುತ್ತಾನೆ; ಬುದ್ಧಿಹೀನನು ಮೂಢತ್ವವನ್ನು ಹಬ್ಬಿಸುತ್ತಾನೆ, (೧೭,೧೩). ದುಷ್ಟ
ದೂತನು ಕೇಡಿನಲ್ಲಿ ಬೀಳುವನು ನಂಬಿಕೆಯುಳ್ಳ ದೂತನು =(ಜಬಗಾರನು)
ಚಿಕಿತ್ಸೆಯೇ
೧೮. ಶಿಕ್ಷೆಯನ್ನು ತಳ್ಳುವವನಿಗೆ ದಾರಿದ್ರ್ಯವೂ ಮಾನಭಂಗವೂ, ಗದರಿಕೆಯನ್ನು
೧೯. ಕಾಯುವವನಿಗೆ ಬಹುಮಾನವು (ಉಂಟಾಗುವದು). ಆಶೆಯು ಸಾಧಿಸುವದು
ಮನಸ್ಸಿಗೆ ಸಿಹಿಯಾಗುವದು ಬುದ್ಧಿಹೀನರಿಗೆ ಅಸಹ್ಯವಾದದ್ದು ಕೇಡಿಗೆ
೨೦. ತೊಲಗುವದೇ. ಜ್ಞಾನಿಗಳ ಸಂಗಡ ನಡೆದು ಕೊಂಡು ಜ್ಞಾನಿಯಾಗು ಹೆಡ್ಡ
ರಲ್ಲಿ ಮಮತೆಯುಳ್ಳವನು ಕೆಟ್ಟು ಹೋಗುವನು.
೨೧. ಪಾಪಿಗಳನು ಕೆಟ್ಟತನವು ಹಿಂದಟ್ಟುವದು; ನೀತಿವಂತರಿಗೆ (ಯೆ
೨೨. ಹೋವನು) ಮೇಲನ್ನು ಬದಲು ಕೊಡುವನು. ಒಳ್ಳೆಯವನು ಮಕ್ಕಳ
ಮಕ್ಕಳನು ಬಾಧ್ಯತೆಯು ಹೊಂದುವ ಹಾಗೆ ಮಾಡುವನು ಆದರೆ ಪಾ
೨೩. ಪಿಯ ಧನವು ನೀತಿವಂತನಿಗೆ ಸಂಗ್ರಹವಾಗಿರುತ್ತದೆ. ದರಿದ್ರರು ಹೊಸಸಾ
ಗುವಳಿ ಮಾಡುವದರಲ್ಲಿ ಆಹಾರವು ಬಹಳವದೆ. ಅನ್ಯಾಯದಿಂದ ಹೋ
೨೪. ರಿ ಹೋಗುವ (ಹಾಡ್ದ)ವನೂ ಇದ್ದಾನೆ. ಬೆತ್ತವನ್ನು ಸಾಕು ಮಾಡುವವನು
ತನ್ನ ಮಗನನ್ನು ಹಗೆ ಮಾಡುತ್ತಾನೆ. ಅವನನ್ನು ಪ್ರೀತಿಸುವವನು ಚೆಂನಾಗಿ
೨೫. (ಬೇಗ) ಶಿಕ್ಷಿಸಲಿಕ್ಕೆ ಆರಂಭ ಮಾಡುತ್ತಾನೆ. ನೀತಿವಂತನು ಇಚ್ಛೆಗೆ ತೃಪ್ತಿ
ಯಾಗುವ ವರೆಗೆ ಉಣ್ಣುತ್ತಾನೆ ದುಷ್ಟರ ಹೊಟ್ಟೆಗೆ ಕೊರತೆಯುಂಟಾಗುವದು

೧೪ ಸಂಧಿ

೧. ಹೆಂಗಸರ ಜ್ಞಾನವು ತಂನ ಮನೆಯನ್ನು ಕಟ್ಟುತ್ತದೆ ಹೆಡ್ಡುತನವು

ಸ್ವಂತ ಕೈಗಳಿಂದ ಅದನ್ನು ಮುರಿಯುವಳು. ಯೆಹೋವನನ್ನು ಭಯಪಡು- ೨
ವವನು ತನ್ನ ಸನ್ಮಾರ್ಗದಲ್ಲಿ ನಡೆದುಕೊಳ್ಳುತ್ತಾನೆ. ಅವನನ್ನು ಧಿಕ್ಕರಿಸುವವನು
ತನ್ನ ಮಾರ್ಗಗಳನ್ನು ಡೊಂಕು ಮಾಡುತ್ತಾನೆ. ಮೂಢನ ಬಾಯಿಯಲ್ಲಿ ೩
ಸ್ವಗರ್ವಕ್ಕೆ ದಂಡು ಬೆತ್ತವದೆ. ಜ್ಞಾನಿಗಳ ಅಧರವನ್ನು (ಜ್ಞಾನವು)
ಕಾಯುವದು.

ಎತ್ತುಗಳು ಇಲ್ಲದಿದ್ದರೆ ಕೊಟ್ಟಿಗೆ ಶುಚಿಯಾಗಿದೆ ಎತ್ತಿನ ಶಕ್ತಿಯಿಂದ ೪
ಆದಾಯ ಹೆಚ್ಚು. ನಂಬಿಕೆಯುಳ್ಳ ಸಾಕ್ಷಿ ಸುಳ್ಳು ಹೇಳನು ಸುಳ್ಳು ೫
ಸಾಕ್ಷಿ ಕಪಟಗಳನ್ನು ಊದುವವನು (೬ ೧೯). ಕುಚೇಷ್ಟೆಗಾರನು ೬
ಜ್ಞಾನವನ್ನು ಹುಡುಕಿದಾಗ ಅದು ಇಲ್ಲದಿರುತ್ತದೆ ಬುದ್ಧಿವಂತನಿಗೆ ಅರಿವು
ಸುಲಭ. ಬುದ್ಧಿಹೀನನ ಮುಂದುಗಡೆಯಿಂದ ತೊಲಗಿ ಹೋಗು ತಿಳುವಳಿ- ೭
ಕೆಯುಳ್ಳ ಅಧರಗಳು (ಅಲ್ಲಿ) ತಿಳಿಯ ಬರಲಿಲ್ಲವಲ್ಲ.

ಯುಕ್ತಿವಂತನ ಜ್ಞಾನವಾಗಿರುವಂಥಾದ್ದು ತನ್ನ ಮಾರ್ಗವನ್ನು ವಿವೇಚಿ- ೮
ಸುವದೇ ಮೂಢರ ಹೆಡ್ಡತನವು ಮೋಸವೇ. ಹೆಡ್ಡರನ್ನು ಅಪರಾಧಬಲಿ- ೯
ಯು ಅಸಹ್ಯ ಮಾಡುವದು. ನೆಟ್ಟನೆಯವರಿಗೆ ಪರಸ್ಪರ ಮೆಚ್ಚಿಕೆಯಾ-
ಗುವದು. ಹೃದಯವು ತನ್ನ ಪ್ರಾಣದ ಕಹಿಯನ್ನು ತಿಳಿಯುತ್ತದೆ ಅದ- ೧೦
ರ ಸಂತೋಷದಲ್ಲಿಯೂ ಪರನು ಗಾಢವೆಗೆ ಹೊಯದಿರಲಿ.

ದುಷ್ಟರ ಮನೆಯು ಸಂಪೂರ್ಣವಾಗಿ ಹಾಳಾಗುವದು ನೆಟ್ಟನೆಯವರ ೧೧
ಗುಡಾರವು ಹೂಬಿಡುವದು. ಅವನವನಿಗೆ ಸಮವೆಂತ ಕಾಣುವ ಮಾರ್ಗ ೧೨
ಉಂಟು. ಆದರೆ ಅದರ ಅಂತ್ಯವು ಮರಣದ ಮಾರ್ಗಗಳೇ. ನಗೆಯಲ್ಲಿ ೧೩
ಯೂ ಹೃದಯವು ನೋಯುವದು ಸಂತೋಷದ ಅಂತ್ಯವು ಖೇದವಾಗಲಿಕ್ಕೆ

೧೪. ಸಾಹು. ಹೃದಯ ಹಿಂಜರಿಯುವವನು ತನ್ನ ಮಾರ್ಗಗಳಿಂದ ತೃಪ್ತನಾಗುವನು;
೧೫. ಒಳ್ಳೇ ಮನುಷ್ಯನು ತನ್ನ ಮೇಲೆ ಇರುವದರಿಂದ. ಅಜ್ಞನು ಎಲ್ಲಾ ಮಾತನ್ನು
೧೬. ನಂಬುವನು ಯುಕ್ತಿವಂತನು ತನ್ನ ನಡೆಯನ್ನು ವಿವೇಚಿಸುವನು (೮). ಜ್ಞಾನಿಯು ಭಯಪಟ್ಟು ಕೇಡಿನಿಂದ ತೊಲಗುತ್ತಾನೆ. ಬುದ್ಧಿಹೀನನು ನಿರ್ಭಯನಾಗಿ ಎದೆಗಾಳುವನು.

೧೭. ಮುಂಗೋಪಿಯು ಮೌಢ್ಯವನ್ನು ಮಾಡುತ್ತಾನೆ ಕೊಂಕುಯುಕ್ತಿಗಾರನು
೧೮. ಹಗೆ ಮಾಡಲ್ಪಡುವನು. ಅಜ್ಞರ ಬಾಧ್ಯತೆಯು ಮೌಢ್ಯವು ಕುಶಲವಂತರು
೧೯. ಅರುವನ್ನು ಕಿರೀಟವಾಗಿ ಧರಿಸುವರು. ಆಗದವರು ಒಳ್ಳೆಯವರ ಮುಂದೆಯೂ ದುಷ್ಟರು ನೀತಿವಂತರ ಹೊರಾರ ಬಾಗಲಲ್ಲಿಯೂ ಕೈಮುಗಿದು (ಬಾಗಿ) ನಿಲ್ಲುವರು.

೨೦. ತನ್ನ ನೆರೆಯವನಿಂದಲೂ ದರಿದ್ರನು ಹಗೆ ಮಾಡಲ್ಪಡುವನು ಧನವಂತನನ್ನು
೨೧. ಪ್ರೀತಿಸುವವರು ಅನೇಕರು. ಜೊತೆಗಾರನನ್ನು ಧಿಕ್ಕರಿಸುವವನು ಪಾಪಿ ಸಾ
೨೨. ಧುಜನರಿಗೆ ಕನಿಕರಿಸುವವನು ಹೋ ಧನ್ಯನು! ಕೇಡನ್ನು ಹೊಂಚಿಕೆ ಮಾಡುವವರು ದಣಿದು ಹೋಗುವದಿಲ್ಲವೋ, ಮೇಲನ್ನು ಹೊಂಚಿಕೆ ಮಾಡುವವರಿಗೆ ದಯವೂ ಸತ್ಯವೂ ಉಂಟಾಗುವದು.

೨೩. ಎಲ್ಲಾ ಕಷ್ಟದಲ್ಲಿಯೂ ಲಾಭ ಉಂಟಾಗುವದು; ತುಟಿಗಳ ಮಾತು ಕೊರತೆಯನ್ನು ಮಾತ್ರ ಉಂಟು ಮಾಡುವದು. (ತುಟಿಗಳ ಮಾತು ಕೊರತೆಯನ್ನು
೨೪. ಮಾತ್ರ ಉಂಟುಮಾಡುವದು). ಜ್ಞಾನಿಗಳ ಕಿರೀಟವು ಅವರ ಐಶ್ವರ್ಯವೇ
೨೫. ಮೂಢರ ಮೌಢ್ಯ ಮೌಢ್ಯವೇ. ಪ್ರಾಣಗಳನ್ನು ಉದ್ಧರಿಸುವದು ಸತ್ಯಸಾಕ್ಷಿಯಾದವನು ಕಪಟಗಳನ್ನು ಉಸುರುವವನು ಮೋಸವೇ (ಅ)

ಯಶೋಧನನ ಕಾರ್ಯದಲ್ಲಿ ಬಲವಾದ ಆಶ್ರಯ ಅಂಥವನ ಮಕ್ಕ ೨೬
ಳಿಗೂ ಶರಣಾಗಿರುವದು. ಯಶೋಧನನ ಕಾರ್ಯವು ಮರಣದ ಉರುಳು ೨೭
ಗಳಿಗೆ ಅಗಲಿಕ್ಕೆ ಜೀವದ ಬುಗ್ಗೆ (೧೩.೧೪.). ಜನರ ಸಮೃದ್ಧಿಯಲ್ಲೇ ೨೮
ರಾಜನ ಪ್ರಾಕಾವನ್ನು ಪ್ರಜೆಗಳ ಕೊರತೆಯಲ್ಲಿ ಅರಸನ ನಾಶನವು (ಆಗಿದೆ)
ದೀರ್ಘಶಾಂತಿಯುಳ್ಳವನು ವಿವೇಕಪೂರ್ಣನು ಹ್ರಸ್ವಶಾಂತಿಯುಳ್ಳವನು ೨೯
ಮೂಢತ್ವವನ್ನು ಹೊರಡಿಸುವನು. ಮಾಂಸಗಳಿಗೆ ಜೀವವಾಗಿರುವಂಥಾದ್ದು ಶಾಂತ ೩೦
ಹೃದಯವೇ ಎಲುಬುಗಳಿಗೆ ಹುಳುಕು ಉಗ್ರವೇ.

ಬಡವನನ್ನು ಪೀಡಿಸುವವನು ಆತನನ್ನು ಉಂಟುಮಾಡಿದವನನ್ನು ೩೧
ನಿಂದಿಸುತ್ತಾನೆ ಆತನನ್ನು ಮಹಿಮೆಪಡಿಸುವವನು ಬಡವನನ್ನು
ಕನಿಕರಿಸುತ್ತಾನೆ. ದುಷ್ಟನು ದುರ್ಗತಿ ಬಂದರೆ ತಳ್ಳಿಬಿಡಲ್ಪಡುವನು, ನೀತಿ ೩೨
ವಂತನು ಮರಣದಲ್ಲಿಯೂ ಆಶ್ರಯವುಳ್ಳವನು. ವಿವೇಕಿಯ ೩೩
ಹೃದಯದಲ್ಲಿ ಜ್ಞಾನವು ವಿಶ್ರಮಿಸಿ ಕೊಳ್ಳುತ್ತದೆ ಬುದ್ಧಿಹೀನರ ಮಧ್ಯ
ದಲ್ಲಿ ಅದು ತಿಳಿಸಲ್ಪಡುವದು. ನೀತಿ ಎಂಬುದು ಜನಾಂಗವನ್ನು ಉನ್ನತ ೩೪
ಮಾಡುವದು ವಂಶಗಳ (ದುಷ್ಕೃತ್ಯ) ನಿಂದೆಯು ಪಾಪವೇ. ಬಾಧೆಯು ೩೫
ಳ್ಳ ದಾಸನಿಗೆ ರಾಜನ ಮೆಚ್ಚಿಕೆ, ~~ಆತನ ಮೆಚ್ಚಿಕೆ~~ ನಿಂದ್ಯನಾದವನಿಗೆ
ಆತನ ಉಗ್ರತೆ.

೧೫ ಸಂಧಿ.

ಶಾಂತವಾದ ಉತ್ತರವು ಉರಿಯನ್ನು (ಕೋಪವನ್ನು) ಶಮನ ಮಾಡು ೧
ವದು ಕಠಿನವಾಕ್ಯವು ಕೋಪವನ್ನು ಎಬ್ಬಿಸುವದು. ಜ್ಞಾನಿಗಳ ನಾಲಿಗೆ ೨
ಯು ಒಳ್ಳೇ ಅರಿವನ್ನು ಕೊಡುವದು ಬುದ್ಧಿಹೀನರ ಬಾಯಿ ಮೂಢತ್ವ

೩ ವನ್ನು ಮುಕ್ಕಳಿಸುತ್ತದೆ. ಎಲ್ಲಾ ಸ್ಥಳಗಳಲ್ಲಿಯೂ ಯೆಹೋವನ ಕಣ್ಣುಗಳು
೪ ಅವೆ ದುರ್ಜನರನ್ನೂ ಸಜ್ಜನರನ್ನೂ ಹೊಂಚಿ ನೋಡಲಿಕ್ಕಾಗಿಯೇ. ನಾಲಿ
ಗೆಯಿಂದಾಗುವ ಶಮನವು ~~[illegible]~~ ಜೀವವೃಕ್ಷವೇ ಅದರಲ್ಲಿರುವ ವಕ್ರ
New line
೫ ತನವು ಆತ್ಮದಲ್ಲಿರುವ ಘಾಯವೇ. | ಬುದ್ಧಿಹೀನನು ಅಪ್ಪನ ಶಿಕ್ಷೆಯನ್ನು ಅ
೬ ಸಡ್ಡೆಮಾಡುವನು. ಆಕ್ಷೇಪವನ್ನು ಕಾಯುವವನು ಯುಕ್ತಿವಂತನಾಗುವನು. ನೀತಿವಂತ
ನ ಮನೆಯಲ್ಲಿ ಬಹಳ ನಿಧಿಯೂ ದುಷ್ಟರ ಹುಟ್ಟುವಳಿಯಲ್ಲಿ ಕಲಾಪವೂ ಅದೆ.
೭ ಜ್ಞಾನಿಗಳ ಹೃದಯವು ಅರುವನ್ನು ಚೆಲ್ಲುವದು (ಹರಡುವದು), [ಆದರೆ] ಬುದ್ಧಿಹೀನರ
೮ ಹೃದಯವು ಹುಟ್ಟಿ ಇಲ್ಲದ್ದು. ದುಷ್ಟರ ಬಲಿಯು ಯೆಹೋವನಿಗೆ ಅಸಹ್ಯ
೯ ನೆಟ್ಟನೆಯವರ ಪ್ರಾರ್ಥನೆಯು ಆತನಿಗೆ ಮೆಚ್ಚಿಕೆ. ಯೆಹೋವನಿಗೆ ಅಸಹ್ಯ
ವಾದದ್ದು ದುಷ್ಟರ ಮಾರ್ಗವು, ನೀತಿಯನ್ನು ಹಿಂಬಟ್ಟುವವನನ್ನು ಪ್ರೀತಿಸುವನು-
೧೦ ಹಾದಿಯನ್ನು ಬಿಡುವವನಿಗೆ ದುಶ್ಶಿಕ್ಷೆ (ನಿಗ್ರಹ) ಆಕ್ಷೇಪವನ್ನು ಹಗೆ ಮಾಡು
ವವನು ಸಾಯುವನು

೧೧ ಪಾತಾಳವೂ ನಾಶನ ಸ್ಥಳವೂ ಯೆಹೋವನ ಕಣ್ಣು ಸಮಕ್ಷದಲ್ಲಿಯೇ
೧೨ ([illegible]) ಮನುಷ್ಯ ಪುತ್ರರ ಹೃದಯಗಳು ಮತ್ತೇನು? ತನ್ನನ್ನು ಗದರಿಸುವ
೧೩ ದು ಕುಚೋದ್ಯಗಾರನು ಪ್ರೀತಿಸನು, ಜ್ಞಾನಿಗಳ ಬಳಿಗೆ ಹೋಗನು. ಸಂತುಷ್ಟ ಹೃ
ದಯವು ಮುಖವನ್ನು ಬೆಳಗಿಸು ಮಾಡುತ್ತದೆ, ಹೃದಯ ವ್ಯಸನದಲ್ಲಿ ಕುಗ್ಗಿದ
೧೪ ಆತ್ಮವು ಅದೆ. ವಿವೇಕಿಯ ಹೃದಯವು ತಿಳುವಳಿಕೆಯನ್ನು ಅರಸುವದು ಬು
ದ್ಧಿಹೀನರ ಬಾಯಿ ಮೂರ್ಖತ್ವವನ್ನು ಉಂಡಾಡುವದು.

೧೫ ಬಡವನ ದಿನಗಳು ಎಲ್ಲಾ ಕೆಟ್ಟವುಗಳಾಗಿವೆ ಹರ್ಷ ಹೃದಯವುಳ್ಳವನು
೧೬ ನಿತ್ಯ ಔತಣವೇ. ಯೆಹೋವನ ಭಯದಲ್ಲಿ ಸ್ವಲ್ಪವಾಗಿರುವಂಥದ್ದು

ತೊಂದರೆ ಸಹಿತವಾದ ಹೆಚ್ಚಾದ ನಿಕ್ಷೇಪಕ್ಕಿಂತ ಲೇಸು. ದ್ವೇಷ ಸಹಿತವಾದ ೧೭
ಕೊಬ್ಬಿದ ಎತ್ತಿಗಿಂತ ಪ್ರೀತಿಯಿರುವಲ್ಲಿ ಆಕಗೇ ಪಲ್ಯ ಲೇಸು. ಉರಿಯುವವನು ೧೮
ಕಲಹಗಳನ್ನು ಹೆಚ್ಚಿಸುತ್ತಾನೆ ದೀರ್ಘ ಶಾಂತಿಯುಳ್ಳವನು ವಿವಾದವನ್ನು
ಅಡಗಿಸುವನು.

ಮೈಗಳ್ಳನ ಮಾರ್ಗವು ಮುಳ್ಳು ಬೇಲಿಗೆ ಸಮನಾಗಿದೆ ನೆಟ್ಟನೆಯವರ ೧೯
ಹಾದಿ ಹೆದ್ದಾರಿ. ಜ್ಞಾನವುಳ್ಳ ಮಗನು ಅಪ್ಪನನ್ನು ಸಂತೋಷಪಡಿಸುವನು ೨೦
ಆದರೆ ಹೆಡ್ಡ ಮನುಷ್ಯನು ತಾಯಿಯನ್ನು ನಿಂದಿಸುತ್ತಾನೆ. ಬುದ್ಧಿಹೀನನಿಗೆ ೨೧
ಮೌಢ್ಯವು ಸಂತೋಷವೇ. ವಿವೇಕಿಯು ನೆಟ್ಟಗೆ ನಡೆವ ತಾಳ್ಳವನು. ಆ ೨೨
ಲೋಚನಾ ಸಭೆ ಇಲ್ಲದಿದ್ದರೆ ನಿರೂಪಣೆಗಳು ವ್ಯರ್ಥವಾಗಿ ಹೋಗು
ವವು ಮಂತ್ರಿಸುವವರು ಹೆಚ್ಚು ಆಗ ಸ್ಥಿರವಾಗುವವು. ತನ್ನ ಬಾಯಿಯ ೨೩
ಪ್ರತ್ಯುತ್ತರದಿಂದ ತನಗೆ ಸಂತೋಷ ತಕ್ಕ ಸಮಯದಲ್ಲಿರುವ ಮಾತು ಎಷ್ಟು
ಚೆಲೋದು.

ಜೀವದ ಹಾದಿಯು ಬೋಧವುಳ್ಳವನಿಗೆ ಮೇಲಕ್ಕೆ ಹೋಗುತ್ತದೆ. ೨೪
ಕೆಳಗೆ ಪಾತಾಳಕ್ಕೆ ಅಗಲೋಕ್ಕಾಗಿಯೇ. ಡಂಭವುಳ್ಳವರ ಮನೆಯನ್ನು ೨೫
ಯೆಹೋವನು ಕೆಡವಿ ಬಿಡುವನು, ಆದರೆ ವಿಧವೆಯ ಮೇರೆಯನ್ನು
ಸ್ಥಿರಪಡಿಸುವನು. ದುರ್ನಿರೂಪಣೆಗಳು ಯೆಹೋವನಿಗೆ ಅಸಹ್ಯವು ೨೬
ಮನೋಹರವಾದ ನುಡಿಗಳು (ಆತನಿಗೆ) ಶುದ್ಧ. ಲೋಭಿತ ಲಬ್ಧನು ಸ್ವಭ ೨೭
ವನವನು ಉಪದ್ರವ ಪಡಿಸುತ್ತಾನೆ. (೧೧, ೨೮.) ಇನಾಮುಗಳನು
ಹಗೆ ಮಾಡುವವನು ಬದುಕುವನು ~~ಬದುಕುವನು~~. ನೀತಿವಂತನ ಹೃದಯವು ೨೮
ಉತ್ತರ ಕೊಡುವದಕ್ಕೆ ಧ್ಯಾನಿಸುತ್ತದೆ ದುಷ್ಟರ ಬಾಯಿ ಕೇಡುಗಳನ್ನು ಮುಕ್ಕಳಿಸುತ್ತದೆ. ೨೯

೨೯ ದುಷ್ಟರಿಗೆ ಯೆಹೋವನು ದೂರಸ್ಥನು ನೀತಿವಂತರ ಪ್ರಾರ್ಥನೆಯನ್ನು ಕೇ
೩೦. ಳುವನು. ಕಂಣುಗಳ ಪ್ರಕಾಶೆಯು ಹೃದಯವನ್ನು ಸಂತೋಷಪಡಿಸುವದು
೩೧. ಒಳ್ಳೇ ಸುದ್ದಿಯು ಎಲುಬನ್ನು ಪುಷ್ಟಿಮಾಡುವದು. ಜೀವದ ಆಕ್ಷೇಪವನ್ನು
೩೨. ಕೇಳುವ ಕಿವಿ ಜ್ಞಾನಿಗಳ ಮಧ್ಯದಲ್ಲಿ ವಾಸಿಸುವದು. ಶಿಕ್ಷೆಯನ್ನು ತಳ್ಳುವವನು
ಸ್ವಪ್ರಾಣವನ್ನು ತಿರಸ್ಕರಿಸುತ್ತಾನೆ ಆಕ್ಷೇಪವನ್ನು ಕೇಳುವವನು ಬುದ್ಧಿ
೩೩. ಸಂಪಾದಿಸು[struck-out]ವನು. ಯೆಹೋವನ ಭಯವು ಜ್ಞಾನದ ಶಿಕ್ಷೆ,
ಘನಕ್ಕೆ ಮುಂಚೆ ತಗ್ಗೆ.

೧೬ ಸಂಧಿ.

೧. ಹೃದಯದ ಸಂನಾಹಗಳು ಮನುಷ್ಯನದು ನಾಲಗೆಗೆ ಪ್ರತ್ಯುತ್ತರ ಬರುವದು
೨. ಯೆಹೋವನಿಂದಲೇ. ತಂನ ಮಾರ್ಗಗಳೆಲ್ಲಾ ತನಗೆ ಸ್ವಚ್ಛವಾಗಿ ತೋರುವವು
೩. ಆತ್ಮಗಳನ್ನು ತೂಗಿ ನೋಡುವವನು ಯೆಹೋವನೇ. ಯೆಹೋವನ ಮೇ
ಲೆ ನಿಂನ ಕ್ರಿಯೆಗಳನ್ನು ಹೊರಿಸು ಆಗ ನಿಂನ ನಿರೂಪಣೆಗಳು ಸ್ಥಿರವಾ
ಗುವವು
೪. ಯೆಹೋವನು ಎಲ್ಲವನ್ನು ತಂನ ಅಭಿಪ್ರಾಯಕ್ಕಾಗಿ ಉಂಟುಮಾಡಿದನು
೫. ದುರ್ದಿನಕ್ಕಾಗಿ [struck-out] ದುಷ್ಟನನ್ನು ಸಹಾ. ಎತ್ತರವಾದ ಮನಸ್ಸುಳ್ಳವನು
ಎಲ್ಲಾ ಯೆಹೋವನಿಗೆ ಅಸಹ್ಯ, ಕೈಗೆ ಕೈ ಸತ್ಯ ಅವನು ನಿರ್ದೋಷಿ
೬. ಎಂತಾಗಲಿಕ್ಕಿಲ್ಲ (೧೧, ೨೧). ದಯಾ ಸತ್ಯಗಳಿಂದ ಅಕ್ರಮಕ್ಕೆ ಪರಿಹಾರ
೭. ವಾಗದು ಕೇಡನ್ನು ಬಿಟ್ಟಗಲುವದು ಯೆಹೋವನ ಭಯದಿಂದಲೇ. ಒಬ್ಬ
ನ ಮಾರ್ಗಗಳಲ್ಲಿ ಯೆಹೋವನು ಮೆಚ್ಚಿದರೆ ಅವನ ಶತ್ರುಗಳನ್ನು ಸಹಾ
೮. ಅವನ ಸಂಗಡ ರಾಜಿ ಮಾಡುವನು. ನ್ಯಾಯವಿಲ್ಲದ ಬಹು ಆದಾಯಕ್ಕಿಂತ

ನೀತಿಯಿಂದಿರುವ ಸ್ವಲ್ಪ ಒಳ್ಳೇದು.

ಮನುಷ್ಯನ ಹೃದಯವು ತನ್ನ ಮಾರ್ಗವನ್ನು ಎಣಿಸಿಕೊಳ್ಳುವದು. ೯
ಅವನ ನಡೆಯನ್ನು ಸ್ಥಿರ ಮಾಡುವದು ಯೆಹೋವನೇ. ಅವನ ತುಟಿ- ೧೦
ಗಳಲ್ಲಿ (ದಿವ್ಯವಾದ) ಅಪ್ಪಣೆಯುಂಟು ನ್ಯಾಯತೀರ್ಪಿನ(ವಿಧಿಯ)ಲ್ಲಿ
ಆತನ ಬಾಯಿ ಉಲ್ಲಂಘಿಸಬಾರದು. ನ್ಯಾಯವಾದ ಪಡಿಯೂ ತಕ್ಕಡಿ- ೧೧
ಯೂ ಯೆಹೋವನಿಗೆ ಮಾತ್ರವೇ ಅವನ ಕ್ರಿಯೆಯು ಸಂಚಿಯಲ್ಲಿರು
ವ ಕಲ್ಲುಗಳೆಲ್ಲಾ. ದುಷ್ಟತೆಯನ್ನು ಮಾಡಿದರೆ ಅರಸರಿಗೆ ಅಸಹ್ಯ, ಸಿಂಹಾ- ೧೨
ಸನಕ್ಕೆ ಸ್ಥಿರತ್ವ ಉಂಟಾಗುವದು ನೀತಿಯಿಂದಲೇ. ನೀತಿಯಧರಗಳು ೧೩
ಅರಸರಿಗೆ ಮೆಚ್ಚಿಕೆ ಸತ್ಯವಾಡುವವನನ್ನು ಪ್ರೀತಿಸುವರು. ಅರಸನ ೧೪
ರೋಷವು ಮರಣದೂತರು ಆದರೆ ಜ್ಞಾನಿಯಾದ ಮನುಷ್ಯನು
ಅದನ್ನು ಶಾಂತಪಡಿಸುವನು. ರಾಜ ಮುಖದ ಬೆಳಕಿನಲ್ಲಿ ಜೀವವುಂಟು. ೧೫
ಅವನ ಮೆಚ್ಚಿಕೆಯು ಹಿಂಗಾರಿ ಮುಗಿಲಿಗೆ ಹೋಲುವದು.

ಜ್ಞಾನವನ್ನು ಸಂಪಾದಿಸು ಅಪರಂಜಿಗಿಂತ ಎಷ್ಟೋ ಒಳ್ಳೇದು! ೧೬
ಬೆಳ್ಳಿಗಿಂತ ಉತ್ತಮವಾದದ್ದು ವಿವೇಕ ಸಂಪಾದನೆಯು. ನೆಟ್ಟನೆಯ ೧೭
ವರ ಹೆದ್ದಾರಿ ಕೇಡಿಗೆ ತೊಲಗುವದೇ ಸ್ವಜೀವವನ್ನು ಕಾಯುವವನು
ತನ್ನ ಮಾರ್ಗವನ್ನು ಕಾಪಾಡುತ್ತಾನೆ. ಹಾನಿ(ಭಂಗ)ಗಿಂತ ಮುಂಚೆ ಡಂಭ. ೧೮
ಎಡವಿಕೆಗಿಂತ ಮುಂಚೆ ಉನ್ನತದ ಜೀವವು. ಸಾಧು ಜನರ ಸಂಗಡ- ೧೯
ಉತ್ತಮ ತಗ್ಗುವದು ಗರ್ವಿಗಳ ಸಂಗಡ ಕೊಳ್ಳೆಯನ್ನು ಪಾಲಿಡು-
ವದಕ್ಕಿಂತ ಲೇಸು. ಮಾತನ್ನು ಗ್ರಹಿಸಿಕೊಳ್ಳುವವನು ಮೇಲನ್ನು ಕಂಡು ೨೦
ಕೊಳ್ಳುವನು ಯೆಹೋವನಲ್ಲಿ ಭರವಸವಿಡುವವನು ಧನ್ಯನು.

೨೧. ಹೃದಯ ಜ್ಞಾನವುಳ್ಳವನು ವಿವೇಕಿ ಎಂದು ಕರೆಯಲ್ಪಡುವನು ಅಧರ ಮಾಧುರ್ಯ
೨೨. ವು ಉಪದೇಶವನ್ನು ವೃದ್ಧಿ ಮಾಡುವದು. ಬೋಧವುಳ್ಳವರಿಗೆ ಅದು ಜೀವದ
೨೩. ಬುಗ್ಗೆ. ಹೆಡ್ಡರ ಶಿಕ್ಷೆಯು ಹೆಡ್ಡತನವೇ. ಜ್ಞಾನಿಯ ಹೃದಯವು ಅ
ವನ ಬಾಯಿಗೆ ಬೋಧವನ್ನು ಕಲಿಸಿ ಅಧರಗಳಲ್ಲಿ ಉಪದೇಶವನ್ನು
೨೪. ವೃದ್ಧಿ ಮಾಡುವದು. ಮನೋಹರವಾಕ್ಯಗಳು ಜೇನು ತೊಟ್ಟೆ ದೇಹಿಗೆ ಮ
ಧುರವೂ ಎಲುಬಿಗೆ ಚಿಕಿತ್ಸೆಯೂ ಆಗಿದೆ.

೨೫. ಅವನವನಿಗೆ ನೆಟ್ಟಗೆಂದು ತೋರುವ ಮಾರ್ಗವುಂಟು ಅದರ ಅಂತ್ಯ
೨೬. ವು ಮರಣದ ಮಾರ್ಗಗಳೇ (೧೪;೧೨.). ಕಷ್ಟ ಮಾಡುವವನ ಆಸೆಯು
ಅವನಿಗಾಗಿ ಕಷ್ಟ ಮಾಡುತ್ತದೆ. ಅವನ ಬಾಯಿ ಅವನನ್ನು ಕೆಲಸ ಮಾಡಿ
ಸುತ್ತದಲ್ಲಾ.

೨೭. ಕೇಡನ್ನು ಅಗೆಯುವವನು ಕೆಡುಕನು ಅವನ ತುಟಿಗಳ ಮೇಲೆ ಉರಿ
೨೮. ಯುವ ಬೆಂಕಿಯಂತೆ. ಕಪಟ ಮನುಷ್ಯನು ಜಗಳಗಳನ್ನು ಕಲ್ಪಿಸುತ್ತಾನೆ
(ಚಾಡಿ ಖೋರನು ಗೆಳೆಯನನ್ನು ಅಗಲಿಸುತ್ತಾನೆ).
೨೯. (೬;೧೪.) ಸಾಹಸಗಾರನು ತನ್ನ ಜೊತೆಗಾರನನ್ನು ವಶೀಕರಣ ಮಾಡಿ ಅ
೩೦ ಗದ ಮಾರ್ಗದಲ್ಲಿ ನಡಿಸುತ್ತಾನೆ. ಕಣ್ಣುಗಳನ್ನು ಮುಚ್ಚಿ ತಪ್ಪುಗಳನ್ನು ನಿರೂಪಿಸಿ
ತುಟಿಗಳನ್ನು ಮುಚ್ಚಿಕೊಳ್ಳುವವನು ಕೇಡನ್ನು ಮಾಡಿಬಿಡುತ್ತಾನೆ.

೩೧. ನರೆ ಎಂಬುದು ಸೌಂದರ್ಯವಾದ ಕಿರೀಟವು ನೀತಿ ಮಾರ್ಗದಲ್ಲಿ ಅದಕ್ಕೆ ಮುಟ್ಟ
೩೨. ಬಹುದು. ವೀರನಿಗಿಂತಲೂ ದೀರ್ಘಶಾಂತಿಯುಳ್ಳವನು ತನ್ನ ಆತ್ಮವನ್ನು ಆ
೩೩. ಳುವವನು ನಗರವನ್ನು ಸ್ವಾಧೀನ ಮಾಡಿಕೊಳ್ಳುವವನಿಗಿಂತ (ಲೇಸು). ಚೀಟನ್ನು
ಉಡಿಯಲ್ಲಿ ಎಸೆಯುವರು ಆದರೆ ಅದರ ತೀರ್ಪು ಯೆಹೋವನಿಂದಲೇ.

ವಿವಾದ ಬಲಿಗಳು ತುಂಬಿದ ಮನೆಯಿಂತ ಸಮಾಧಾನದೊಂದಿಗೆ ಒಣಗಿ ೧
ದ ತುಂಡು(ಲೇಸು) ವಾಸಿ. ಬೋಧವುಳ್ಳ ದಾಸನು(ಯೆಜಮಾನನ) ೨
ನಿಂದ್ಯ ಪುತ್ರನನ್ನು ಆಳ್ವ ಸಹೋದರರ ಮಧ್ಯದಲ್ಲಿ ಬಾಧ್ಯತೆಯನ್ನು
ಪಾಲಿಡುವನು. ಬೆಳ್ಳಿಗೆ ಮೂಸೆಯೂ(ಪುಟವೂ) ಚಿನ್ನಕ್ಕೆ ಕುಲುಮೆ ೩
ಯೂ (ಒಲೆಯೂ) ಹೃದಯಗಳನ್ನು ಶೋಧಿಸುವವನು ಯೆಹೋವನೇ.
ದುಷ್ಟನು ಅಕೃತ್ಯಾಧರಗಳಿಗೆ ಲಕ್ಷ್ಯಕೊಡುತ್ತಾನೆ ಸುಳ್ಳುಗಳ ನಾಲಿಗೆಯ ೪
ಮೇಲೆ ಕಪಟವು ಲಕ್ಷ್ಯ(ಕಿವಿ)ಕೊಡುತ್ತದೆ. ಬಡವನನ್ನು ಗೇಲಿ ಮಾಡು ೫
ವವನು ಅವನನ್ನು ಉಂಟುಮಾಡಿದವನನ್ನು ನಿಂದಿಸುತ್ತಾನೆ ವಿಪತ್ತಿನಲ್ಲಿ
ಸಂತೋಷಪಡುವವನು ನಿರ್ದೋಷನೆಂದಾಗಲಿಕ್ಕಿಲ್ಲ

ಮುದುಕರ ಕಿರೀಟವಾಗಿರುವಂಥಾದ್ದು ಮಕ್ಕಳ ಮಕ್ಕಳು ಮಕ್ಕಳಿಗೆ ೬
ಭೂಷಣವು ಅವರ ತಂದೆಗಳೇ. ಶ್ರೇಷ್ಠತೆಯ ಅಧರವು ಹೆಡ್ಡನಿಗೆ ಒಪ್ಪು ೭
ವಂಥಾದ್ದಲ್ಲ ಉದಾರನಿಗೆ ಕಪಟಾಧರವು ಅದಕ್ಕಿಂತ ಕಡೆ (ಮತ್ತೇನು). ಲಂಚ ೮
ವು ಅದನ್ನು ಹೊಂದುವವನಿಗೆ (ವಾರಸುದಾರನಿಗೆ) ಲಾವಣ್ಯಕಲ್ಲು
ಎಂತ ತೋರುವದು ಯಾವ ಕಡೆಗೆ ತಿರುಗಿದರೂ ಸಾಧ್ಯವೆಂದಾಗುವದು.
ಪ್ರೀತಿಯನ್ನು ಅರಸುವವನು ದ್ರೋಹವನ್ನು ಮುಚ್ಚುತ್ತಾನೆ ಆವರ್ತಿಸಿ ಹೇ ೯
ಳುವವನು ಗೆಳೆಯನನ್ನು ಅಗಲಿಸುತ್ತಾನೆ (೧೬, ೨೮.)

ಮೂರ್ಖನನ್ನು ನೂರು ಹೊಡೆಯುವದಕ್ಕಿಂತ ಬುದ್ಧಿವಂತನಲ್ಲಿ ಗದ ೧೦
ರಿಕೆಯು ಆಳವಾಗಿ ಹೋಗುವದು. ಮತ್ಸರಿಯು ಕೇಡನ್ನು ಮಾತ್ರ ಹುಡು ೧೧
ಕುವನು ಅವನ ಕಡೆಗೆ ಕ್ರೂರ ದೂತನು ಕಳುಹಿಸಲ್ಪಡುವನು. ಮರಿಗಳು ೧೨
ಕಳಕೊಂಡ ಕರಡಿಯು ಕನನೆ ಎದುರಾಗಲಿ ಹೆಡ್ಡನು ಮಾತ್ರ ತಂನ

೧೩. ಹೊಟ್ಟೆತನದಲ್ಲಿ ಬಾರದು. ಮೇಲಿಗೆ ಬದಲಾಗಿ ಕೇಡು ಬರಮಾಡಿದರೆ ಅವನ
೧೪. ಮನೆಯಿಂದ ಕೇಡು ತೊಲಗದು. ನೀರು ಸೋರುವ ಹಾಗೆ ಜಗಳದ ಆರಂಭ
ವು (ತಟ್ಟು) ಮುರಿಯುವದಕ್ಕಿಂತ ಮುಂಚೆ ವಿವಾದವನ್ನು ನಿಲ್ಲಿಸು.

೧೫. ದುಷ್ಟನನ್ನು ನೀತಿ ನಿರ್ಣಯಿಸುವವನು ನೀತಿವಂತನನ್ನು ದುಷ್ಟನೆಂತ ನಿರ್ಣ
೧೬. ಯಿಸುವವನು ಇವರಿಬ್ಬರೂ ಯೆಹೋವನಿಗೆ ಅಸಹ್ಯ. ಮನಸ್ಸಿಲ್ಲದ ಕೈಯ
ಲ್ಲಿ ಜ್ಞಾನವನ್ನು ಸಂಪಾದಿಸಲಿಕ್ಕೆ ಮೂರ್ಖನ ಕೈಯಲ್ಲಿ ಈ ದ್ರವ್ಯವಿರುವದು
೧೭. ಯಾಕೆ? ಗೆಳೆಯನು ಎಲ್ಲಾ ಕಾಲದಲ್ಲಿ ಪ್ರೀತಿಸುತ್ತಾನೆ ಇಕ್ಕಟ್ಟಿಗೆ ಸಹೋ
೧೮. ದರನಾಗಿ ಹುಟ್ಟುವನು. [ಇಕ್ಕಟ್ಟಿಗೆ ಸಹೋದರನಾಗಿ ಹುಟ್ಟುವನು]. ಜತೆ
ಗಾರನ ಮುಂದೆ ಉತ್ತರವಾದಿಯಾಗಲಿಕ್ಕೆ ಕೈ ಹೊಡಿಯುವ ಮನುಷ್ಯನು ಬು
ದ್ಧಿಹೀನನು

೧೯. ವಾಗ್ವಾದ ಪ್ರೀತಿಸುವವನು ದ್ರೋಹವನ್ನು ಪ್ರೀತಿಸುತ್ತಾನೆ. ತನ್ನ
೨೦. ಬಾಗಲನ್ನು ಎತ್ತರ ಮಾಡುವವನು ನಾಶವನ್ನು ಹುಡುಕುತ್ತಾನೆ. ಹೃದಯ
ವಕ್ರನು ಮೇಲನ್ನು ~~ಹುಡುಕುತ್ತಾನೆ~~ ಕಾಣನು ನಾಲಿಗೆಯ ತಿರುಗುವವನು ಕೇ
೨೧. ಡಿನಲ್ಲಿ ಬೀಳುವನು. ಮೂರ್ಖನನ್ನು ಹೆತ್ತವ ತನ್ನ ಶೋಕಕ್ಕಾಗಿರುವನು
೨೨. ಹೆಡ್ಡನ ಅಪ್ಪನು ಸಂತೋಷಪಡನು ಸಹ. ಸಂತುಷ್ಟ ಹೃದಯವು ದೇ
ಹವನ್ನು ಸುಖಪಡಿಸುವದು ಜಜ್ಜಿದ ಆತ್ಮವು ಎಲುಬನ್ನು ಒಣಗಿಸುವದು

೨೩. ಉಡಿಯಿಂದ ಲಂಚವನ್ನು ದುಷ್ಟನು ತಕ್ಕೊಳ್ಳುವದು ನೀತಿಹಾದಿಗಳನ್ನು
೨೪. ಸೊಟ್ಟಗೆ ಮಾಡಲಿಕ್ಕಾಗಿಯೇ. ಬುದ್ಧಿವಂತರ ಗುರಿ ಜ್ಞಾನವೇ ಆದರೆ ಮೂ
೨೫. ರ್ಖನ ಕಣ್ಣುಗಳು ಭೂಮಿಯ ಅಂತ್ಯದಲ್ಲಿ. ಮೂರ್ಖ ಪುತ್ರನು ಅಪ್ಪನಿಗೆ ವ್ಯ
೨೬. ಸನವೂ ಜನನಿಗೆ ಕಹಿಯೂ ಆಗಿದ್ದಾನೆ. ನೀತಿವಂತನಿಗೆ ದಂಡ ತಕ್ಕ

ಳ್ಳವದೂ ಉದಾರತನ ಸತ್ಯದ ನಿಮಿತ್ತ ಹೋರಾಡುವದೂ ಒಳ್ಳೆ
ದಲ್ಲ. ತನ್ನ ಮಾತುಗಳನ್ನು ಬಿಗಿಹಿಡಿಯುವವನು ಅರುವನ್ನು ತಿಳಿಯುತ್ತಾನೆ, ಶೀತಾ ೨೭
ತ್ಮವುಳ್ಳವನು ವಿವೇಕಿಯು. ಉಸುರದಿದ್ದರೆ ಬುದ್ಧಿಹೀನನೂ ಜ್ಞಾನಿಯೆಂತ
ತೋರುವನು ತನ್ನ ಅಧರಗಳನ್ನು ಮುಚ್ಚುವವನು ವಿವೇಕಿಯು.

೧೮. ಸಂಧಿ.

ತನ್ನನ್ನು ಪ್ರತ್ಯೇಕಿಸಿ ಕೊಳ್ಳುವವನು ಸ್ವೇಚ್ಛೆಯನ್ನು ಹುಡುಕುತ್ತಾನೆ ೧
ಎಲ್ಲಾ ವಾಸ್ತವ್ಯಕ್ಕೆ ತಕರಾರು ಮಾಡುವವನು. ತನ್ನ ಹೃದಯವನ್ನು ತಾನು ಬ ೨
ಯಲು ಪಡಿಸುವದರಲ್ಲೇ ಹೊರತು ವಿವೇಕದಲ್ಲಿ ಹೆಡ್ಡನಿಗೆ ಮೆಚ್ಚಿಕೆ
ಇಲ್ಲ. ದುಷ್ಟನು ಬಂದು ಧಿಕ್ಕಾರವೂ ಬರುತ್ತದೆ ಅವಮಾನದ ಸಂಗಡ ೩
ನಿಂದೆ ಸಹಾ.

ಗಂಭೀರ ಬಾವಿ ಮಾತುಗಳು ಬಾಯೊಳಗಿನ ನೀರು ಜ್ಞಾನದ ಬುಗ್ಗೆ ೪
ಯು ದಡದಡ ಹರಿಯುವ ಹೊಳೆ. ನ್ಯಾಯ ತೀರ್ಪಿನಲ್ಲಿ ನೀತಿವಂತ ೫
ನನ್ನು ಮುಣಿಸಲಿಕ್ಕೆ ದುಷ್ಟನಿಗಾಗಿ ಮುಖದಾಕ್ಷಿಣ್ಯವು ಒಳ್ಳೇದಲ್ಲ.
ಮೂಢನ ತುಟಿಗಳು ವಿವಾದದಲ್ಲಿ ದಾಟಿಸುವವು ಅವನ ಬಾಯಿ ಪೆಟ್ಟುಗ ೬
ಳಿಗಾಗಿ ಕೂಗುತ್ತದೆ. ಮೂಢನ ಬಾಯಿ ಅವನಿಗೆನೇ ನಾಶನ ಅವನ ತು ೭
ಟಿಗಳು ಸ್ವಪ್ರಾಣಕ್ಕೆ ಉರುಳು. ಚಾಡಿಗಾರನ ಮಾತುಗಳು ಫಲಹಾರಗಳ ೮
ಹಾಗೆ ಒಡಲಿನ ಒಳ ಭಾಗಗಳಲ್ಲಿ ಇಳಿಯುತ್ತವೆ. ತನ್ನ ಉದ್ಯೋಗ ೯
ದಲ್ಲಿ ಮೈಗಳ್ಳನಾದವನು ಸಹಾ ಮೈಗಳ್ಳನ ತಮ್ಮನೇ.

ಯೆಹೋವನ ನಾಮವು ಬಲವಾದ ಗೋಪುರವಾಗಿದೆ ಅದಕ್ಕೆ ೧೦
ನೀತಿವಂತನು ಓಡಿ ಎತ್ತರದಲ್ಲಿ ಸುಖವಾಗಿರುವನು. ಐಶ್ವರ್ಯವಂತನ ೧೧

ಸಂಪತ್ತು ಧನಿಕನಿಗೆ ಬಲವಾದ ನಗರವು (೧೦, ೧೫.) ಉನ್ನತವಾದ
೧೨. ಗೋಡೆಯಂತೆ ಅವನ ಭಾವನೆ ([illegible]). ನಾಶನಕ್ಕಿಂತ ಮುಂಚೆ ಜಬ್ಬನ
ಹೃದಯವು ಉಬ್ಬುವದು (೧೬; ೧೮.) ಘನತೆಕ್ಕಿಂತ ಮುಂಚೆ ದೈನ್ಯವು.
೧೩. (೧೫; ೨೨.) ಕೇಳುವದಕ್ಕಿಂತ ಮೊದಲು ಉತ್ತರ ಹೇಳುವರಿಗೆ ಅದು ಅವನ
೧೪. ಗೆ ಮೂಢತ್ವವೂ ನಾಚಿಕೆಯೂ (ಆಗಿರುವದು.) ಗಂಡಸಿನ ಆತ್ಮವು ಸ್ವಾ
ಧಿಯನ್ನು ತಾಳುವದು ಆದರೆ ಜಜ್ಜಿದ ಆತ್ಮವನ್ನು ತಾಳುವವನ್ಯಾರು?
೧೫. ವಿವೇಕಿಯ ಹೃದಯವು ಅರುವನ್ನು ಸಂಪಾದಿಸುವದು (೧೫; ೧೪.)
ಜ್ಞಾನಿಗಳ ಕಿವಿ ಅರುವನ್ನು ಅರಸುವದು.
೧೬. ಮನುಷ್ಯನ ದಾನವು ಅವನಿಗೆ ವಿಶಾಲತೆಯನ್ನುಂಟುಮಾಡಿ ಅವನನ್ನು
೧೭. ದೊಡ್ಡವರ (ಮಹತ್ತುಗಳ) ಸಂನಿಧಾನಕ್ಕೆ ನಡಿಸುವದು. ವಿವಾದದಲ್ಲಿ ಮೊದ
ಲನೆಯವನು ನೀತಿವಂತನಂತೆ ತೋರುವನು ಆದರೆ ಅವನ ನೆರೆಯವನು ಬಂದು ಅವನನ್ನು
೧೮. ಪರೀಕ್ಷಿಸುವನು. ಚೀಟು ಹಾಕುವದು ವ್ಯಾಜ್ಯಗಳನ್ನು ನಿಲ್ಲಿಸಿ ಬಲವಂತರನ್ನು
೧೯. ಅಗಲಿಸುತ್ತದೆ. ದ್ರೋಹಿತ ಸಹೋದರನು ಬಲವುಳ್ಳ ನಗರಕ್ಕಿಂತ ಎಮರು ನಿ
ಲ್ಲುತ್ತಾನೆ ವ್ಯಾಜ್ಯಗಳು ಅರಮನೆಯ ಅಗುಳಿಯಂತೆ.
೨೦. ತನ್ನ ಬಾಯಿ ಫಲದಿಂದ ಮನುಷ್ಯನ ಹೊಟ್ಟೆ ತೃಪ್ತಿಯಾಗುವದು
(೧೨, ೧೪.) ತನ್ನ ತುಟಿಗಳ ಆದಾಯದಿಂದ ತೃಪ್ತನಾಗುವನು.
೨೧. ಜೀವ ಮರಣಗಳು ನಾಲಿಗೆಯ ವಶದಲ್ಲಿಯೇ (ಕೈಯಲ್ಲಿ) ಅದರ (ಮೇಲೆ)
೨೨. ಉಳ್ಳವನೆಲ್ಲಾ ಅದರ ಫಲ ತಿನ್ನುವನು. ಹೆಂಡತಿಯನ್ನು [illegible] ಮೇಲು
೨೩. ಪಡೆದುಕೊಳ್ಳುವವನು ಮೆಚ್ಚಿಕೆ [illegible]. ದರಿದ್ರನು ವಿಜ್ಞಾಪನೆಗಳು ಮಾಡು
೨೪. ದನು ಐಶ್ವರ್ಯವಂತನ ಉತ್ತರವು ಕಠಿನವೇ. ಗೆಳೆಯರು (ಹೆಚ್ಚು)

ಆದರೆ ದುಃಖಿಗಳು ಹೆಚ್ಚು ಸಹೋದರನಿಗಿಂತ ಅಂಟಿಕೊಳ್ಳುವ ಸ್ನೇಹಿತ
ನು ಇದ್ದಾನೆ ಸಹಾ.

೧೯. ಸಂಧಿ.

ಅಧರ ವಕ್ರನಾದ ಮೂರ್ಖನಿಗಿಂತ ತನ್ನ ಸಂಪೂರ್ಣತೆಯಲ್ಲಿ ನಡೆಯುವ ೧
ಬಡವನು ಲೇಸು. ದೇಹಿಗೆ ತನ್ನ ಜ್ಞಾನ ಇಲ್ಲದಿರುವದು ಒಳ್ಳೇದಲ್ಲ ಕಾಲು ೨
ತ್ವರೆಯುಳ್ಳವನು ತಪ್ಪು ಮಾಡುತ್ತಾನೆ. ಮನುಷ್ಯನ ಮೂರ್ಖತ್ವವು ಅವನ ಮಾರ್ಗ ೩
ವನ್ನು ಹಾಳು ಮಾಡುವದು ಹೀಗೆ ಅವನ ಹೃದಯವು ಯೆಹೋವನ ಮೇಲೆ
ಕೋಪಗೊಳ್ಳುವದು. ಸಂಪತ್ತು ಬಹಳ ಗೆಳೆಯರನ್ನು ಕೂಡಿಸುವದು (ಕೂಡಿಸು ೪
ವದು) ಬಡವನು ತನ್ನ ಗೆಳೆಯನಿಂದ ಅಗಲಿಸಲ್ಪಡುವನು. ಸುಳ್ಳು ಸಾಕ್ಷಿಯು ನಿರ್ದೋ ೫
ಷನಾಗಲಿಕ್ಕಿಲ್ಲ. ಸುಳ್ಳುಗಳನ್ನು ಉಸುರುವವನು ಸುಮ್ಮನೆ ಬಿಡಲ್ಪಡುವದಿಲ್ಲ.
(ಪ್ರಭುವಿನ) ಮುಖವನ್ನು ಅನೇಕರು ಬೇಡಿಕೊಳ್ಳುವರು ದಾನಮಾಡುವವ ೬
ನಿಗೆ ಎಲ್ಲರೂ ಗೆಳೆಯರು. ಬಡವನ ಸಹೋದರರೆಲ್ಲಾ ಅವನಿಗೆ ಹಗೆಗಳು ಅವ ೭
ನ ಗೆಳೆಯರು ಅವನಿಗೆ ದೂರವಾಗುವದು ಮತ್ತೇನು! ಆತನು ಮಾತುಗಳಿಂದ
ಹಿಂಬಾಲಿಸಿದರೂ ಅವರು ಇಲ್ಲ.

ಬುದ್ಧಿ ಸಂಪಾದಿಸುವವನು ತನ್ನ ಜೀವವನ್ನು ಪ್ರೀತಿಸುತ್ತಾನೆ ವಿವೇಕವ ೮
ನ್ನು ಕಾಪಾಡುವವನು ಮೇಲನ್ನು ಕಾಣುವನು. ಸುಳ್ಳು ಸಾಕ್ಷಿಯು ನಿರ್ದೋಷನಾಗನು. ೯
ಸುಳ್ಳುಗಳು ಉಸುರುವವನು ಕೆಡುವನು (ನಾ.). ಮೂರ್ಖನಿಗೆ ಸುಖಭೋಗವು ಒಪ್ಪದು ೧೦
ಪ್ರಧಾನರಲ್ಲಿ ಪ್ರಭುಗಳನ್ನು ಆಳುವದು ದಾಸನಿಗೆ ಮತ್ತೇನು. ಮನುಷ್ಯನ ಬುದ್ಧಿ ೧೧
ಯು ಅವನ ಕೋಪವನ್ನು ತಡೆಯುತ್ತದೆ. ದ್ರೋಹವನ್ನು ಲಕ್ಷಿಸದೆ ಬಿಡುವದು
ಅವನಿಗೆ ಅಲಂಕಾರವು.

ಸಿಂಹ ಗರ್ಜಿಸುವಂತೆ ಅರಸನ ಕೋಪ ಹುಲ್ಲಿನ ಮೇಲಿರುವ ಮಂಜಿನಂತೆ ಅವನ ೧೨
ಮೆಚ್ಚಿಕೆಯು. ಮೂರ್ಖ ಪುತ್ರನು ತನ್ನ ತಂದೆಗೆ ಹಾನಿಯೇ ಹೆಂಡತಿಯ ಜಗ ೧೩
ಳಗಳು ನಿರಂತರ ಧಾರೆ. ಮನೆಯೂ ಐಶ್ವರ್ಯವೂ ತಂದೆಗಳು ಬಿಟ್ಟ ಬಾಧ್ಯತೆಯು ಬಾ ೧೪
ಧ್ಯವುಳ್ಳ ಹೆಂಡತಿಯು ಯೆಹೋವನಿಂದ.

ಸಾಮತಿಗಳು ೧೯. ಸಂಧಿ.

೧೫. ಆಲಸ್ಯವು ಸುಷುಪ್ತಿಯಲ್ಲಿ ಬೀಳ ಮಾಡುವದು. ಸೋಮಾರಿಯುಳ್ಳ ದೇಹಿಯು
೧೬. ಹಸಿಯುವದು. ಅಪ್ಪಣೆಯನ್ನು ಕಾಯುವವನು ಸ್ವದೇಹಿಯನ್ನು ಕಾಯುತ್ತಾನೆ.
೧೭. (೧೬, ೧೭.) ತನ್ನ ಮಾರ್ಗಗಳನ್ನು ಲಕ್ಷ್ಯ ಮಾಡದವನು ಸಾಯುವನು. ಬಡವನನ್ನು
ಕನಿಕರಪಡುವವನು ಯೆಹೋವನಿಗೆ ಸಾಲವಾಗಿ ಕೊಡುತ್ತಾನೆ. ಆತನ ಉಪಕಾರಕ್ಕೆ
೧೮. ಆತನು ಬದಲು ಕೊಡುವನು. ನಿರೀಕ್ಷೆಯುಳ್ಳಷ್ಟು ವರೆಗೆ ನಿನ್ನ ಮಗನನ್ನು ಶಿಕ್ಷಿಸು.
೧೯. ಆದರೆ ಅವನನ್ನು ಕೊಲ್ಲ ಬೇಕೆಂದು ಮನಸ್ಸು ಬೇಡ. ಕಡು ಕೋಪಿಯು ದಂಡ ತೆರಲಿ
ಅಲ್ಲವಾದರೆ ನೀನು ಉದ್ಧರಿಸಿದರೆ ಇನ್ನೂ ಹೆಚ್ಚು ಮಾಡುವನು.
೨೦. ಮುಂದಕ್ಕೆ ಜ್ಞಾನವನ್ನು ಕೇಳು ಶಿಕ್ಷೆಯನ್ನು ಅಂಗೀಕರಿಸು ನಿನ್ನ ಬಾಳಿಯ (ಕಾಲದ)ಲ್ಲಿ
೨೧. ಜ್ಞಾನಿಯಾಗಲಿಕ್ಕಾಗಿಯೇ (೧೧, ೧೫.) ಬಹಳ ಹೃದಯದಲ್ಲಿ ಬಹಳ ಚಿಂತೆಗಳು ಉಂಟು
೨೨. ಆದರೆ ಯೆಹೋವನ ಆಲೋಚನೆ ಮಾತ್ರ ನಿಲ್ಲುವದು. ಮನುಷ್ಯನ ಅನುಗ್ರಹ
೨೩. ವಾಗಿರುವಂಥದ್ದು ಅವನ ದಯವೇ. ಕಪಟವಂತನಿಗಿಂತ ದರಿದ್ರನು ವಾಸಿ. ಯೆಹೋ
ವನ ಭಯವು ಜೀವದ ಕಡೆಗೆ (ಆದರಿಂದ) ಕೇಡಿನಲ್ಲಿ ಸಿಕ್ಕದೆ ತೃಪ್ತನಾಗಿರುತ್ತ
೨೪. ವಾಸಮಾಡುವನು. ಸೋಮಾರಿಯು ತಳಿಗೆಯಲ್ಲಿ ಕೈ ಅದ್ದಿ ತನ್ನ ಬಾಯಿಗೆ ತಿರುಗಿಸನು
೨೫. ಸಹ. ಕುಚೋದ್ಯಗಾರನನ್ನು ನೀನು ಹೊಡೆದರೆ ಅಜ್ಞನಿಗೆ ಯುಕ್ತಿಯುಂಟಾಗುವದು,
೨೬. ವಿವೇಕಿಯನ್ನು ಆಕ್ಷೇಪಿಸಿದರೆ ಅವನಿಗೆ ತಿಳುವಳಿಕೆ ಸಿಕ್ಕುವದು. ತಂದೆಯನ್ನು
ಕೆಡಿಸಿ (ಜುಲ್ಮಿ) ಮಾಡಿ ತಾಯಿಯನ್ನು ಓಡಿಸಿ ಬಿಡುವವನು
೨೭. ನಿಂದ್ಯ ಪುತ್ರನೂ ಲಜ್ಜೆಯೂ ಅಪಕೀರ್ತಿಯೂ ತರುವ ಮಗನು ಬಿಟ್ಟು ತಪ್ಪಿ ಹೋಗುವ
ಮನಸ್ಸಿದ್ದರೆ ಶಿಕ್ಷೆಯನ್ನು ಕೇಳುವದು ನಿನ್ನ ಮಗನೇ ಸಾಕು ಮಾಡು.
೨೮. ಕೆಡುಕನಾದ ಸಾಕ್ಷಿಯು ನ್ಯಾಯವನ್ನು ಹಾಸ್ಯ ಮಾಡುವನು ದುಷ್ಟರ ಬಾಯಿ
೨೯. ಅಕೃತ್ಯವನ್ನು ನುಂಗಿ ಬಿಡುವದು. ಕುಚೋದ್ಯಗಾರರಿಗೆ ನ್ಯಾಯ (ದಂಡನೆಗಳು) ತೀರ್ಪು
ಗಳೂ ಮೂಢರ ಬೆನ್ನಿಗೆ ಏಟುಗಳೂ ಸಿದ್ಧವಾಗಿವೆ.

ಸಾಮತಿಗಳು ೨೦ ಸಂಧಿ.

ದ್ರಾಕ್ಷಾರಸವು ಪರಿಹಾಸಕನು ಮದ್ಯವು ಕಾಂಪರಿಗಾರ ಅದರ ೧
ಲ್ಲಿ ಅಲೆಯುವವನು ಯಾವನೂ ಜ್ಞಾನಿಯಾಗಲಿಕ್ಕಿಲ್ಲ. ಸಿಂಹವು ಗರ್ಜಿಸುವಂತೆ ೨
ರಾಜತ್ರಾಸ (೧೯, ೧೨) ಅವನನ್ನು ರೋಷಪಡಿಸುವವನು ಸ್ವದೇಹಿಯ
ಕಡೆಗೆ ಪಾಪ ಮಾಡುತ್ತಾನೆ. ವಿವಾದದಿಂದ ತೊಲಗುವದು ಪುರುಷನಿಗೆ ೩
ತೇಜಸ್ಸು ಎಲ್ಲಾ ಮೂರ್ಖರೂ ಗಾಜಿಗೆ ಸೇರುವವರು (ಕಾಲ ಕೆ ಗಾಳ್ಗ
ವನು). ಚಳಿಕಾಲವು ಬಂದರೆ ಮೈಗಳ್ಳನು ಉಳುವದಿಲ್ಲ; ಸುಗ್ಗೀಕಾಲ ೪
ದಲ್ಲಿ ಅವನು ಬೇಡಿದರೆ ಸಿಕ್ಕಲಿಕ್ಕಿಲ್ಲ. ಪುರುಷ ಹೃದಯದ ೫
ಆಲೋಚನೆ ಆಳವಾದ ನೀರು (೧೮, ೪.) ವಿವೇಕವಂತನು ಅದನ್ನು
ಸೇದಿ ತೆಗೆಯುವನು. ಅನೇಕ ಮನುಷ್ಯರು ದಯಾ ಶಾಲಿಸುವಾತನ ಕಡೆಗೆ ೬
ಆದರೆ ನಂಬಿಕೆಯುಳ್ಳ ಪುರುಷನನ್ನು ಕಂಡು ಕೊಳ್ಳುವದು ಯಾರು?
ತನ್ನ ಸಂಪೂರ್ಣತೆಯಲ್ಲಿ ನಡೆದು ಕೊಳ್ಳುವವನೇ ನೀತಿವಂತನು ಅನಂತ ೭
ರದಲ್ಲಿ ಆತನ ಮಕ್ಕಳು ಸಹಾ ಧನ್ಯರು.

ನ್ಯಾಯಾಸನದಲ್ಲಿ ಕೂತಿರುವ ರಾಜನು ಕಣ್ಣುಗಳಿಂದ ಎಲ್ಲಾ ಕೆಟ್ಟತನವ ೮
ನ್ನು ಕೇರಿ ಬಿಡುತ್ತಾನೆ. ನನ್ನ ಹೃದಯವನ್ನು ನಾನು ನಿರ್ಮಲ ಮಾಡಿದೆನು ೯
(ಕೀರ್ತ ೫೧, ೧೦.) ನನ್ನ ಪಾಪದಿಂದ ಶುದ್ಧನಾದೆನೆಂದ ಹೇಳುವದು ಯಾರು?
ಕಲ್ಲು ಕಲ್ಲು ಸೇರು ಸೇರು ಈ ಎರಡೂ ಯೆಹೋವನಿಗೂ ಅಸಹ್ಯ (೧೧, ೧.) ೧೦
ಬಾಲನು ಸಹಾ ಆತನ ಸ್ವರೂಪ (character) ನಿರ್ಮಲ ವಾಗುವದಾ ೧೧
ನೆಟ್ಟಗಾದದಾ ಎಂದು ಸ್ವಕ್ರಿಯೆಗಳಿಂದ ತಿಳಿದು ಬರುವದು. ಕೇಳುವ ಕಿವಿ ೧೨
ಕಾಣುವ ಕಣ್ಣು ಈ ಎರಡನ್ನೂ ಯೆಹೋವನು ಉಂಟು ಮಾಡಿದನು.
ನಾಶ (ವಸ್ತು) ಕಳ್ಳದು ಹೋಗದಂತೆ ನಿದ್ದೆಯನ್ನು ಪ್ರೀತಿ ಮಾಡ ಬೇಡ ೧೩

೧೪. ಕಣ್ಣಿಗೆ ಆಹಾರ ಕೃಷ್ಣನಾಗುವಿ. ಕೆಟ್ಟದ್ದು ಕೆಟ್ಟದ್ದು ಎಂತ ಹೇಳ್ವ ಕಾಳ್ಗವನು
೧೫. ಹೋಗಿ ಕಂನಂನು ಕಾಣೆ ಹೋಗಳ್ವ ಕಾಳ್ಗವನು. ಇಂಗಾರವು ಉಂಟು ಮತ್ತು
ಗಳು ತೊಟ್ಟು ಆದರೆ ಎಯಾಳ್ವವಾದ ಪದಾರ್ಥವ ಕಳುವಿಕೆಯುಳ್ಳ ಅಥರ
೧೬. ಗಳು. ಆತನ ವಸ್ತ್ರವನ್ನು ಕೆಗಡುಕಾ ಎಂತನು ಮಿತನಿಗೆ ಉತ್ತರವಾದಿಯಾದ
ನಲ್ಲ ಅನ್ಯರಿಗಾಲ್ಸರ ಅವನ ಬುತ್ತಿಯನ್ನು ಅಸಿಕೋ.
೧೭. ಕಳ್ಳಹಾರವು ಕನಗೆ ಕೇಡಾಗುವದು ಮತ್ತೆ ಬಾಯಲ್ಲಿ ಗರಸು ಕುಂಬುವದು.
೧೮. ಮಂತ್ರಾದಿಗಳ ವಿಚಾರಗಳು ಹುಟ್ಟಿಯಾಗುವದಕ್ಕೆ ನಿಯಮಸಾಮರ್ಥ್ಯದಿಂದ
೧೯. ಯುದ್ಧ ಮಾಡು. ಚಾಡಿ ಕಾರನಾಗ ನಡೆಯುವವನು ರಹಸ್ಯವನ್ನು ಬಯಲು
ಮಾಡುತ್ತಾನೆ. (೧೧, ೧೨.) ಅಥರಗಳನು ಕೆಡಿಯುವವನ. ಗೊಡವೆಗೆ ಹೋಗಬೇಡ.
೨೦. ಕಂಡಕಡೆಗಳನು ಕಳಿಸುವವನಿಗೆ ಅಂಥವನು ನಲ್ಲಿ ದೀಪ ಹಾರ
೨೧. ಹೋಗುವದು. ಆದಿಯಲ್ಲಿ ಕಡವಾಡಿ ಹುಳಸಿದ ಬಾಗ್ಯಕ್ಕೆ ಅಂತ್ಯವು ಎನು
೨೨. (ಗ್ರಹಿಸಲ್ಪಡದು. ಕೇಡಿಗೆ ನಾನು ಬದಲಿಗೆ ಬದಲು ಕೊಡಲಿ (ದಾವೆತರಲು)
ಎಂತ ಹೇಳ್ವ ಬಾರದು ಯೆಹೋವನನ್ನು ಕಾದಿರು ಆತನು ನಿಂನಂನು ರಕ್ಷಿ
೨೩. ಸುವನು. ಕಲ್ಲು ಕಲ್ಲು ಯೆಹೋವನಿಗೆ ಅಸಹ್ಯ ಕಳ್ಳತ್ರಾಸು ಒಳ್ಳೇದಲ್ಲ
೨೪. (೧೧, ೧). ವೀರನ ನಡೆಗಳು ಯೆಹೋವನಿಂದಲೇ ಮನುಷ್ಯನಿಗೆ ಕಂನ ವ್ಯಾ
ಗಳ್ಳ ಹ್ಯಾಗೆ ಗಾತ್ತಾಗುವದು.
೨೫. ವಿಶುದ್ಧ ಎಂತ ಜಲ್ಲಿಸಿ ಹೋಗುವದಾ ಹರಿಕೆ ಹೊಂದ್ತಮೇಲೆ ಮತ್ತೆ ವಿಚಾರಿ
೨೬. ಸಿ ಕಾಳ್ಳವದಾ ಮನುಷ್ಯನಿಗೆ ಉರ್ಲೆ. ಜ್ಞಾನವುಳ್ಳ ಅರಸನು ದುಷ್ಟರಂನ್ನು ಯೆದು
೨೭. ರಿಸಿ ಎವರ ಮೇಲೆ ಉರ್ಲನ್ನು ಎಳ್ಳುವನು. ಮನುಷ್ಯನ ಉಸುರು ಒಡಲಿನ ಒಳಗ
೨೮. ಡೆ (ಕಾರಡಿ) ಗಳಂನೆಲ್ಲಾ ಪರಿಶೋಧಿಸಿ ವ್ಯಾಪಿಸುವ ಯೆಹೋವನ ದೀಪವೇ. ದಯ

ಪುಷ್ಪಗಳು ಅರಸನನ್ನು ಕಾಪಾಡುವದು ಅವನು ದಯೆಯಿಂದ ತನ್ನ
ಸಿಂಹಾಸನವನ್ನು ಊರುವನು. ಯಪ್ಪನಷ್ಟರಿಗೆ ಅಲಂಕಾರವು ಅವರ ತಾಳ್ಮೆ ೧೯
ವೇಲೂ ದಕೆ ವೃಷ್ಟಿರ (ಪ್ರತೆ ನಕೆ ದುರಲ್ತನವನ್ನು ತಾಡು ಬಿಡುವದು ೨೦.
ಪಿಟ್ಟಿನ ಬಾಚಲು ಬಿದಲನ ಕಾರಡಗಳಲ್ಲಿ (ತಾಗುವ) ಹಾಯ. ಗಳ-

೨೧ ಸಂಧಿ.

ರಾಜನ ಹೃದಯವು ಯೆಹೋವನ ಕೈಯಲ್ಲಿ ನೀರಿನ ಕಾಲುವೆ (ತೋಡು) ೧
ಗಳ ಹಾಗೆ ಇಷ್ಟವಾದಲ್ಲಿಗೆ ಅದನ್ನು ತಿರುಗಿಸುವನು. ತನ್ನ ಮಾರ್ಗಗಳಲ್ಲಿ ೨
ತನಗೆ ನೆಟ್ಟಗಿಂತ ತೋರುವದು ಹೃದಯವನ್ನು ತೂಗಿ ನೋಡುವವನು
ಯೆಹೋವನೇ (ಗಳ ...). ಬಲಿಗಿಂತ ಯೆಹೋವನಿಗೆ (ಗ್ರಾಹ್ಯವಾದದ್ದು ೩
ನೀತಿಯೂ ನ್ಯಾಯವೂ ಮಾಡುವದೇ.

ಕಣ್ಣುಗಳನ್ನು ಉಬ್ಬಿಸುವದೂ ಹೃದಯ ನೀಡುವದೂ ದುಷ್ಟರ ದೀಪ ೪
ಪಾಪವೇ. ಉತ್ಸಾಹಿಯ ವಿಚಾರಗಳು ಮಡಿಕೆಗೆನೇ ಅವಸರ ಪಡು ೫
ವವರೆಲ್ಲಾ ಕೊರತೆಗನೇ. ನಾಲಗೆಯಿಂದ ನಿಕ್ಷೇಪಗಳನ್ನು ಬರ ೬
ಮಾಡುವದು, ಮರಣವನ್ನು ಹುಡುಕುವವರಿಗೆ ಹಾರಿ ಹೋಗುವ ಉ
ಸುರೇ. ನ್ಯಾಯವನ್ನು ಮಾಡಲಿಕ್ಕೆ ವಿರೋಧಿಸುವದರಿಂದ ದು... ಕಲಾಪ ೭
ವು ಅವರನ್ನು ಎಳೆದು ಬಿಡುವದು. ದುಷ್ಕರನ ಮಾರ್ಗವು ಅಕಟ ೮
ವಿಕಟ. ನಿರ್ಮಲನ ಕೆಲಸ (ಪ್ರವೃತ್ತಿ) ನೆಟ್ಟಗೇ ಯೇ.
ಋುಗಳ ಗಂಟಿ ಇರುವ ಕೂಟ ಮನೆಗಿಂತ (In Malayalam ಕೂಟು ೯
ವೀಡು = a house of society) ಮೇಲು ಮನೆಯ ಮಾಳಿಯಲ್ಲಿ

೧೦. ವಾಸ ಮಾಡುವದೇ ಲೇಸು. ದುಷ್ಟನ ಜೀವ ಕೆಟ್ಟತನವನ್ನು ಬಯಸುತ್ತದೆ
೧೧. ಅವನ ಬಳಿಯಲ್ಲಿ ಗೆಳೆಯನಿಗೂ ಕನಿಕರ ಸಿಕ್ಕದು. ಪರಿಹಾಸಕನು ದಂಡ-
ತೆತ್ತರೆ ಅಜ್ಞನಿಗೆ ಜ್ಞಾನವುಂಟಾಗುವದು ಜ್ಞಾನಿಗೆ ಬೋಧವನ್ನು ಈದರೆ ಅರು
೧೨. ವು ಹೆಚ್ಚುವದು. ನೀತಿಯುಳ್ಳ (ದೇವ)ವನು ದುಷ್ಟನ ಭವನವನ್ನು ತಿಳಿದು
ಕೊಂಡು ದುಷ್ಟರನ್ನು ಕೆಟ್ಟತನದಲ್ಲಿ ಬೀಳಿಸುತ್ತಾನೆ.
೧೩. ಬಡವನ ಕೂಗಿಗೆ ಕಿವಿ ಮುಚ್ಚುವವನು ಸಹಾ ಬಾಯಿ ಕೂಗಿ ಉತ್ತರ
೧೪. ಕೇಳದೆ ಹೋಗುವನು. ರಹಸ್ಯದಲ್ಲಿರುವ ಇನಾಮು ಕೋಪವನ್ನೂ ಮ
೧೫. ಡಿಯ ಕಡೆಗೆ ಲಂಚವು ಕಡುಉಗ್ರತ್ವವನ್ನೂ ನೀಗುವದು. ನ್ಯಾಯ ಮಾಡುವದು
ನೀತಿವಂತನಿಗೆ ಸಂತೋಷ, ಅಕ್ರಮ ಮಾಡುವವರಿಗೆ ನಾಶನ (೧೦, ೨೯).
೧೬. ಸುಬೋಧಮಾರ್ಗವನ್ನು ಬಿಟ್ಟು ತೊಲಗುವ ಮನುಷ್ಯನು (ಪ್ರೇತ)ಗಳ
ಸಭೆಯಲ್ಲಿ ತಂಗುವನು.
೧೭. ಸಂತೋಷವನ್ನು ಪ್ರೀತಿಸುವವನು ಕಷ್ಟಕ್ಕೆ ಗುರಿಯಾಗುವನು;(ಬಡವನಾಗು
೧೮. ವನು) ದ್ರಾಕ್ಷಾರಸವೂ ಎಣ್ಣೆಯೂ ಪ್ರೀತಿಸುವವನು ಧನವಂತನಾಗನು.
ದುಷ್ಟನು ನೀತಿವಂತನಿಗೆ ವಿಮೋಚನೆಯ ಕ್ರಯವಾಗುವನು ನೆಟ್ಟನೆಯವರಿಗೆ
೧೯. ಬದಲಾಗಿ ವಂಚಕನು. ಮರುಭೂಮಿಯಲ್ಲಿ ವಾಸಿಸುವದು ಜಗಳಗಂಟಿ
೨೦. ಯ ಸಂಗಡ ಇರುವ ವ್ಯಸನಸ್ತ್ರೀಗಿಂತ ವಾಸಿ (೯). ಮನೋಹರ ನಿಧಿಯೂ
ಎಣ್ಣೆಯೂ ಜ್ಞಾನಿಯ ಬಿಡಾರದಲ್ಲೇ; ಹೆಡ್ಡ ಮನುಷ್ಯನು (ಮನುಷ್ಯರ ಹೆಡ್ಡನು)
೨೧. ಅದನ್ನು ನುಂಗಿ ಬಿಡುವನು. ನೀತಿ ದಯೆಗಳನ್ನು ಹಿಂದಟ್ಟುವವನಿಗೆ ಜೀವವೂ
ನೀತಿಯೂ ತೇಜಸ್ಸೂ ಸಿಕ್ಕುವದು (ಕಂಡುಕೊಳ್ಳುವನು).

ವೀರರ ನಗರದಲ್ಲಿ ಶಿಷ್ಯನಿಂದು ಪರಿ ಅವರು ಆಶ್ರಯಿಸಿದ ಬಲ ೨೨
ವನ್ನು ಇಳಿಸಿ ಬಿಟ್ಟನು. ಬಾಂಧವ ನಾಲಗೆಯಂದಿ ಕಾಪಾಡುವವನು ಇಕ್ಕ- ೨೩
ಟ್ಟುಗಳಿಂದ ಸ್ನೇಹಿತರನ್ನು ಕಾಪಾಡುತ್ತಾನೆ. ಉಚ್ಚ ಕುಲದವರಿಗೆ ಪರಿ ೨೪
ಹಾಸಕನು ಎಂದು ಹೆಸರು ಗರ್ವದ ಅಭಿಮಾನದಲ್ಲಿ ಮಾಡುತ್ತಾನೆ.
ಮೃಗಗಳ ಅಕ್ರಮಿತೆಯು ಆತನನ್ನು ಕೊಲ್ಲುವದು ಕೆಲಸ ಮಾಡುವದಕ್ಕೆ ೨೫
ಕೈಗಳು ವಿರೋಧಿಸುವದರಿಂದಲೇ. ಎಲ್ಲಾ ದಿವಸವೂ ಯೋಚಿಸಿ ಯೋಚಿ ೨೬
ಸಿದರೂ ನೀತಿವಂತನು ಅಸಂತೋಷವಿಲ್ಲದೆ ಕಾಪಾಡುವನು. ದುಷ್ಟರ ಬಲಿಯು ೨೭
ಅಸಹ್ಯವೇ (೧೫, ೮) ಅವನು ದುಷ್ಟತೆಗಾಗಿ ಅರ್ಪಿಸಿದರೆ ಎಷ್ಟೋ ನು.
ಕಪಟ ಸಾಕ್ಷಿ ಕೆಡುವನು ಕೇಳುವ ಪುರುಷನು ಎಂದೆಂದಿಗೂ ಉಚ್ಚರಿಸು ೨೮
ವನು (ಮಾತಾಡುವನು)

ದುಷ್ಟ ಪುರುಷನು ಮುಖ್ಯತೆಯಿಂದ ಕಾಪಾಡುತ್ತಾನೆ ನೆಟ್ಟನೆಯವನು ೨೯
ತನ್ನ ಮಾರ್ಗಗಳನ್ನು ಸ್ಥಿರಪಡಿಸುತ್ತಾನೆ. ಯೆಹೋವನಿಗೆ ವಿರುದ್ಧವಾದ ೩೦
ವಿಲ್ಲ ವಿವೇಕವೂ ಇಲ್ಲ ಆಲೋಚನೆಯೂ ಇಲ್ಲ. ಯುದ್ಧ ದಿವಸಕ್ಕೆ ಕುದು ೩೧
ರೆಯು ತಯಾರಾಗಿ ನಿಲ್ಲುತ್ತದೆ ಜಯ ರಕ್ಷೆಯು ಯೆಹೋವನಿಗೆ ಮಾತ್ರ

೨೨ ಸಂಧಿ.

ಬಹು ಸಂಪತ್ತಿಗಿಂತ ಮೇಲಾದದ್ದು ಹೆಸರೇ ಬೆಳ್ಳಿಗಿಂತ ಚಿನ್ನಕ್ಕಿಂತ ೧
ಕೃಪೆ ಒಳ್ಳೇದು ಸಂಪನ್ನರೂ ದರಿದ್ರರೂ ತಂತಮ್ಮೊಳಗೆ ಭೇಟಿಯಾಗುತ್ತಾರೆ ೨
(ಕೂಡುತ್ತಾರೆ) ಅವರೆಲ್ಲರನ್ನೂ ಉಂಟುಮಾಡಿದ್ದು ಯೆಹೋವನೇ. ಕುಶಲ ೩
ವಂತನು ಕೆಟ್ಟದ್ದನ್ನು ನೋಡಿ ಅಡಗಿಕೊಂಡನು ಅಜ್ಞರು ದಂಡನೆ
ಹೊಂದಾಗುವರು. ದೀನತೆಯು ಅನುಭವವಾಗಿರುವಂಥದ್ದು ಯೆಹೋವನ ೪

೫. ಭಯವೇ ಸಂಪತ್ತು ಜೀವಿತವು (ಶೀಜನ್ಯ) ಸಹಾ. ವಕ್ರನ ಮಾರ್ಗದ
ಲ್ಲಿರುವ ಮುಳ್ಳುಗಳು ಉರ್ಲುಗಳು ಎಂಬುವುಗಳಿಗೆ ಅಗಲುವದು ಸ್ವ
೬. ಪ್ರಾಣಿಯನ್ನು ಕಾಯುವವನು. ಬಾಲನನ್ನು ಆತನ ಮಾರ್ಗಕ್ಕನುಸಾ
ರವಾಗಿ ಅಭ್ಯಾಸ ಮಾಡಿಸು ಅವನು ಬೆಳೆದರೂ ಅದನ್ನು ಬಿಟ್ಟು
ತೊಲಗನು.

೭. ದರಿದ್ರರಲ್ಲಿ ಸಂಪನ್ನನು ಆಳುತ್ತಾನೆ ಸಾಲತಕ್ಕೊಳ್ಳುವವನು ಕೊಡು
೮. ವಾತನಿಗೆ ದಾಸನು. ಅಕ್ರಮ ಬಿತ್ತುವವನು ಅಕೃತ್ಯ ಕೊಯ್ಯುವನು ಅವನ
೯. ಉಗ್ರದ ದಂಡ (ಕೋಲು) ಕ್ಷೀಣಿಸಿ ಹೋಗುವದು. ಒಳ್ಳೇಕಣ್ಣುಳ್ಳ
ವನೇ ಆಶೀರ್ವದಿಸಲ್ಪಡುವನು ತನ್ನ ರೊಟ್ಟಿಯಿಂದ ದೀನನಿಗೆ ಕೊಡುವದ
೧೦. ರಿಂದಲೇ. ಜಗಳ ಹೊರತಾಗಲಿಕ್ಕೆ ಪರಿಹಾಸಕನನ್ನು ಹೊರಡಿಸಿ ಬಿಡು
೧೧. ಮತ್ತೆ ಜಗಳವೂ ಮಾನ ಭಂಗವೂ ನಿಂತು ಹೋಗುವದು. ಹೃದಯ ಶುದ್ಧಿ
ಅಧರಗಳ ಲಾವಣ್ಯ ಇವುಗಳನ್ನು ಪ್ರೀತಿಸುವವನಿಗೆ ಅರಸನೇ ಗೆಳೆ
೧೨. ಯನು (ಆಗುವನು). ಯೆಹೋವನ ಕಣ್ಣು ಅರಿವನ್ನು ಕಾಪಾಡುವ
ದು ವಂಚಕನ ಮಾತನ್ನು ಆತನು ನಿರರ್ಥಕ ಮಾಡುವನು.

೧೩. ಬೀದಿಯಲ್ಲಿ ಸಿಂಹ ಉಂಟು ಬೀದಿಗಳ ಮಧ್ಯದಲ್ಲಿ ನಾನು ಕೊಲ್ಲಲ್ಪಡು
೧೪. ವೆನು ಎಂದು ಮೈಗಳ್ಳನು ಹೇಳುವನು. ಪರಸ್ತ್ರೀಗಳ ಬಾಯಿ ಆಳವಾ
ದ ಕುಣಿ ಯೆಹೋವನ ಸಿಟ್ಟಿಗೆ ಪಾತ್ರವಾದವನು ಅದರಲ್ಲಿ ಬೀಳು
೧೫. ವನು. ಬಾಲನ ಹೃದಯದಲ್ಲಿ ಮೂಢತನವು ಕಟ್ಟಿ =(ಹೊರಿಯದೆ) ನಿಲ್ಲುತ್ತದೆ.
೧೬. ಶಿಕ್ಷೆಯ ಬೆತ್ತವು ಅದನ್ನು ತೊಲಗಿಸುವದು. ದೀನನನ್ನು ಪೀಡಿಸಿದರೆ ಅವನಿಗೆ
ಲಾಭ (ಆಗುವದು) ಸಂಪನ್ನನಿಗೆ ಕೊಡುವವನು (ತನಗೆ) ಕೊರತೆಗಾಗಿಯೇ.

III ಜ್ಞಾನಿಗಳ ಮಾತುಗಳು (೨೨, ೧೭–೨೪, ೩೪.)

ನಿಂನ ಕಿವಿ ಬಾಗಿಸಿ ಜ್ಞಾನಿಗಳ ಮಾತುಗಳಂನು (೧,೬) ಕೇಳಿ ನಂನ ೧೭.
ತಿಳುವಳಿಕೆಗೆ ಹೃದಯವನ್ನು ಸೇರಿಸಿಕೋ. ನೀನು ಅವುಗಳಂನು ಕರುಳಿನಲ್ಲಿ ೧೮.
ಕಾಪಾಡಿಕೊಂಡರೆ ಮನೋಹರವೇ; ನಿಂನ ಅಧರಗಳ ಮೇಲೆ ಅವು
ಒಂಮನವಾಗಿ ಊರಿ ನಿಲ್ಲದೆ ಕಳಿಯದು. ನಿಂನ ಆಶ್ರಯವು ಯೆ ೧೯.
ಹೋವನಲ್ಲಿ ಆಗಲಕ್ಕಾಗಿಯೇ ನಾನು ಇಂದು ನಿನಗೆ ತಿಳಿಸುವದು
ಸಾಕ್ಷಾತ್ ನಿನಗೆ ನೇ. ಸತ್ಯ ನುಡಿಗಳ ಪರಮಾರ್ಥ ನಿನಗೆ ತಿಳಿಸಲಿ ೨೦.
ಕ್ಕಾಗಿಯೂ ನಿಂನಂನು ಕಳುಹಿಸುವವರಿಗೆ ನೀನು ಸತ್ಯದಲ್ಲಿ ನುಡಿಗಳನ್ನು
ತಿಂದೆ ಬರಮಾಡಲಿಕ್ಕಾಗಿಯೂ, ನಾನು ಮಂತ್ರಣಗಳ ಸಂಗಡಲೂ ತಿಳು ೨೧.
ವಿಕೆಯ ಸಂಗಡಲೂ ನಿನಗೆ ಶಿರುಳು ಮಾತುಗಳನ್ನು ಬರೆಯಲಿಲ್ಲವೋ.

ದೀನನಾಗಿರುವ ಕಾರಣ ದೀನನನ್ನು ಸುಲಿಕೊಳ್ಳಲೂ ಹೊರಬಾಗ ೨೨.
ಲಲ್ಲಿ ಸಾಧು ಮನುಷ್ಯನನ್ನು ತುಳಿದು ಬಿಡಲೂ ಬಾರದು; ಅವರ ವ್ಯವ ೨೩
ಹಾರವನ್ನು ಯೆಹೋವನು ತನ್ನದೆಂದು ಅವರನ್ನು ಅಪಹರಿಸುವವರ
ನ್ನ ಪ್ರಾಣವನ್ನು ಅಪಹರಿಸುವನಲ್ಲ.

ಕೋಪಿಷ್ಠನ ಸಂಗಡ ಮಮತೆಯೂ ಉಷ್ಣಗಳುಳ್ಳವನ ಸಂಗಡ ೨೪.
ಸೇರಿಕೆಯೂ ಇರಬಾರದು; ಇಲ್ಲದಿದ್ದರೆ ಅವನ ಮಾರ್ಗಗಳನ್ನು ನೀನು ೨೫.
ಕಲಿತು ನಿಂನ ಪ್ರಾಣಕ್ಕೆ ಉರ್ಲು ಹಾಕಿಸುವದು.

ಕೈ ಹೊಡಿಯುವವರಲ್ಲಿ ಸಾಲಗಳಿಗೆ ಪ್ರತ್ಯೇಕ ವಾದಿಗಳಾದವರಲ್ಲಿ
ಕೂಡಬಾರದು; ಸಲ್ಲಿಸಲಿಕ್ಕೆ ಇಲ್ಲದಿದ್ದರೆ ನಿಂನ ಕೆಳಗಿನಿಂದ ಹಾಸಿಗೆಯನ್ನು

ಆತನು ತೆಗಿಯಲಿಕ್ಕೆ ಏನು

೨೮. ನಿಂನ ತಂದೆಗಳು ಹಾಕಿದ ಪೂರ್ವದ ಮೇರೆಗಳಂನು ತೆಗಿಯ
೨೯. ಬೇಡ. ತಂನ ಕೆಲಸದಲ್ಲಿ ಚುರುಕಾದ ಪುರುಷನನ್ನು ಕಂಡರೆ ಆತನು
ರಾಜರ ಮುಂದೆ ನಿಂತುಕೊಳ್ಳುವನು ನೀಚರ ಮುಂದೆ ನಿಲ್ಲಲಿಕ್ಕೆ ಆಗದು.

೨೩ ಸಂಧಿ

೧ ಆಳುವವನ ಸಂಗಡ ಊಟಕ್ಕೆ ಕುಂತರೆ ನಿಂನ ಮುಂದೆ ಇರುವದ
೨. ನ್ನು ಚಂನಾಗಿ ವಿಚಾರಿಸಿಕೊಂಡು, ನೀನು ಅತ್ಯಾಶೆಯವನಾಗಿದ್ದರೆ ಗಂಟ್ಲಿಗೆ
೩. ಕತ್ತಿಯನ್ನು ಇಟ್ಟುಕೋ; ಮೋಸದ ರೊಟ್ಟಿಯಾಗಿರುವದರಿಂದ ಅವನ ರಸ
ಪದಾರ್ಥಗಳಂನು ಆಶಿಸಬಾರದು

೪. ಸಂಪಂನನಾಗಲಿಕ್ಕೆ ಪ್ರಯಾಸಪಡಬಾರದು ಈ ನಿಂನ ವಿವೇಕವನ್ನು ಬಿಟ್ಟು
೫. ಬಿಡು; (ಬಂದು ವೇಳೆ) ನಿಂನ ಕಂಣುಗಳು ಅದಕ್ಕೆ ಹಾರಿ ಅದು ಇಲ್ಲ
ದೆ ಹೋಗಲಿಕ್ಕೆ ಬೇಕೇಂತಲಾ? ಬಾನಕ್ಕೆ ಹಾರುವ ಹದ್ದಿನಂತೆ ಸಂಪತ್ತು
ತನಗೆ ರೆಕ್ಕೆಗಳಂನು ಉಂಟುಮಾಡುವದು ನಿಶ್ಚಯ

೬. ಕೆಟ್ಟಕಂಣುಳ್ಳವನ ರೊಟ್ಟಿಯನ್ನು ತಿಂನಬ್ಯಾ ಅವನ ರಸಪದಾರ್ಥ
೭. ಗಳಂನು ಆಶಿಸಲೂಬಾರದು; ಅವನು ಮನಸ್ಸಿನಲ್ಲಿ ನಿದಾನಿಸುವಂತೆ
ಯೇ ಅವನು ಆಗಿದ್ದಾನೆ, ತಿಂನು ಕುಡಿ ಎಂತ ನಿನಗೆ ಹೇಳಿದರೂ ಅವನ
೮. ಹೃದಯ ನಿಂನ ಸಂಗಡ ಇರುವಂತಾದ್ದಲ್ಲ; ನೀನು ತಿಂದ ತುಂಡನ್ನು ಕಕ್ಕಿ
ನಿಂನ ಮನೋಹರ ಮಾತುಗಳಂನು ನಷ್ಟಮಾಡಿಕೊಳ್ಳುವಿ.

೯. ಹುಚ್ಚನ ಕಿವಿಗಳಲ್ಲಿ ಹೇಳಬೇಡ ನಿಂನ ಮಾತುಗಳ ಬೋಧ
೧೦. ಆತನು ನಿರಾಕರಿಸುವನಲ್ಲ-- ಪೂರ್ವದ ಮೇರೆಯನ್ನು ಮೀರಬೇಡ

(೨೩, ೧೦) ಅನಾಥರ ಹೊಲಗಳಲ್ಲಿ ಅತಿಕ್ರಮಿಸಲು ಬಾರದು; ಅವರ -೧೧
ವಿಮೋಚಕನು ಶಕ್ತನಾಗಿದ್ದಾನಲ್ಲ ಅವರ ವ್ಯವಹಾರವನ್ನು ಆತನು
ನಿನ್ನ ಸಂಗಡ ವ್ಯವಹರಿಸುವನು.

ಶಿಕ್ಷೆಯ ಕಡೆಗೆ ನಿನ್ನ ಹೃದಯವು ತಿಳುವಳಿಕೆಯ ಮಾತುಗಳಿಗೆ ನಿನ್ನ ಕಿವಿ ೧೨
ಗಳನ್ನ ತಿರುಗಿಸು. ಹುಡುಗನಿಗೆ (in Malayalam ಮಗು = child) ೧೩
ಶಿಕ್ಷೆಯನ್ನು ತಡೆಯಬೇಡ ಅವನನ್ನು ಬೆತ್ತದಿಂದ ಹೊಡೆದರೆ ಸಾಯನು
(೧೩, ೧೪); ನೀನು ಬೆತ್ತದಿಂದ ಹೊಡೆದು ಅವನ ಜೀವವನ್ನು ಪಾತಾಳ -೧೪
ದಿಂದ ಉದ್ಧರಿಸುವಿ.

ನನ್ನ ಮಗನೇ ನಿನ್ನ ಹೃದಯವು ಜ್ಞಾನವಿದ್ದರೆ ನನ್ನ ಹೃದಯವು -೧೫
ನನ್ನದು ಸಹ ಸಂತೋಷಿಸುವದು, ನನ್ನ ಮನಸ್ಸು ಉಲ್ಲಾಸ ಪಡುವದು -೧೬
ನಿನ್ನ ಅಧರಗಳು ಸತ್ಯ ಮಾತಾಡುವಾಗಲೇ - ನಿನ್ನ ಹೃದಯವು ಪಾಪಿಗಳಲ್ಲಿ -೧೭
ಆಸ್ಥೆ ಯೆಹೋವನ ಭಯದಲ್ಲೇ ಎಲ್ಲಾ ದಿನವು ಇರಲಿ;
ಮುಂದಿನ ಕಾಲವಿರುವದರಿಂದ ನಿನ್ನ ನಿರೀಕ್ಷೆಯು ಮುರಿದು ಹೋಗಲಿಕ್ಕಿಲ್ಲವಲ್ಲ. ೧೮

ನನ್ನ ಮಗನೇ ನೀನು ಕೇಳಿ ಜ್ಞಾನಿಯಾಗು ಹೃದಯವನ್ನು ಮಾರ್ಗದಲ್ಲೇ ೧೯
ನಡಿಸು. ದ್ರಾಕ್ಷಾರಸದಲ್ಲಿ ಮದಿಸುವವರಲ್ಲಿಯೂ ಮಾಂಸ ದುಂದು ಮಾಡುವ -೨೦
ವರಲ್ಲಿಯೂ ಸೇರಬೇಡ. ಯಾಕಂದರೆ ಮದ್ಯಪಾನಿಯೂ ದುಂದುಗಾರನೂ -೨೧
ಬಾಧ್ಯತೆ ಇಲ್ಲದವರಾಗುವರು ಅತಿ ನಿದ್ರೆಯು ಚಿಂದಿಗಳನ್ನು ಉಡಿಸುವದು.

ನಿನ್ನನ್ನು ಹುಟ್ಟಿಸಿದ ಅಪ್ಪನ ಮಾತು ಕೇಳು ಪಡೆಯುವದರಿಂದ ನಿನ್ನ -೨೨
ಅಮ್ಮಳನ್ನು ನೀರಸಿಸಬೇಡ; ಜ್ಞಾನ ಶಿಕ್ಷೆ ವಿವೇಕ ಇವುಗಳನ್ನಲ್ಲದೆ ಸತ್ಯ -೨೩
ವನ್ನು ಕೊಂಡುಕೊಳ್ಳು ಮಾರದಿರಬೇಕು; ನೀತಿವಂತನ ಅಪ್ಪನು ಆನಂದಿಸಿ

ಸ್ವಾಮಿಗೆ ಸೂಚನ ಜ್ಞಾನಿಯನ್ನು ಪುಟ್ಟಿಸಿದವನು ಅವನಲ್ಲಿ ಸಂತೋಷಪಡುವನು;
೨೫. ನಿನ್ನ ತಂದೆತಾಯಿಗಳು ಸಂತೋಷಿಸಲಿ; ನಿನ್ನ ಹೆತ್ತವಳು ಆನಂದಿಸಲಿ.
೨೬. ನನ್ನ ಮಗನೇ, ನಿನ್ನ ಹೃದಯವನ್ನು ನನಗೆ ಕೊಡು, ನಿನ್ನ ಕಣ್ಣುಗಳು
೨೭. ನನ್ನ ಮಾರ್ಗಗಳಲ್ಲಿ ಮೆಚ್ಚಲಿ! ಯಾಕಂದರೆ ವೇಶ್ಯೆಯು ಆಳವಾದ ಗುಂಡಿ
೨೮. (೨೨,೧೪.) ಅನ್ಯಳು ಇಕ್ಕಟ್ಟಾದ ಬಾವಿ; ಮೋಸಗಾರನಂತೆ ಆಕೆಯೇ ಹೊಂಚಿ-
ಕೊಂಡು ಮನುಷ್ಯರೊಳಗೆ ವಂಚಿಸುವವರ ಸಂಖ್ಯೆಯನ್ನು ಹೆಚ್ಚಿಸುತ್ತಾಳೆ.
೨೯. ಯಾರಿಗೆ ಅಯ್ಯೋ, ಯಾರಿಗೆ ಅಯ್ಯಯ್ಯೋ, ಯಾರಿಗೆ ಜಗಳಗಳು, ಯಾರಿಗೆ
ಗೋಳಾಟ, ಯಾರಿಗೆ ಸುಮ್ಮನೆ (ಕಾರಣವಿಲ್ಲದ) ಗಾಯಗಳು, ಯಾರಿಗೆ ಕಣ್ಣುಗಳ
೩೦. ಕೆಂಪು ತಮ್ಮಗೆ- ದ್ರಾಕ್ಷಾರಸದ ಬಳಿ ತಡಮಾಡುವವರಿಗೆ ಬೆರಸಿದ
೩೧. ಮದ್ಯ ರುಚಿ- ನೋಡುವವರಿಗೇ. ಅದು ಕೆಂಪಾಗುತ್ತದೆ ಬಟ್ಟಲು ಪಾನಪಾತ್ರೆ
ಯಲ್ಲಿ ಕಣ್ಣುಗಳಂತೆ ತೋರುತ್ತದೆ ಬಟ್ಟಲು ಸಮನಾಗಿ ಇಳಿಯುತ್ತದೆ
೩೨. ಬಟ್ಟಲು ದ್ರಾಕ್ಷಾರಸವನ್ನು ನೋಡಬಾರದು! ಯಾಕಂದರೆ ಕಡೆಗೆ ಅದು
ಸರ್ಪದಂತೆ ಕಚ್ಚಿ = (ಕೊಂಡು) ವಿಷಸರ್ಪದಂತೆ ಕಡಿಯುವದು. ನಿನ್ನ ಕಣ್ಣುಗಳು
೩೩. ಪರಸ್ತ್ರೀಗಳನ್ನು ಕಂಡು ಹೃದಯವು ಡೊಂಕುಗಳನ್ನು ಮಾತಾಡ, ನೀನು ಸಮುದ್ರದ
೩೪. ನಡುವೆ ಮಲಗುವವನಿಗೂ ಕೂವೆ ಮರದ ತುದಿಯಲ್ಲಿ ಮಲಗುವವನಿಗೂ
೩೫. ಹೊಡೆದರು: ನನಗೆ ನೋವಾಗಲಿಲ್ಲ; ನನ್ನನ್ನು ಹೊಡೆದರೂ ನನಗೆ ತಿಳಿಯಲಿಲ್ಲ
ಯಾವಾಗ ಎಚ್ಚರವಾದೇನು? ತಿರಿಗಿ ಬೇಕು. ಅದನ್ನು ಇನ್ನೂ ಹುಡುಕುವೆನು
ಎಂದೀಯೆ.

ದುರ್ಜನರಲ್ಲಿ ಆಸ್ಥೆಯ ಪಡಲು ಅವರ ಸಂಗದ ಸೇರಲಿಕ್ಕೆ ೧
ಆಶಿಸಲೂ ಬಾರದು; ಯಾಕಂದರೆ ಅವರ ಹೃದಯವು ನಾಶನವನ್ನು ೨
ಧ್ಯಾನಿಸಿ ಅಧರಗಳು ಹೊಲ್ಲತನವನ್ನು ನುಡಿಯುವವು.

ಜ್ಞಾನದಿಂದಲೇ ಮನೆಯು ಕಟ್ಟಲ್ಪಡುವದು ವಿವೇಕದಿಂದ ಸ್ಥಿರವಾ ೩
ಗುವದು; ತಿಳುವಳಿಕೆಯಿಂದ ಕೋಣೆಗಳಲ್ಲಿ ತುಂಬು (fulings) ಆವಾಗ ೪
ಶ್ರೇಷ್ಠವಾದದ್ದೂ ಮನೋಹರವೂ ಆದ ಧನವೆಲ್ಲಾ.— ಜ್ಞಾನವುಳ್ಳ ಪುರುಷ ೫
ಸುಶಕ್ತನಾವಾ ತಿಳುವಳಿಕೆಯುಳ್ಳ ಆಳು ಮಹಾಬಲವನ್ನು ಹೊಂದಿರುವನು. ೫
ಯಾಕಂದರೆ ನಯಸಾಮರ್ಥ್ಯದಿಂದ ನೀನು ಯುದ್ಧ ನಡೆಸುವಿ ಮಂತ್ರಿಗಳು ೬
ಹೆಚ್ಚುವದರಲ್ಲಿ ರಕ್ಷೆ ಉಂಟಾಗುವದು (೧೧, ೧೪.)

ಜ್ಞಾನವೆಂಬುದು ಮೂರ್ಖನಿಗೆ ಅತ್ಯುನ್ನತವು (ನಗರ) ಬಾಗಿಲಲ್ಲಿ ಆತ ೭
ನ ಬಾಯಿ ಊರುವದು. ಕೇಡನ್ನು ಮಾಡಲಿಕ್ಕೆ ಯೋಚಿಸುವವನನ್ನು ೮
ದುಷ್ಟತಂತ್ರಗಾರನೆಂದು ಕರೆಯುವರು. ಹಾಸ್ಯವಾಗಿರುವಂಥಾದ್ದು ಮೂರ್ಖತನದ ೯
ಚಿಂತೆಯೇ ಮನುಷ್ಯರಿಗೆ ಅಸಹ್ಯವಾದದ್ದು ಪರಿಹಾಸಕ.

ಇಕ್ಕಟ್ಟಿನ ದಿನದಲ್ಲಿ ನೀನು ಶಿಥಿಲನಾಗಿ ತೋರಿದರೆ ನಿನ್ನ ಬಲ ಕುಂದಿತು. ೧೦
ಮರಣಕ್ಕೆ ಎಳೆಯಲ್ಪಡುವವರನ್ನೂ ಕೊಲೆಗೆ ಅಡ್ಡಾಡಿ ನಡೆಯುವವರನ್ನೂ ೧೧
ಉದ್ಧರಿಸು, ಅಯ್ಯೋ ನಮಗೆ! ಈ ಸಂಗತಿ ನಮಗೆ ತಿಳಿಯಲಿಲ್ಲವೆಂದು ನೀನು ಹೇಳು ೧೨
ವದಾದರೆ ಹೃದಯಗಳನ್ನು ತೂಗಿ ನೋಡುವವನು (೨೧,೨) ವಿವೇಚಿ
ಸಲಿಕ್ಕಿಲ್ಲವಾ, ನಿನ್ನ ಜೀವವನ್ನು ಕಾಪಾಡುವವನು ತಿಳಿಯನಾ? ಆತನು
ಮನುಷ್ಯನಿಗೆ ಆತನ ಕ್ರಿಯೆಗೆ ತಕ್ಕ ಬದಲು ಕೊಡುವನು

ನನ್ನ ಮಗನೇ, ಒಳ್ಳೇದೆಂದು ಜೇನನ್ನು ಅಂಗಳವಲ್ಲಿ ಸಿಹಿಯಾಗಿ ಜೇನು ೧೩

೧೪. ಶಾಬ್ದೆಯಂತೂ ಅಂದು; ಹಾಗೆಯೇ ನಿಂನ ದೇಹಿಗೆ ಜ್ಞಾನ ಮಂತಳಿಗಳಾ,
ಅವನ್ನು ನಂದು ನಂದಿರೆ ಮುಂದಿನ ಕಾಲಯೂಂಬು ನಿಂನ (ಪ್ರತೀಕ್ಷೆ ಯುವು ಮು
ತದು ಹೋಗಲಿಕ್ಕೆ ಹತ್ತೂ ಸಹಾ (೨೩, ೧೮)
ಶಿವಂತೆ
೧೫. ಹೇ ದುಷ್ಟಾ ನಿನ್ನ ಆಧಾರಕ್ಕೆ ಹೋಗಂಬಿ ಕಾಲ್ಗಳು ಬೇಡ ಅವನ ಕಯ್ಯೆ
೧೬. ಯನ್ನು ತೋಳುಗು ಮಾಡ ಬೇಡ; ಯಾಕೆಂದರೆ ನೀತಿವಂತನು ಏಳು ಸರ್ತಿ
ಬಿದ್ದರೂ ಏಳುವನು ದುಷ್ಟರು ದುರ್ಗತಿ ಬಂದರೆ ಎಡರಿ ಹೋಗುವರು.
೧೭. ನಿಂನ ಶತ್ರು ಬೀಳುವವರಲ್ಲಿ ಸಂತೋಷಿಸಬೇಡ ಅವನು ಎಡರುವವರಲ್ಲಿ
೧೮. ನಿಂನ ಹೃದಯವು ಆನಂದಿಸಬಾರದು, ಯಲ್ಲದಿದ್ದರೆ ಯೆಹೋವನು ಕಂಡು,
ಅದರ ಕಣ್ಣುಗಳಿಗೆ ಆಗದಂತ ವಾಗಿ, ಅವನಿಂದ ಸ್ವಕೋಪವನ್ನು
ತಿರುಗಿಸುವನು
೧೯. ದುಷ್ಟಮಾರ್ಗಗಳಲ್ಲಿ ಕ್ರೋಧಿಸ ಬೇಡ (ಕೀರ್ತ ೩೭, ೧) ದುಷ್ಟರಲ್ಲಿ ಅಸೂಯ
೨೦. ಪಡ ಬೇಡ (೧); ಆಗದವನಿಗೆ ಮುಂದಿನ ಕಾಲವಿಲ್ಲ ದುಷ್ಟರ ದೀಪವು ಆರು
೨೧. ವದು. (೧೩, ೯) — ನಂನ ಮಗನೇ ಯೆಹೋವನನ್ನೂ ರಾಜನನ್ನೂ ಭಯ
೨೨. ಯಪಡು, ತಿರುಗಿ ಬೀಳುವವರ ಗೋಷ್ಠಿಗೆ ಸೇರಬೇಡ; ಯಾಕೆಂದರೆ
ಅವರ ಆಪತ್ತು ಶೀಘ್ರವಾಗಿ ಹುಟ್ಟುವದು ಇಬ್ಬರಿಗೂ ಬರುವ ಅಪಾಯವ
ನನ್ನು ಯಾರು ಬಲ್ಲ?

ಜ್ಞಾನಿಗಳೂ ಜ್ಞಾನಿಗಳವು

೨೩-೨೪. ನ್ಯಾಯ ವಿಸ್ತಾರದಲ್ಲಿ ಪಕ್ಷಪಾತ ಮಾಡುವದು ಒಳ್ಳೇದಲ್ಲ; ದುಷ್ಟನಿಗೆ
ನೀನು ನೀತಿವಂತನು ಎಂದು ಹೇಳುವವನನ್ನು ಜನಾಂಗಗಳು ಶಪಿಸುವವು
೨೫. ಕುಲಗಳು ಅಸಹ್ಯಪಡುವವು; ಶಿಕ್ಷಿಸುವವರಿಗೆ ಸುಖವಾಗುವದು

ಉತ್ತಮ ಅನುಗ್ರಹವು ಅವರ ಮೇಲೆ ಬರುವದು. ಸಮಾಧಾನ ಉತ್ತರಗ ೨೬
ಳನ್ನು ಕೊಡುವವನು ಅಧರಗಳನ್ನು ಚುಂಬಿಸುವ(ಹಾಗೆ.)

ನಿನ್ನ ಕೆಲಸವನ್ನು ಅನುಕ್ರಮಿಸು ಹೊಲದಲ್ಲಿ ಅದನ್ನು ಸಾಧಿಸಿಕೊ! ೨೭
ತರುವಾಯ ನಿನ್ನ ಮನೆಯನ್ನು ಸಹ ಕಟ್ಟು ಬಳಿಕ. ಕಾರಣವಿಲ್ಲದೆ ನೆ— ೨೮
ರೆ ಸಾಕ್ಷಿಯಾಗಬಾರದು ನಿನ್ನ ಅಧರಗಳಿಂದ ಮಾತು ವಂಚಿಸಲೋ?
ಅವನು ನನಗೆ ಮಾಡಿದ್ದಕ್ಕೆ ಸರಿಯಾಗಿ ನಾನು ಅವನಿಗೆ ಮಾಡುವೆನು ಅಂತನ ೨೯
(ಕೆಯಿಗೆ (ಪ್ರತಿಗೆ (ಪ್ರತಿಕಾರು)ಮಾಡುವೆನು =(in kind ಪ್ರತಿ ಕ್ರಿಯೆ ಮಾಡುವೆನು)
ಎಂದು ಹೇಳಬೇಡ (೩೦, ೩೧)

ಮೈಗಳ್ಳನ ಹೊಲದಲ್ಲಿಯೂ ಬುದ್ಧಿಹೀನ ಮನುಷ್ಯನ ತೋಟದಲ್ಲಿ ೩೦
ಯೂ ನಾನು ಹಾದು ಹೋದೆನು; ಆಗ ಎಲ್ಲೆಲ್ಲಿಯೂ ಮುಳ್ಳುಗಿಡ ೩೧
(ಳು ಹುಟ್ಟಿದ್ದಾಗಿಯೂ ನೆಗ್ಗಿಲಗಳು ಮುಚ್ಚಿದ್ದಾಗಿಯೂ ಅದರ ಕಲ್ಲಿನ ಗೋಡೆ
ಗಳು ಬಿದ್ದದ್ದಾಗಿಯೂ, ನಾನು ನೋಡಿ ಮನಸ್ಸಿಗೆ ತಂದುಕೊಂಡು ಕಂಡು ಶಿಕ್ಷೆ ೩೨
ಹೊಂದಿಕೊಂಡೆನು:- (೬,೧೦.) ಇನ್ನೂ ಸ್ವಲ್ಪ ನಿದ್ದೆ ಸ್ವಲ್ಪ ತೂಕಡಿಕೆ ಸ್ವಲ್ಪ ೩೩
ಕೈಕಟ್ಟಿ ಮಲಗಿರು! ಹೀಗೆ ನಿನ್ನ ದಾರಿದ್ರ್ಯವು ಮೆಲ್ಲನೆ ನಡೆಯುವ ಸಂಚಾರಿ ೩೪
ಹೋಗುವವನ ಹಾಗೆ ಬಂದಾಂದು (ಆಯುಧ)ಧಾರನ ಹಾಗೆ ನಿನ್ನ ಕೊರತೆ ಬಂದು
ಸೇರುವದು (ಬಂಡಲಿ)

IV. ಸೊಲೊಮೋನನ ಸಾಮತಿಗಳು

(ಸಂಧಿ ೨೫, — ೨೯)

ಯೆಹೂದ ರಾಜನಾದ ಹಿಜ್ಕೀಯ (ಹಿಸ್ಕೀಯ)ನ ಆಳುಗಳು ನಕಲು ೧
ಬರೆದ ಇವುಗಳು ಸೊಲೊಮೋನನ ಸಾಮತಿಗಳು—

೨. ಕಾರ್ಯವನ್ನು ಮರೆ ಮಾಡುವದು ದೇವರ ತೇಜಸ್ಸು; ಕಾರ್ಯವನ್ನು
೩. ಊಹಿಸುವದು ಅರಸರ ತೇಜಸ್ಸು. ಉನ್ನತದ ದೆಸೆಯಿಂದ ಬಾನಗಳು
ಆಳದ ದೆಸೆಯಿಂದ ಭೂಮಿಯು, ಅರಸರ ಹೃದಯವೂ ಊಹೆಯಕ್ಕಾಗದದು.
೪. ಬೆಳ್ಳಿಯಿಂದ ಕಿಟ್ಟವನ್ನು ತೆಗೆ; ಅಕ್ಕಸಾಲಿಗನಿಗೆ ಒಡವೆ (ನಗ) ಸಿಕ್ಕೀತು. ಅರ
೫. ಸನ ಮುಂದಿನಿಂದ ದುಷ್ಟನನ್ನು ತೊಲಗಿಸಿ ಅವನ ಸಿಂಹಾಸನವು ಸ್ಥಿರವಾ
ಗುವದು.
೬. ರಾಜನ ಮುಂದೆ (ಪ್ರತಾಪ ತೋರಿಸಬೇಡ. ಮಹಾತ್ಮರುಗಳ ಸ್ಥಾನದಲ್ಲಿ
೭. ನಿಲ್ಲಬೇಡ; ನಿಂನ ಕಣ್ಣುಗಳು ಕಂಡ ಉದಾರನ ಮುಂದೆ ನಿಂನನ್ನು
ತಗ್ಗಿಸುವದಕ್ಕಿಂತ ಇಲ್ಲಿಗೆ ಏರಿಬಾ ಎಂತ ನಿನಗೆ ಹೇಳಿದರೆ ಹೆಚ್ಚು ಒಳ್ಳೇ
ದಲ್ಲವಾ.
೮. ವ್ಯಾಜ್ಯಕ್ಕೆ ಅವಸರದಿಂದ ಹೊರಡಬೇಡ ಅಲ್ಲದಿದ್ದರೆ ಕೂಟಾಳಿ
ಯು ನಾಚಿಕೆಯನ್ನುಂಟು ಮಾಡುವಾಗ ಕಡೆಗೆ ನೀನು ಏನಾದರೂ ಮಾಡಬಲ್ಲಿ
೯. ಯುಕ್ತ; ಕೂಟಾಳಿಯ ಸಂಗಡ ನಿಂನ ವ್ಯಾಜ್ಯವನ್ನು ವ್ಯವಹರಿಸು ಆದರೆ
೧೦. ಬೇರೊಬ್ಬನ ರಹಸ್ಯವನ್ನು ಬಯಲು ಪಡಿಸಬೇಡ; ಅಲ್ಲದಿದ್ದರೆ ಕೇಳುವವ
ನು ನಿಂನನ್ನು ಮಾನಹೀನನಾಗಿ ಮಾಡಿ ನಿಂನ ದುಷ್ಕೀರ್ತಿಯು ಹೋಗದಿರುವದು.
೧೧. ಬೆಳ್ಳಿ ಕೆತ್ತನೆಗಳಲ್ಲಿ ಬಂಗಾರದ ನಾರಂಗಗಳು (in Mal. ನಾರಂಜಿ orange)
೧೨. ಆಗಿರುವಂಥಾದ್ದು (ತಕ್ಕ ಕಾಲದಲ್ಲಿ) ಸಂದರ್ಭದಲ್ಲಿ ನುಡಿದ ಮಾತು. ಬಂಗಾ
ರದ ಕುಂಡಲವೂ ಅಪರಂಜಿಯ ಆಭರಣವೂ ಹೇಗೋ ಹಾಗೆ ಕೇಳುವ ಕಿವಿಗೆ
೧೩. ಗದರಿಸುವ ಜ್ಞಾನಿ. ಸುಗ್ಗಿ ಕಾಲದಲ್ಲಿ ಹುಟ್ಟಿರುವ ಮಂಜಿನಂತೆ ತಂಪಿಗೆ ಸರಿ
೧೪. ಯಾದದ್ದು ನಂಬಿಕೆಯುಳ್ಳ ದೂತನು ತನ್ನನ್ನು ಕಳುಹಿಸಿದವರಿಗೆ; ಯಜಮಾನರ

[illegible] ೧೪
[illegible]

[illegible] ೧೫
[illegible] ೧೬
[illegible]
[illegible] ೧೭
[illegible] ೧೮
[illegible]
[illegible] ೧೯
[illegible]

[illegible] ೨೦
[illegible] ೨೧
[illegible] ೨೨
[illegible]
[illegible] ೨೩
[illegible] ೨೪
[illegible] ೨೫
[illegible] ೨೬
[illegible]
[illegible] ೨೭

೨೮. ಗಳು ಶೋಧಿಸುವದೇ ತೇಜಸ್ಸು. ಗೋಡೆಗಳಿಲ್ಲದೆ ಹಾಳಾಗಿ ಹೋದ ಪಟ್ಟಣವಾಗಿ
ರುವಂಥಾದ್ದು ಆತ್ಮಕ್ಕೆ ಅಡಕ (selfcontrol) ವಿಲ್ಲದ ಪುರುಷನು.

೨೬ ಸಂಧಿ

೧. ಬೇಸಿಗೆ ಕಾಲದಲ್ಲಿ ಹಿಮಪಟದ ಮಂಜೂ ಸುಗ್ಗಿಯಲ್ಲಿ ಮಳೆಯೂ (ಸುರಿ
೨. ಯುವದು) ಎಂಬಂತೆ ಮೂರ್ಖನಿಗೆ ತೇಜಸ್ಸು ಯೋಗ್ಯವಲ್ಲ. ಗುಬ್ಬಿ ಅಲೆ
ಯುವದೂ ಬಾನಕ್ಕಿ ಹಾರಾಡುವದೂ ಎಂಬಂತೆ ವ್ಯರ್ಥ ಶಾಪವು ತಾಗದೆ ಹೋಗುವದು.
೩ ಕುದುರೆಗೆ ಚಾಬೂಕೂ ಕತ್ತೆಗೆ ಕಡಿವಾಣವೂ ಮೂರ್ಖರ ಬೆನ್ನಿಗೆ ಬೆತ್ತವೂ.
೪ ಮೂರ್ಖನಿಗೆ ಅವನ ಹೆಡ್ಡತನದಂತೆ ಉತ್ತರ ಕೊಡಬಾರದು. ನೀನು ಸಹ ಅವನಿಗೆ ಸರಿ
೫. ಯಾಗದಂತೆ. ಮೂರ್ಖನಿಗೆ ಅವನ ಹೆಡ್ಡತನದಂತೆ ಉತ್ತರ ಕೊಡು, ತನ್ನ ಕಣ್ಣುಗಳಲ್ಲಿ ಅವ
ನು ಜ್ಞಾನಿಯಾಗದಂತೆ.
೬ ತನ್ನ ಕಾಲುಗಳನ್ನು ಕೊಯ್ದು ನಾಶವ ಕುಡಿದು ಕೊಳ್ಳುವದು ಮೂರ್ಖನ ಕೈಯಲ್ಲಿ ವರ್ತ
೭ ಮಾನ ಕಳುಹಿಸುವವನು. ಕುಂಟನಿಂದ ತೊಡೆಗಳು ಜೋಲುವವೂ ಮೂರ್ಖರ ಬಾಯಿ
೮ ಯ ಸಾಮತಿಯೂ. ಕವಣೆಯಲ್ಲಿ ಕಲ್ಲನ್ನು ಬಿಗಿಯುವವನಂತೆ ಮೂರ್ಖನಿಗೆ
೯ ತೇಜಸ್ಸು ಕೊಡುವವನೇ. ಮತ್ತುಳ್ಳವನ ಕೈಯಲ್ಲಿ ನೆಗೆದ ಮುಳ್ಳು ನೆಟ್ಟದ್ದೂ ಮೂರ್ಖರ
೧೦. ಬಾಯ ಸಾಮತಿಯೂ (೭). ಎಲ್ಲದರಲ್ಲಿಯೂ ಘಾಯ ಪಡಿಸುವ ಬಿಲ್ಲು
ಗಾರನೂ ಮೂರ್ಖನನ್ನು ಕೆಲಸಕ್ಕೆ ಇರಿಸುವವನೂ, ಕಂಡವರನ್ನು ಕೆಲಸಕ್ಕೆ ಇರಿಸುವವನೂ
೧೧. ಹೋಲುವರು. ನಾಯಿ ಕಾರಿದ್ದಕ್ಕೆ ತಿರುಗುವಂತೆ ಮೂರ್ಖನು ತನ್ನ ಹೆಡ್ಡತನವನ್ನು ಆವ
೧೨. ರ್ತಿಸುತಾನೆ. ತನ್ನ ಕಣ್ಣುಗಳಲ್ಲಿ ಜ್ಞಾನಿಯಾದವನನ್ನು ಕಂಡಿಯಾ? ಅವನಿಗಿಂತ
ಮೂರ್ಖನಲ್ಲಿ ನಿರೀಕ್ಷೆ ಹೆಚ್ಚಾದೆ.
೧೩. ಮಾರ್ಗದಲ್ಲಿ ಸಿಂಹವದೆ. ಬೀದಿಗಳ ಮಧ್ಯದಲ್ಲಿ ಸಿಂಹವದೆ ಎಂತ ಮೈಗಳ್ಳನು ಹೇಳು

ದನು(೨೨, ೧೨). ಕರುವು ತನ್ನ ತಾಯಿಗಳಿಯಲ್ಲಿಯೂ, ಮೈಗಳನ್ನು ತನ್ನ ಪ್ರಾಸಿಗೆ ೧೪
ಯಲ್ಲಿಯೂ ತಿರುಗುವದು. ಮೈಗಳನ್ನು ತೊಳೆದಲ್ಲಿ ಕೈ ಅಚ್ಚ ತನ್ನ ಬಾಯಿಗೆ ಹಿಡಿದಿದ ೧೫.
ಅನ್ನ ಸ್ತುತಿ ಮಾಡುತ್ತಾನೆ (೧೯, ೨೪). ಸ್ವಾರ್ಥಕರ್ತೃ ಉತ್ತರ ಹೇಳುವ ವಿಷ್ಣುಚಿಂತ ೧೬
ಮೈಗಳನ್ನು ತನ್ನ ಕೊಂಬುಗಳ ವ್ಯಸನ ಕ್ಷಾನಿಯ ನಿಡುತ್ತಾನೆ. ನಾಯಿಯು ಕುರಿಗಳನ್ನು ಹಿಡಿಯು ೧೭
ವದು ಮೂರಾರು ಕೂಗುವಾಗ ತನಗೆ ಲಾಭ ವಿವಾದ ಇಲ್ಲಿ ಶಿಕ್ಷೆ ಮಾಡುವವನು. ಸಾಕ್ಷಿ ೧೮ —
(In Mal. (ಶಾಸನ) ಉಂಬಾಗಳೂ ಉಗ್ರಗಳೂ ಮರಗಳೂ ಸುರಿಯುವಂತೆ;
ಗೆಳೆಯನನ್ನು ಸೋಸಗೊಳಿಸಿ ನಾನು ಅರಿಯದೆನಲ್ಲ ಎಂತ ಹೇಳುವ ಲೋಭಿ. ಕಣ್ಣಿಗೆ ೧೯.
ಸರಿಯಾದರೆ ಜಿಂಕೆ ಯಾರ ಪಾದು, ಬಾಡಿಗಾರನು ಇಲ್ಲದಿದ್ದರೆ ಜಗಳ ತೀರದು — ೨೦
ಕಂಡಕ್ಕೆಲ್ಲಾ ಬಾಯಿ. ಹೊಟ್ಟೆಗೆ ಕಟ್ಟಿಗೆಯೂ ಜಗಳದ ಪ್ರತಿಶ್ರೈ ಜಗಳಗಂಟಿಗನು — ೨೧
(ಚೇಕು). ಬಾಡಿಗಾರನ ಮಾತುಗಳು ಕಾಲು ಗರಗಳಂತೆ ಬಡವನ ಬಿಳ್ಳಿನಾಗ — ೨೨.
ನಲ್ಲಿರಲ್ಲ ಇಲ್ಲ ದಾಬತ್ತಿ (೧೮, ೮).
ಮುಖಗೆ ದು ಬಿತ್ತರ (In Mal: ಮಾಡಿನದು ಬಿದು ನ ಮಾಡಿಗೆ ಕೂಡ ನಿಸ್ತರ) — ೨೩
ಕಂಡು ಬಿದ್ದ ಯಾನಿರ ದಾಂಪತ್ಯ (ಮಾಮ ನೆಯಿಂದ) ಉಗಿಯುವ ಅಧಿಕಾರಗಳಿಸಿಂಗ
ದ ಶಿಕ್ಷೆ ಕೃತ್ರಿಯನ್ನು. ಕುಟ್ಟಿಗಳಿಂದ ದುಗೆಯ ವನು ತಿನ್ನುವ ಮಾತಿನ ಮಾಡಿ — ೨೪
ಬಿಳಿಗೆ ಮಾಸಿವನ್ನು ಇಟ್ಟು ಕೊಳ್ಳುತ್ತಾನೆ; ಶಬ್ದವನ್ನು ಪ್ರಾರಂಭ ಮಾಡಿದರೆ — ೨೫
ಅವನನ್ನು ನಂಬಬೇಡ; ಅವನ ಬಳಿಗೆ ಹೋಗು ಅಸಾಧ್ಯಗಳು ಉಂಟು
ನಿಶ್ಚಯ. ವ್ಯಾಪ್ತಿಯಿಂದ ದುಗೆಯಲ್ಲಿ ಮೂರ್ಖರೂ ನಿಷೇಧಿಯಲ್ಲಿರಾರೆನ — ೨೬
ಕೆ ಟ್ಟಕನವು ಬಿಡಲಾಗದು. ಕಾಳಿಯನ್ನು ಅರಿಯುವವನು ಅವ — ೨೭
ರಲ್ಲಿ ಬೀಳುವನು. ಕಲ್ಲನ್ನು (ಮೋಳಕ್ಕೆ) ಹೊರಳಿಸುವವನ ಕಡೆಗೆ
ಅದು ತಿರುಗದು (ಕೀರ್ತನೆ ೨, ೧೬). ಮೋಸದ ನಾಲಿಗೆಯು ತನ್ನಿಂದ — ೨೮.

ಪ್ರತಿಯಾಗುವವರಂತು ಹೊಗೆ ಮಾಡಿ ಮಗ್ಗಾಗಾದ ಬಾಯಿ (in Mal ಮನುಸ ಬಾಯಿ) ಬಾಡಿಸೇದುವ್ರುತ್ತವೆ.

೨೨ ಸಂಧಿ

೧. ನಾಳೆಯನ್ನು ಕುರಿತು ಹೊಗಳ ಬಾರದು ಒಂದು ದಿನವು ಏನು (ಎಲ್ಲಾ)
೨. ಉಂಟು ಮಾಡುವದೆಂದು ತಿಳಿಯುವದಿಲ್ಲವಲ್ಲ. ನಿನ್ನ ಬಾಯಲ್ಲ, ಬೇರೊಬ್ಬನು
೩. ನಿನ್ನನ್ನು ಹೊಗಳಲಿ ನಿನ್ನ ಅಧರಗಳಲ್ಲ ಅನ್ಯನೇ.' ಕಲ್ಲಿಗೆ ಭಾರವೂ ಮಳ
ಳಿಗೆ ತೂಕವೂ ಎರಡರಲ್ಲಿಯೂ ಭಾರ ಹೆಚ್ಚಿರುವದು ಹೆಡ್ಡನ ವ್ಯಸನವು.
೪. ಉಷ್ಣದ ಕೋಪವು ರೋಷದ ಪ್ರವಾಹವು, ಉರಿಗೆ ನಿಲ್ಲುವವನ್ಯಾರು.
೫. ಮರೆಯಾದ ಸ್ನೇಹಕ್ಕಿಂತ ಬಯಲಾದ ಕೆರದ ಆಕ್ಷೇಪವು. ಸ್ನೇಹಿತನ
೬. ಗಾಯಗಳು ವಿಶ್ವಾಸವುಳ್ಳವುಗಳು, ಹಗೆಯವನ ಚುಂಬನಗಳು ಹೇರಳ-
೭. ವಾದವುಗಳು. ತೃಪ್ತಿಯಾದ ಬೇಹೋಯು ಜೇನು ಕೊಟ್ಟೆಯನ್ನು ತಾತ್ಸಾರ ಮಾಡುವದು
ಹಸಿವೆಯುಳ್ಳ ಬೇಹೊಗೆ ಎಲ್ಲಾ ಕಹಿಯೂ ಮಧುರ
೮. ತನ್ನ ಗೂಡನ್ನು ಬಿಟ್ಟು ಅಲೆಯುವ ಗುಬ್ಬಿಯಂತೆ ಸ್ಥಳವನ್ನು ಬಿಟ್ಟು ಅಲೆಯು
೯. ವವನು. ಹೃದಯವನ್ನು ಸಂತೋಷಪಡಿಸುವಂಥಾದ್ದು ತೈಲ ಸುಗಂಧಗ
೧೦. ಳು ಮಾನಸಾಲೋಚನೆಯಿಂದ ಗೆಳೆಯನ ಮಾಧುರ್ಯವು. ನಿನ್ನ ಗೆಳೆಯ
ನನ್ನೂ ಅಪ್ಪನ ಗೆಳೆಯನನ್ನೂ ಬಿಡದಿರುವದು ನಿನ್ನ ಆಪತ್ತಿನ ದಿವಸದಲ್ಲಿ
ಸಹೋದರನ ಮನೆಗೆ ಹೋಗದಿರುವದು, ದೂರ ಸಹೋದರನಿಗಿಂತ
ಹತ್ತಿರವಾದ ನೆರೆಯವನು ಲೇಸಲ್ಲವಾ -
೧೧. ನನ್ನ ಮಗನೇ ಜ್ಞಾನಿಯಾಗು ಹಾಗಾದರೆ ನನ್ನ ಹೃದಯವು ಸಂತೋಷ
೧೨. ಸಲು ನನ್ನನ್ನು ನಿಂದಿಸುವವನಿಗೆ ಉತ್ತರ ಹೇಳಲು ಬಹುದು. ಕುಶಲವಂ

ನು ಕೇಡನ್ನು ಕಂಡು ಆಡಿ ಕೊಂಡನು ಅಜ್ಞರು ಹೋದು ಹೋಗಿ ಬಂದ
ಶೆಕರು (೨೨, ೨). ಅವನ ಪ್ರಶ್ನೆವನ್ನು ಕೇಳಿ ಅವನು ಪರನಿಗೆ ಉತ್ತರ ಕೊಡ .೧೩
ಲಾರದವನು ಆದ್ದರಿಂದ ಅವನ ಬಿಕ್ಷೆಯನ್ನು ಹೇಳಿದರು (೧೦, ೧೬). ಬಹಳ .೧೪
ಜನಗಳು ಮಹಾ ಶಬ್ದದಿಂದ ತಾಮಾಷೆಯನ್ನು ಅನುಸರಿಸಿದರೆ ಆದು ಅವನಿಗೆ
ಸಾಹಿತ್ಯಕೊಡಲು ಸಲ್ಲದುವದು.

ಜಡಿಮಳೆಯ ದಿವಸದಲ್ಲಿ ನಿರಂತರ ಧಾರೆಯೂ ಜಗಳಗಂಟಿಯೂ ೧೫
ಸಮವಾಗಿ ಸರಿಯಾಗುವರು (೧೮, ೧೩.); ಅವಳೆಯನ್ನು ಅಡಗಿಸುವವನು ೧೬
ಗಾಳಿಯನ್ನು ಅಡಗಿಸುವವನ ಬಲಗೈ ಎಣ್ಣೆಯನ್ನು ಹಿಡಿಯುವ (ಅಂತೆ).
ಕಬ್ಬಿಣ [illegible] ಕಬ್ಬಿಣದಿಂದ ಹದವಾಗುತ್ತದೆ ಸ್ನೇಹಿತನ ಮುಖಕ್ಕೆ ಸ್ನೇಹಿತನು .೧೭
ಹದವಾದನು. ಅತಿಯಾಗಿ ಕಾಯುವವನು ಅದರ ಹಣ್ಣನ್ನು ತಿನ್ನುವನು; ೧೮
ತನ್ನ ಯಜಮಾನನನ್ನು ಕಾಯುವವನಿಗೆ ಘನತೆ ಬರುವದು. ನೀರಿನಲ್ಲಿ .೧೯
ಮುಖಕ್ಕೆ ಮುಖ (ಕಾಣುವದು) ಹಾಗೆಯೇ ಮನುಷ್ಯನ ಹೃದಯಕ್ಕೆ ಮನುಷ್ಯನು.
ಪಾತಾಳಕ್ಕೂ ನಾಶಕ್ಕೂ ಸಾಕು ಇಲ್ಲ; ತೃಪ್ತಿಯಿಲ್ಲ ಮನುಷ್ಯನ ಕಣ್ಣುಗಳ .೨೦
ಳಿಗೂ ತೃಪ್ತಿಯಿಲ್ಲ. ಬೆಳ್ಳಿಗೆ ಮೂಸೆಯೂ (in Ital ಪುಟವೂ) ಬಂಗಾರಕ್ಕೆ .೨೧
ಕೊಳವೆಯೂ (ಒಲೆಯೂ in Ital) (೧೭, ೩.) ಆದರೆ ಹೊಗಳಿಕೆಗೆ
ತಕ್ಕ ಮನುಷ್ಯ. ಹೆಡ್ಡನನ್ನು ಒರಳಿನಲ್ಲಿ ಕುಟ್ಟಿದ ಕಾಳಿನ ಸಂಗಡ ಒನಕೆ .೨೨
ಯಿಂದ ಕುಟ್ಟಿದರೂ ಅವನ ಹೆಡ್ಡತನವು ಬಿಟ್ಟುಹೋಗದು.

ನಿನ್ನ ಕುರಿಗಳ ಲಕ್ಷಣವನ್ನು ಚೆನ್ನಾಗಿ ತಿಳಿ; ನಿನ್ನ ದನಕರುಗಳ .೨೩
ಹಿಂಡನ್ನು [illegible] ಮಾಡಿಕೋ; ಯಾಕಂದರೆ ಶಾಶ್ವತವಾದ ಐಶ್ವರ್ಯ ಎಂದೆಂದಿಗೂ .೨೪
ಇರುವದಿಲ್ಲ, ರಾಜ ಮುಡಿ (in Ital ಅರಸರ ಮುಡಿ King's crown)

೨೫. ಕೊಯ್ ಕಾಲಂ ಬಂದಿತೇನು? ಹುಲ್ಲು (ಕಾಡು ಹುಲ್ಲು) ಚಿಗುರುತ್ತ ಹಸರು ಹುಲ್ಲು
೨೬. ಕಾಣಿಸಿದ ಮೇಲೆ ಬೆಟ್ಟಗಳ ಸೊಪ್ಪುಗಳು ಕೂಡಿಸಲ್ಪಟ್ಟವೆ, ನಿನ್ನ ವಸ್ತ್ರಕ್ಕೆ
೨೭. ಕುರಿಮರಿಗಳೂ ಹೊಲದ ಕ್ರಯಕ್ಕೆ ಹೋತಗಳೂ ಇರುವವೆ; ಇನ್ನೂ
ಮನೆಯವರ ಆಹಾರಕ್ಕೆ ಸಾಕಾದ ಮೇಕೆ ಹಾಲು ನಿನ್ನ ದಾಸಿಗಳಿಗೆ ಜೀವನ
ಕ್ಕೂ (ಜೀವನಾಂಶ ಆಗುವದು).

೨೮ನೇ — ಸಂಧಿ.

೧. ಒಬ್ಬನೂ ಹಿಂದಟ್ಟದಿದ್ದರೂ ದುಷ್ಟರು ಓಡುತ್ತಾರೆ. ನೀತಿವಂತರು
೨. ಸಿಂಹದಂತೆ ಧೈರ್ಯವಾಗಿದ್ದಾರೆ. ದೇಶದ ದ್ರೋಹದ ನಿಮಿತ್ತ ಅದರ ಪ್ರ
ಭುಗಳು ಅನೇಕರು. ವಿವೇಕವೂ ಅರಿವೂ ಉಳ್ಳ ಮನುಷ್ಯನಿಂದ
೩. ನೆಲೆಯು ದೀರ್ಘವಾಗುವದು. ತಾನು ದರಿದ್ರನಾಗಿ ಬಡವರನ್ನು ಉಪ
ದ್ರವ ಮಾಡುವ ಪುರುಷನು ಅನ್ನವಿಲ್ಲದ ಹಾಗೆ ಸುರಿಯುವ ಬಿರು
೪. ಮಳೆ. ಧರ್ಮೋಪದೇಶವನ್ನು ಉಪೇಕ್ಷಿಸುವವರು ದುಷ್ಟನನ್ನು ಹೊ
ಗಳುವರು ಧರ್ಮವನ್ನು ಕಾಪಾಡುವವರು ಅವರ ಸಂಗಡ ಕಾಳೆಗಗಳುಳ್ಳ
೫. ವರು. ಆಗದವರಿಗೆ ನ್ಯಾಯ ತಿಳುವಳಿಕೆಯಿಲ್ಲ. ಯೆಹೋವನನ್ನು ಹುಡು
೬. ಕುವವರಿಗೆ ಎಲ್ಲಾ ಗೊತ್ತಾಗುವದು. ಎರಡು ಮಾರ್ಗಗಳಲ್ಲಿ ವಕ್ರನಾದ
ಧನವಂತನಿಗಿಂತ ತನ್ನ ಸಂಪೂರ್ಣತೆಯಲ್ಲಿ ನಡೆಯುವ ದರಿದ್ರನು ವಾಸಿ
೭. (೧೯, ೧). ವಿವೇಕವುಳ್ಳ ಮಗನು ಧರ್ಮೋಪದೇಶವನ್ನು ಕಾಪಾಡು
ತ್ತಾನೆ. ಭೋಗಿಗಳ ಸಂಗಡ ಬಳಕೆ ಮಾಡುವವನು ಅಪ್ಪನನ್ನು ನಾಚಿ
೮. ಕೆಪಡಿಸುತ್ತಾನೆ. ಬಡ್ಡಿಯಿಂದಲೂ ದುರ್ಲಾಭದಿಂದಲೂ ಸಂಪತ್ತನ್ನು
ಹೆಚ್ಚಿಸುವವನು ಬಡವರನ್ನು ಕನಿಕರಿಸುವವನಿಗಾಗಿಯೇ ಕೂಡಿಸುವನು

ವರು. ಧರ್ಮವನ್ನು ಕೇಳದೆ ಕಿವಿಯನ್ನು ತಿರುಗಿಸುವವನ (ಪ್ರಾರ್ಥನೆಯು)
ಅಸಹ್ಯ. ನೀತಿವಂತರನ್ನು ಕೆಟ್ಟ ಮಾರ್ಗದಲ್ಲಿ ತಪ್ಪಿಸುವವನು ತನ್ನ ಗುಣಿಯಲ್ಲಿ ೧೦
ತಾನೇ ಬೀಳುವನು ಆದರೆ ಸಂಪೂರ್ಣರು ಒಳ್ಳೇದನ್ನು ಬಾಧ್ಯವಾ
ಗಿ ಹೊಂದುವರು. ಧನವುಳ್ಳ ಪುರುಷನು ತನ್ನ ಕಣ್ಣುಗಳಲ್ಲಿ ಜ್ಞಾನಿ ೧೧
ಎಂದು ವಿವೇಕವುಳ್ಳ ಬಡವನು ಅವನನ್ನು ಪರೀಕ್ಷಿಸುವನು--
ನೀತಿವಂತರು ಉಲ್ಲಾಸಿಸಿದರೆ ಮಹಾ ಶೋಭಾಕರವು ದುಷ್ಟರು ಎದ್ದರೆ ೧೨
ಮನುಷ್ಯರು ಅಡಗಿ (ಮರೆಯಾಗಿ) ಕೊಳ್ಳುವರು. ತನ್ನ ದ್ರೋಹಗಳನ್ನು ಮುಚ್ಚು ೧೩
ವವನಿಗೆ ಸಿದ್ಧಿ ಇಲ್ಲ ಅರಿಕೆ ಮಾಡಿ ಬಿಡುವವನಿಗೆ ಕನಿಕರ ಉಂಟಾ
ಗುವದು. ನಿತ್ಯ ಹೆದರುವ ಮನುಷ್ಯನು ಧನ್ಯನು, ಹೃದಯವನ್ನು ೧೪
ಕಠಿನ ಪಡಿಸುವವನು ಕೇಡಿನಲ್ಲಿ ಬೀಳುವನು. ಗರ್ಜಿಸುವ ಸಿಂಹವೂ ೧೫
ಮೇವಿಗೆ ತಿರುಗಾಡುವ ಕರಡಿಯೂ ಆಗಿರುವಂತಾದ್ದು ಬಡ ಜ
ನರ ಮೇಲೆ ಆಳುವ ದುಷ್ಟನು. ಹೇ ವಿವೇಕಗಳು ಕಡಿಮೆಯಾಗಿಯೂ ೧೬
ಉಪದ್ರವಗಳು ಹೆಚ್ಚಾಗಿಯೂ ಆಗುವ ರಾಜನೇ! ದುರ್ಲಾಭವನ್ನು ಹಗೆ
ಮಾಡುವವನು ಜೀವದ ದಿವಸಗಳನ್ನು ದೀರ್ಘ ಮಾಡುವನು.

ಒಂದು ಪ್ರಾಣ ರಕ್ತವು (ಚೆಲ್ಲಿ) ಹೊರಿಸುವ ಮನುಷ್ಯನು ಗುಣಿಯಲ್ಲಿ ೧೭
(ಇಳಿಯುವ) ವರೆಗೆ ಓಡುತ್ತಾನೆ ಯಾರೂ ಅವನನ್ನು ಹಿಡಿದುಕೊಳ್ಳ
ಬೇಡ. ಸಂಪೂರ್ಣತೆಯಲ್ಲಿ ನಡೆಯುವವನು ರಕ್ಷಿಸಲ್ಪಡುವನು ೧೮
ಎರಡು ಮಾರ್ಗಗಳಲ್ಲಿ ಚಂಚಲಿಸುವವನು ನಾಶವಾಗಿ ಹೋಗುವನು.
ತನ್ನ ನೆಲವನ್ನು ವ್ಯವಸಾಯ ಮಾಡುವವನು ಆಹಾರ ತೃಪ್ತನಾಗು ೧೯
ವನು (೧೨, ೧೧). ನಂಬಿಕೆಯುಳ್ಳವನು ಅನುಗ್ರಹ ಪೂರ್ಣನು ೨೦

೨೧. ಧನವಂತನಾಗಲಿಕ್ಕೆ ಅವಸರಪಡುವವನು ನಿರ್ದೋಷಿಯಾಗಲಿಕ್ಕಿಲ್ಲ. ಮುಖ
ನೋಡುವದು ಒಳ್ಳೇದಲ್ಲ (೨೪,೨೩), ರೊಟ್ಟಿತುಂಡಿಗಾಗಿ ಆ ಪುರುಷ
೨೨. ನು ದ್ರೋಹ ಮಾಡಲಿಕ್ಕಾದಾನು. ಕೆಟ್ಟ ಕಣ್ಣುಳ್ಳವನು ಸಂಪತ್ತಿಗಾಗಿ ತ್ವರೆ
ಪಡುತ್ತಾನೆ, ಕೊರತೆಯು ತನಗೆ ಬರುವದೆಂದು ತಿಳಿಯುವದು ಇಲ್ಲ.
೨೩. ಹಿಂಜರಿಯುವ ಮನುಷ್ಯನನ್ನು ಗದರಿಸುವವನಿಗೆ ನಾಲಿಗೆಯನ್ನು
೨೪. ನುಣ್ಣಗೆ ಮಾಡುವವನಿಗಿಂತ ಕೃಪೆ ದೊರಕುವದು. ತಂದೆ ತಾಯಿಗಳಿಂದ
ಕದ್ದು (ದ್ರೋಹವಲ್ಲವೆಂದು) ಹೇಳುವವನು ನಾಶಮಾಡುವವನಿಗೆ (In
೨೫. hal. ನಾಶಗಾರನಿಗೆ) ಜೊತೆಗಾರನು. ಅತ್ಯಾಶೆ ಹೊಂದುವವನು ಜಗಳಗಳ
ನ್ನು ಎಬ್ಬಿಸುವನು, ಯೆಹೋವನಲ್ಲಿ ಭರವಸವಿಡುವವನಿಗೆ ಪುಷ್ಟಿ ಉಂಟಾ
೨೬. ಗುವದು. ಸ್ವಂತ ಹೃದಯದಲ್ಲಿ ಭರವಸವಿಡುವವನು ಮೂಢನು, ಜ್ಞಾನ
೨೭. ದಲ್ಲಿ ನಡೆಯುವವನೇ ಬಿಡಿಸಲ್ಪಡುವನು. ಬಡವನಿಗೆ ಕೊಡುವವನಿಗೆ
ಕೊರತೆ ಇಲ್ಲ, ಕಣ್ಣುಗಳನ್ನು ಮರೆ ಮಾಡುವವನಿಗೆ ಬಹು ಶಾಪ ಹೆಚ್ಚಾಗುವ
೨೮. ದು. ದುಷ್ಟರು ಎದ್ದರೆ ಮನುಷ್ಯರು ಅಡಗಿಕೊಳ್ಳುವರು (೧೨.) ಅವರು ನಾಶ
ವಾಗಿ ಹೋದರೆ ನೀತಿವಂತರು ಹೆಚ್ಚುವರು.

೨೯ ಸಂಧಿ.

೧. ಹಲವು (ಗದರಿಕೆಗಳಿಗೆ in hal) ಗದರಿಕೆಗಳಿಗೆ ಒಳಗಾಗಿಯೂ ಕುತ್ತಿ
ಗೆಯನ್ನು ಕಠಿನ ಮಾಡುವವನು ಉಪಶಾಂತಿ ಇಲ್ಲದೆ ಫಕ್ಕನೆ ಮುರಿ
೨. ದು ಹೋಗುವನು (೬,೧೫). ನೀತಿವಂತರು ಹೆಚ್ಚುವಾದರಲ್ಲಿ ಜನ ಸಂತೋ
ಷಿಸುವದು ದುಷ್ಟನು ಆಳಿದರೆ ಜನ ನರಳುವದು. ಜ್ಞಾನವನ್ನು ಪ್ರೀ
ತಿಸುವ ಆಳು ಅಪ್ಪನನ್ನು ಸಂತೋಷಪಡಿಸುತ್ತಾನೆ (೧೦,೧) ವೇಶ್ಯೆಯ

ಸಂಗಡ ಸಲಿಗೆಯುಳ್ಳವನು ಸೊತ್ತನ್ನು ಹಾಳು ಮಾಡುತ್ತಾನೆ. ನ್ಯಾಯ ೪
ದಿಂದ ಅರಸನು ದೇಶವನ್ನು ಸ್ಥಿರ ಪಡಿಸುವನು ಕಾಣಿಕೆ(ಪ್ರಿಯನು ಅದನ್ನು
ಹಾಳು ಮಾಡುವನು.

ಜತೆಗಾರನಿಗೆ ಮುಖಸ್ತುತಿ ಹೇಳುವ ಪುರುಷನು ಅವನ ಪಾದಗಳಿ- ೫
ಗೆ ಬಲೆ ಒಡ್ಡುತ್ತಾನೆ. ದುಷ್ಟ ಪುರುಷನ ದ್ರೋಹಗಳಲ್ಲಿ ಉರುಲುಂಟು ನೀತಿ ೬
ವಂತನು ಆರ್ಭಟಿಸಿ ಸಂತೋಷಿಸುವನು (೨೨, ೧೨). ಆದರೆ ಬಡವರ ೭
ವ್ಯವಹಾರವನ್ನು ನೀತಿವಂತನು ತಿಳಿಯುತ್ತಾನೆ ದುಷ್ಟನಿಗೆ ತಿಳುವಳಿಕೆ(ಗ್ರಹಿಕೆ
ಇಲ್ಲಿಲ್ಲ. ಪರಿಹಾಸಕರು ನಗರ(ವನ್ನು)ಕ್ಕೆ ಉರಿ ಹೊತ್ತಿಸುವರು ಜ್ಞಾ- ೮
ನಿಗಳು ಕೋಪವನ್ನು ಶಮನ ಮಾಡುವರು. ಜ್ಞಾನವಾದ ಅಜ್ಞ ಸಂಗಡ ೯
ಜ್ಞಾನವುಳ್ಳವನು ವ್ಯಾಜ್ಯವಾಡಿದರೆ ಆತನು ಸಿಟ್ಟು ಮಾಡಿ ನಕ್ಕು ಸುಮ್ಮನಿ
ರನು. ರಕ್ತ ಚೆಲ್ಲುವವರು ಸಂಪೂರ್ಣನನ್ನು ಹಗೆ ಮಾಡುವರು, ನೆಟ್ಟನೆ ೧೦
ಯವರು ಅವನ ಜೀವವನ್ನು(ರಕ್ಷೆ ಸಲುವಾಗಿ) ಅರಸುವರು. ತಂನ ಮನ ೧೧
ಸ್ಸಿನ ಗಲಿಬಿಲಿಯನ್ನೆಲ್ಲಾ ಮೂಢನು ಹೊರಗೆ ಬಿಡುತ್ತಾನೆ ಜ್ಞಾನಿಯು ಅದ
ನ್ನು ಹಿಂದಕ್ಕೆ ಶಮನ ಮಾಡುವನು.

ಆಳುವವನು ಮೋಸದ ಮಾತನ್ನು ಲಕ್ಷ್ಯ ಮಾಡುವವನಾದರೆ ಅವನ ೧೨
ಸೇವಕರು ಎಲ್ಲಾ ದುಷ್ಟರು. ದರಿದ್ರನೂ ಬಡ್ಡಿದಾರನೂ ತಂಮೊಳಗೆ ಕೂ ೧೩
ಡಿಬರುತ್ತಾರೆ ಇಬ್ಬರ ಕಣ್ಣುಗಳಿಗೂ ಯೆಹೋವನು (ಬೆಳಕನ್ನು) ಕೊ
ಡುತ್ತಾನೆ (೨೨, ೨.). ಅರಸನು ಬಡವನಿಗೆ ಸತ್ಯದಲ್ಲಿ ನ್ಯಾಯ ತೀರಿಸು ೧೪
ವವನಾದರೆ ಅವನ ಸಿಂಹಾಸನವು ಎಂದೆಂದಿಗೂ ಸ್ಥಿರಪಡುವದು.
ಬೆತ್ತವೂ ಗದರಿಕೆಯೂ ಜ್ಞಾನವನ್ನು ಕೊಡುವವು ಆದರೆ ಅಡ್ಡಾಡುವ ಬಿಟ್ಟ ೧೫

೧೬. ಹುಡುಗನು ತಾಯಿಗೆ ನಾಚಿಕೆಯನ್ನು ತರುತ್ತಾನೆ. ದುಷ್ಟರು ಹೆಚ್ಚಿದರೆ ಪಾಪವು
ಹೆಚ್ಚುವದು, ಹೇಗಿದ್ದರೂ ನೀತಿವಂತರು ಅವರ ಬೀಳುವಿಕೆಯನ್ನು ನೋಡುವರು.
೧೭. ನಿಂನ ಮಗನಂನು ಶಿಕ್ಷಿಸು ಆಗ ಅವನು ನಿಂನಂನು ಆದರಿಸಿ ನಿನ್ನ ಜೀ
ವಿಗೆ ಮುದ್ದು (fondness) ಆಗಿರುವನು.
೧೮. (ಪ್ರ)ಕಟನೆ ಇಲ್ಲದಿದ್ದರೆ ಜನ ಎದೆಗಾಳ್ಳುವರು, ಧರ್ಮವನ್ನು ಕಾಪಾಡಿ
೧೯. ದರೆ ಧನ್ಯ! ಬರೇ ಮಾತುಗಳಿಂದ ದಾಸನು ನೆಟ್ಟಗಾಗಲಿಕ್ಕಿಲ್ಲ ಯಾಕಂದರೆ
೨೦. ಅವನು ಗ್ರಹಿಸಿದರೂ ಉತ್ತರ ಕೊಡಲಿಕ್ಕಿಲ್ಲ. ಮಾತುಗಳಲ್ಲಿ ತ್ವರೆಪಡು
ವ ಅಂಥವನನ್ನು ಕಂಡೀಯಾ? ಅವನಿಗಿಂತ ಮೂರ್ಖನಲ್ಲಿ ನಿರೀಕ್ಷೆ ~~ಹೆಚ್ಚು~~ ಹೆ
೨೧. ಚ್ಚು (೨೬,೧೨.). ದಾಸನನ್ನು ಬಾಲ್ಯದಿಂದ ಶಿಕ್ಷೆ ಸಡಿಸಿ ಸಾಕಿದರೆ ಅವನು
ಕಡೆಗೆ ಅಳಿಯನಂತೆ ಆ ಮನೆ ಮಗನಂತೆ (ಕಾಲಿ ಸಿಕ್ಕುವನು).
೨೨. ಕೋಪಿಗನು ಜಗಳವನ್ನು ಹೆಚ್ಚಿಸುತ್ತಾನೆ (೧೫,೧೮) ಉಷ್ಣ
೨೩. ಪಿತ್ತವನಿಗೆ (ದ್ರೋಹಗಳು) ಹೆಚ್ಚುವವು. ಮನುಷ್ಯನ ಗರ್ವ(ಹೆಮ್ಮೆ)ವು ಅವನನ್ನು
೨೪. ತಗ್ಗಿಸುವದು ಮನೋದೀನರಾದವನು ಮಾನ ಹೊಂದುವನು. ಕಳ್ಳ
ನ ಕೂಡ ಪಾಲುಗೊಳ್ಳುವವನು ಸ್ವದೇಹಿಯನ್ನ ಹಗೆಮಾಡುತ್ತಾನೆ, ಶಿರು
ಗಾಪವನ್ನ ಕೇಳಿದರೂ (ಲೇವಿ. ೫, ೧.) ಅವನು ತಿಳಿಸುವದಿಲ್ಲ
೨೫. ಮನುಷ್ಯರಿಗೆ ನಡುಗುವಂಥಾದ್ದು ಉರುಲನ್ನು ತರುವದು ಯೆಹೋ
೨೬. ವನಲ್ಲಿ ಭರವಸವಿಡುವವನು ಎತ್ತರ ಜಾಗದಲ್ಲಿ ಆಗುವನು. ಆಳು
ವವನ ಮುಖವನ್ನು ಅನೇಕರು ಹುಡುಕುತ್ತಾರೆ, ಆದರೆ ಅವನವನ ನ್ಯಾಯತೀರ್ಪು
೨೭. ಯೆಹೋವನಿಂದಲೇ. ನೀತಿವಂತರಿಗೆ ಅಸಹ್ಯವಾದವನು ಅಕ್ರಮಗಾರನು. ಆ
ದರೆ ದುಷ್ಟನಿಗೆ ಅಸಹ್ಯವು ನೆಟ್ಟನೆ ಮಾರ್ಗದವನು.

V. ಆಗೂರ್ ಮೊದಲಾದವರ ವಾಕ್ಯಗಳು. (೩೦-೩೧).

ಸಂಧಿ. ೩೦.

ಆಗೂರನು ಲೋಕ ಜ್ಞಾನಿಗಳಿಗೆ ಎದುರು ನಿಂತು ದೇವ ರಹಸ್ಯಗಳು (೪) ಮನುಷ್ಯನಿಗೆ ನಿಲುಕದವುಗಳಾಗಿರುವದರಿಂದ, ದೇವ ವಚನವನ್ನು ಆಶ್ರಯಿಸಿ (೬) ದೇವರ ಮಾಯೆಯನ್ನು ಅಗಲಿಸಿ ಅಲಂಕಾರವನ್ನು ಕಾದ ಬೇಕೆಂದು ಪ್ರಾರ್ಥಿಸಿ (೧೦) ಚಾಡಿಯನ್ನು (೧೧) ಪಿತೃನಿಂದೆ, ಸ್ವನೀತಿ, ಗರ್ವ, ಹಿಂಸೆ ಈ ನಾಲ್ಕನ್ನು ಆಕ್ಷೇಪಿಸಿ (೧೪) ಅತ್ಯಾಶೆಯವರು (೧೬) ಪಿತೃ ನಿಂದಕರು (೧೭) ವ್ಯಭಿಚಾರಿಗಳು (೨೧) ನೀಚ-ಗರ್ವಿಗಳು ಇವರನ್ನು ಗದರಿಸಿ (೨೪) ಜ್ಞಾನಾತಿಶಯವನ್ನು (೨೮) ರಾಜಧೈರ್ಯವನ್ನು (೩೨) ಕೋಪ ಶಾಂತಿಯನ್ನೂ ವರ್ಣಿಸುವನು.

ಯಾಕೆಯ ಪುತ್ರನಾದ ಆಗೂರನ ವಾಕ್ಯಗಳಾದ ದೈವೋಕ್ತಿ; ಇಥಿಯೇಲನಿಗೆ, ಇಥಿಯೇಲ್ ಉಕ್ಕಾಲ್ ಎಂಬುವರಿಗೇನೇ ದೇವರೇ ನಾನು ಕಷ್ಟಪಟ್ಟೆ ಕಷ್ಟಪಟ್ಟು ಕುಂದಿಹೋದೆನು ಎಂದು ಆ ಪುರುಷನ ನುಡಿ ಏನಂದರೆ- ೧

ಹೌದು ನಾನು ಮನುಷ್ಯನಲ್ಲ ಮೃಗ ಸ್ವಭಾವದವನು ಮನುಷ್ಯಬುದ್ಧಿ ನನಗಿಲ್ಲ; ಜ್ಞಾನವನ್ನು ನಾನು ಕಲಿತದ್ದೂ ಇಲ್ಲ ವಿಶ್ವೈಕ ವಿಶುದ್ಧನ ಅರಿವನ್ನು (೯,೧೦) ತಿಳಿಯುವದೂ ಇಲ್ಲ; ಸ್ವರ್ಗಕ್ಕೆ ಏರಿ ಇಳಿದವನು ಯಾರು? ಗಾಳಿಯನ್ನು ಕೈಮುಷ್ಟಿಗಳಲ್ಲಿ ಕೂಡಿಸಿದ್ದು ಯಾರು? ನೀರುಗಳನ್ನು ವಸ್ತ್ರದಲ್ಲಿ ಕಟ್ಟಿದವನು ಯಾರು? ಭೂಮಿಯ ಮೇರೆಗಳನ್ನೆಲ್ಲಾ ಸ್ಥಾಪಿಸಿದ್ದು ಯಾರು? ನಿನಗೆ ಗೊತ್ತಾದರೆ ಅವನ ಹೆಸರೇನು? ಅವನ ಮಗನಿಗೂ ಹೆಸರು ಏನು? ಹೌದು ದೇವರ ಮಾತುಗಳೆಲ್ಲಾ ಪುಟ ಹಾಕಿದ್ದು ಶುದ್ಧ ಹಾಕಿದ್ದು (ಕೀರ್ತನೆ ೧೮,೩೦) ೨ ೩ ೪ ೫

ಸಾಮತಿಗಳು ೩೦ ಸಂಧಿ

೬. ಆತನಲ್ಲಿ ಆಶ್ರಯವಿಡುವವನಿಗೆ ಆತನು ಗುರಾಣಿ ಆತನು ನಿನ್ನನ್ನು
ಗದರಿಸಲು ನೀನು ಸುಳ್ಳುಗಾರನಾಗದಂತೆ ಆತನ ಮಾತುಗಳಿಗೆ ಕೂಡಿಸಬೇಡ!
೭. ಎರಡನ್ನು ನಾನು ನಿನ್ನಿಂದ ಬೇಡಿದೆನು ಸಾಯುವದಕ್ಕಿಂತ ಮೊದಲು
೮. ನನ್ನಿಂದ ತಡೆಯಬಾರದು: ಮಾಯೆಯನ್ನೂ ಸುಳ್ಳು ಮಾತನ್ನೂ ನನ್ನಿಂದ
ಅಗಲಿಸು ದಾರಿದ್ರ್ಯವನ್ನೂ ಸಂಪತ್ತನ್ನೂ ನನಗೆ ಕೊಡದೆ ಜೀವನಕ್ಕೆ ಬೇಕಾದ
೯. ರೊಟ್ಟಿ ನನಗೆ ಉಣ್ಣಿಸು! ಅಲ್ಲದಿದ್ದರೆ ~~ಅ~~ ನಾನು ತೃಪ್ತನಾಗಿ ಯೆಹೋವ
ನು ಯಾರು ಎಂತ ಸುಳ್ಳು ಹೇಳೇನು ಕೊರತೆಪಟ್ಟು ನಾನು ಕದ್ದು ನನ್ನ
ದೇವರ ನಾಮವನ್ನು ಅಶುದ್ಧಮಾಡೇನು.
೧೦. ದಾಸನ ನಿಂದ ಯಜಮಾನನಿಗೆ ಚಾಡಿ ಹೇಳ ~~ಬೇಡ~~ ಅವನು
ನಿನ್ನನ್ನು ಶಪಿಸಿ ನೀನು ಅಪರಾಧಿಯಾಗದಂತೆ ಇರಲಿ
೧೧. ತಾ ಅಪ್ಪನನ್ನ ಶಪಿಸಿ ಅಮ್ಮಗಳನ್ನ ಅನುಗ್ರಹಿಸದೆ ಇರುವ ಸಂತ
೧೨. ತಿಯೇ, ಸ್ವಂತ (in Tulu ತಂನ) ಕಣ್ಣುಗಳಲ್ಲಿ ಶುದ್ಧವಾಗಿ ಮೈಲಿಗೆ ಬಿಡ
ದಂತೆ ತೊಳೆಯಲ್ಪಡದ ಸಂತತಿಯೇ! ಕಣ್ಣುಗಳಿಗೆ (ಎಂತಹಾ) ಎತ್ತರವಾಗಿ ಕಣ್ಣುರೆಪ್ಪೆ
೧೩. ಗಳಿಗೆ ಡೊಂಕವಾಗಿ ಉಳ್ಳ ಸಂತತಿಯೇ! ಸಾಧುಜನರನ್ನು ಭೂಮಿಯಿಂದ
ಲೂ ದಿಕ್ಕಿಲ್ಲದವರನ್ನು ಮನುಷ್ಯರ ಮಧ್ಯದಿಂದಲೂ ತಿಂದು ಬಿಡಲಿಕ್ಕೆ ಹಲ್ಲು
ಗಳು ಖಡ್ಗವೂ ಕೋರೆಗಳು ಕತ್ತಿಯೂ ಆಗಿರುವ ಸಂತತಿಯೇ!
೧೪. ಜಿಗಳೆಗೆ ಕೊಡು ಕೊಡು ಎಂದು (ಹೇಳುವ) ಇಬ್ಬರು ಪುತ್ರಿಗಳು ಇದ್ದಾ
೧೫. ರೆ; ತೃಪ್ತಿಯಾಗದ ಈ ಮೂವರು ಇದ್ದಾರೆ. ಸಾಕೆಂದದ ನಾಲ್ಕು ಉಂಟು: ಪಾತಾಳ
೧೬. ವೂ ಬಂಜೆಯ ಗರ್ಭಪಾತ್ರೆಯೂ, ಮತ್ತು ನೀರಿನಿಂದ ಭೂಮಿಗೆ ತೃಪ್ತಿ ಇಲ್ಲ
ಸಾಕೆಂತ ಅಗ್ನಿ ಹೇಳುವದೂ ಇಲ್ಲ.

ಅಪ್ಪನನ್ನು ಕುಚೋದ್ಯ ಮಾಡಿ ಅವ್ವಳಿಗೆ ವಿಧೇಯತ್ವವನ್ನು ನಿರಸಿಸು ೧೭
ವ ಕಣ್ಣನು ತಗ್ಗಿನ ಕಾಗೆಗಳು ಕಿತ್ತು ಹದ್ದಿನ ಮರಿಗಳು ತಿನ್ನುವವು.

ಮೂರು ನನಗೆ ಅತ್ಯಾಶ್ಚರ್ಯವಾದ್ದು ನಾಲ್ಕು ಗ್ರಾಹ್ಯಕ್ಕೆ ಬಾರದು:- ಆಕಾಶ ೧೮
ದಲ್ಲಿ ಹದ್ದಿನ ಮಾರ್ಗ, ಬಂಡೆ ಮೇಲೆ ನಾಗನ ಮಾರ್ಗ, ಸಮು(ದ್ರ) ಮಧ್ಯಗಳಿಗೆ ಹಡ- ೧೯
ಗದ ಮಾರ್ಗ, ಕನ್ನಿಕೆಯಲ್ಲಿ ಪುರುಷನ ಮಾರ್ಗ. ವ್ಯಭಿಚಾರ ಮಾಡುವ ಸ್ತ್ರೀಯ ೨೦
ಮಾರ್ಗವು ಹೀಗೆಯೇ, ಆಕೆಯು ತಿಂದು ಬಾಯಿ ತೊಡೆದು ಬಿಟ್ಟು ನಾನು
ಅಕ್ರಮ ಮಾಡಲಿಲ್ಲವೆಂದು ಹೇಳುವಳು.

ಮೂರರ ಕೆಳಗೆ ಭೂಮಿ ಕದಲುತ್ತದೆ ನಾಲ್ಕರ ಕೆಳಗೆ ಅದಕ್ಕೆ ತಾಳಲಿಕ್ಕೆ ಆ ೨೧
ಗದು:- ದಾಸನು ರಾಜನಾದರೆ, ಹೆಡ್ಡನಿಗೆ ಆಹಾರ ತೃಪ್ತಿಯಾದರೆ, ಇಷ್ಟ ೨೨
ವಿಲ್ಲದ ಹೆಂಗಸು ಮದುವೆ ಮಾಡಿಕೊಂಡರೆ ದಾಸಿಗೆ ಯಜಮಾನಿಯ ಬಾಧ್ಯತೆ ೨೩
ಸಿಕ್ಕಿದರೆ ಇವರ ಕೆಳಗೆ.

ಭೂಮಿಯಲ್ಲಿ ಬಹಳ ಸಣ್ಣದಾಗಿರುವವುಗಳು ಅತ್ಯಂತ ಜ್ಞಾನ ಹೊಂದಿದ ೨೪
ನಾಲ್ಕು ಇವೆ:- ಬಲಹೀನ ಜಾತಿಯಾದರೂ ಬೇಸಿಗೆ ಕಾಲದಲ್ಲಿ ತಮ್ಮ ಆ ೨೫
ಹಾರವನ್ನು ಸಂಪಾದಿಸುವ ಇರುವೆಗಳು (೬ ಲಾ.), ಶಕ್ತಿ ಇಲ್ಲದ ಜಾತಿಯಾ ೨೬
ದರೂ ಕಲ್ಲಿನಲ್ಲಿ ಮನೆ ಕಟ್ಟುವ ಮೊಲಗಳು (In heb ಶಫಾನುಗಳು.
ಗಷೆ=hoof) ಅರಸನು ಇಲ್ಲದಿದ್ದರೂ ದಂಡು ದಂಡಿನಂತೆ ಸಾಲಾಗಿ ಹೊರಡುವ ೨೭
ಮಿಡತೆಗಳ ಗುಂಪು, ಕೈಗಳಿಂದ ಹಿಡಿಯಬಹುದು ಆದರೂ ರಾಜರ ಅರ ೨೮
ಮನೆಗಳಲ್ಲಿ ವಾಸಿಸುವ ಹಲ್ಲಿ

ಮೂರಕ್ಕೆ ಗಮನ ಒಳ್ಳೇದು ನಾಲ್ಕಕ್ಕೆ ನಡೆಯಂದ ಒಳ್ಳೇದು:- ೨೯
ಯಾವುದಕ್ಕೂ ಹಿಂದುಗಡದ ಮೃಗವೀರನಾದ ಸಿಂಹ, ಸೊಂಟ ಕಟ್ಟುವಾದ ೩೦

೩೧. ಶ್ರಾವಣವೂ, ಹೋತವೂ ಪ್ರತ್ಯವಿಲ್ಲ (the hal ಪಡೆಗಾರರಿಲ್ಲ) ರಾಜನೂ.
೩೨. ನೀನು ಉಬ್ಬಿಕೊಳ್ಳುವದರಲ್ಲಿ ಹೆಡ್ಡನಾದರೂ ಸಂಚಾಲೋಚಿಸಿದ್ದರೂ ದರೆ
೩೩. ಬಾಯ ಮೇಲೆ ಕೈ(ಇಟ್ಟುಕೋ)! ಯಾಕೆಂದರೆ ಹಾಲನ್ನು ಹಿಂಡಿದರೆ ಮೊಸರು
ಮೂಗನ್ನು ಹಿಂಡಿದರೆ ರಕ್ತವನ್ನು ಮಾಡುವದು, ಕೋಪವನ್ನು ಹಿಂಡಿದರೆ
ಕಲಹಗಳು ಉಂಟುಮಾಡುವದು ಬಹುದು.

೩೧ ಸಂಧಿ

ರಾಜಧರ್ಮವನ್ನು ಉಪದೇಶಿಸಿದ್ದು (೧೦) ಬಳಿಕ

ಪ್ರೌಢಸ್ತ್ರೀಯ ವರ್ಣನೆ (ಅಕಾರಾದಿ)

೧. ಲೆಮುವೇಲ್ (ದೇವ ಪರನು) ಎಂಬ ಮಸ್ಸಾ ರಾಜನ ಮಾತು
೨. ಗಳು, ಅವನ ತಾಯಿ ಅವನನ್ನು ಉಪದೇಶಿಸಿದ್ದು: ನಂನ ಮಗನೇ ಏನು?
ನಂನ ಉದರದ ಮಗನೇ ಏನು? ನಂನ ಹರಕೆಗಳ ಮಗನೇ ಏನು:
೩. ಸ್ತ್ರೀಯರಿಗೆ ನಿಂನ ವೀರ್ಯವನ್ನೂ ರಾಜರನ್ನು ಕೆಡಿಸುವವರಿಗೆ ನಿಂನ ಮಾ
೪. ರ್ಗಗಳನ್ನೂ ಕೊಟ್ಟು ಬಿಡಬೇಡ! ದ್ರಾಕ್ಷಾರಸ ಕುಡಿಯುವದು ಅರಸರಿಗಲ್ಲ
ಲೆಮುವೇಲನೇ ರಾಜರಿಗಲ್ಲ ಮದ್ಯ ಎಲ್ಲಿ ಎಂಬುದು ಅಧಿಪತಿಗೆ(ಪ್ರಭು)ವಲ್ಲ,
೫. ಕುಡಿದು ವ್ಯವಸ್ಥೆಯನ್ನು ಮರೆತು ಎಲ್ಲಾ ದುಃಖದ ಮಕ್ಕಳ ನ್ಯಾಯವನ್ನು ತಿರು
೬. ಗಿಸಿಬಿಟ್ಟಾರೆಯೇ. ಕೆಡುವವನಿಗೆ ಮದ್ಯವೂ ಮನಕ್ಲೇಶವುಳ್ಳವನಿಗೆ ದ್ರಾಕ್ಷಾ
೭. ರಸವೂ ಕೊಡಿರಿ, ಕುಡಿದು ತಂನ ದಾರಿದ್ರ್ಯವನ್ನು ಮರೆತು ತಂನ ಕಷ್ಟವನ್ನು
೮. ಇಂನು ನೆನಸದಿರಲಿ! ಮೂಗನಿಗೋಸ್ಕರ ಬಾಯಿ ತೆರೆದುಕೋ, ಅನಾಥರಿಲ್ಲ
೯. ದೆ ಹೋದ ಎಲ್ಲವರಿಗೂ ನ್ಯಾಯವನ್ನು ತೀರಿಸಲಿಕ್ಕಾಗಿಯೇ, ಬಾಯಿ ತೆರೆ
ನೀತಿಯನ್ನು ತೀರ್ಪು ಮಾಡು ಸಾಧುವಿಗೂ ದಿಕ್ಕಿಲ್ಲದವನಿಗೂ ವ್ಯವಹಾರ ತೀರಿಸು

ಎಲವಾಲೆ ಜಾಣ್ಬಾದ ಹೆಂಡ್ತಿಯು ಯಾರಿಗೆ ಸಿಕ್ಕುವಳು? ಮುತ್ತುಗಳಿಗೂ ೧೧೦
ಆಕೆಯ ಕ್ರಯ ಅಗಲವಾದದ್ದೇ. ಆಕೆಯಲ್ಲಿ ಗಂಡನ ಹೃದಯವು ಸ್ಥಿರ ೧೧೧
ವಾಗಿ ನಂಬುತ್ತದೆ ಲಾಭವು ಕಡಿಮೆಯಾಗಲಿಕ್ಕಿಲ್ಲ ಸಹ. ಆಕೆಯು ಗಂಡನಿಗೆ ಆಕೆಯು ೧೧೨
ಕೇಡನ್ನಲ್ಲ ಬಾಳುವ ದಿನವೆಲ್ಲಾ ಗುಣವನ್ನುಂಟುಮಾಡುವಳು. ಸ್ತ್ರೀಯನ್ನು ೧೧೩
ಆ ಆಕೆಯು ಹುಡುಕುವಳು ಉಣ್ಣೆಯ ಕೈಗಳಿಂದ ಕೆಲಸ ಮಾಡುವಳು.
ವ್ಯಾಪಾರದ ಹಡಗುಗಳ ಹಾಗಿದ್ದು ದೂರದಿಂದ ತನ್ನ ಆಹಾರವನ್ನು ೧೧೪
ತರುವಳು, ಬೆಳಗಾಗುವದಕ್ಕಿಂತ ಮೊದಲೇ ಎದ್ದು ಮನೆಯವರಿಗೆ ಆಹಾರವನ್ನು ೧೧೫
ದಾಸಿಯರಿಗೆ ಕೆಲಸವನ್ನು (ನೇಮಿಸುತ್ತಾಳೆ) ಕೊಡುತ್ತಾಳೆ, ಹೊಲವ ೧೧೬
ನ್ನು ವಿಚಾರಿಸಿ ಕೊಂಡುಕೊಂಡು ತೋಟವನ್ನು ತನ್ನ ಫಲದಿಂದ ನೆಟ್ಟು, ಬಲ ೧೧೭
ದಿಂದ ಸೊಂಟವನ್ನು ಕಟ್ಟಿ ಭುಜಗಳಿಗೆ ಬಲವನ್ನು ಮಾಡಿಸಿ, ವ್ಯಾಪಾರ ೧೧೮
ಮಾರುವದು ಒಳ್ಳೇದೆಂದು ನೋಡಿ ರಾತ್ರಿಯಲ್ಲಿ ದೀಪ ಆರಿ ಹೋಗದೆ,
ತನ್ನ ಕೈಗಳನ್ನು ನೂಲಿಕ್ಕೆ ಹಾಕಿ, ಬೆರಳುಗಳು ಕದಿರನ್ನು ಹಿಡಿದು, ೧೧೯
ಬಡವನಿಗೆ ಕರಗಳನ್ನು ನೀಡಿ ದಿಕ್ಕಿಲ್ಲದವನಿಗೆ ಕೈಚಾಚುವಳು. ಹಿಮ ೧೨೦
ದ ದೆಸೆಯಿಂದ ಆಕೆಯು ಮನೆಯವರಿಗೋಸ್ಕರ ಹೆದರುವದಿಲ್ಲ ಮನೆಯವರೆಲ್ಲ ೧೨೧
ರಕ್ತವರ್ಣದ ಉಡುಪುಳ್ಳವರು. ಸ್ತ್ರೀಯು ಹೊದಿಕೆಗಳನ್ನು ಉಡುಪು ೧೨೨
ಗಳಾಗಿಯೂ ನಯವಾದ ಉಡುಪುಗಳನ್ನು ತನಗೆ ಉಂಟುಮಾಡಿ ಕೊಳ್ಳುವಳು. ಮನೆ ೧೨೩
ಬಾಗಿಲಲ್ಲಿ ಆಕೆಯ ಗಂಡನು ಕುಳಿತುಕೊಳ್ಳುವನು ದೇಶದ ಹಿರಿಯರ
ಸಂಗಡ ಮಾತಾಡುವವನಾಗಿ. ಉತ್ತಮ ವಸ್ತ್ರಗಳನ್ನು ಆಕೆಯು ಮಾಡಿ ೧೨೪
ಮಾರುವಳು ವ್ಯಾಪಾರಿಗೆ ನಡುಕಟ್ಟುಗಳನ್ನು ಕೊಡುತ್ತಾಳೆ. ಬಲ ೧೨೫
ಘನತೆಗಳೇ ಆಕೆಯ ಉಡುಪು ಮುಂದಿನ ದಿನವನ್ನು ಕುರಿತು

ಸಾಮತಿಗಳು ೨೧ ಸಂಧಿ.

೧೬. ಅಂತೆ ನಗುತ್ತಾಳೆ. ಬಾಧಕವಿಂದ ಬಾಯಿ ತೆರೆಯುತ್ತಾಳೆ ದಯೆಯಿಂದ ಮಾತ್
೧೭. ಪದೇಶವು ನಾಲಗೆಯ ಮೇಲೆ ಇದೆ. ಮನೆಯ ನಡತೆಗಳನ್ನು ಹೊಂದಿ-
೧೮. ನಾಡಿ ಮೃಗಗಳ ತನದ ಆಹಾರವನ್ನು ಉಂಗಳಿಸ್ಸು. ಮಕ್ಕಳು ಎದ್ದು
೧೯. ಅಂತೆಗೆ ಧನ್ಯವಾದ ಮಾಡುವರು, ಗಂಡನು ಸಹಿತಾ ಅಂತೆಯನ್ನ ಹೊಗ
೧೯. ಳುವದೇನಂದರೆ:- ಬಹಳ ತಂನಿತೆಯರು ಜ್ಞಾನಾತನ ತಾಳಿಸಿದಾಗ್ಯೂ ಅವ
೨೦. ರಂನೆಲ್ಲಾ ದಾಟಿ ದಿಸಿತ್ತು. ಶಾಲಿತೆಯು ಮೋಸವಾ ಸೌಂದರ್ಯವು ಮಾಯ
ವಾ ಆಗದೆ ಯೆ ಹೊಳೆವದನ್ನು ಬಹಯ ಪ್ಪುಡುವದ್ರೀ ಐಶ್ವರ್ಯ ಸುಶೀಮಾಶ್ರ
೨೧. ಪ್ಲಂತ ತ್ಸ್ರೈಗಳ ಫಲವಿಂದ ಅವಳಿಗೆ ತಾರಿತಿ, ಆತೆಂಯ ಕ್ರಿಯೆಗಳೇ ಅಂತೆ
ಯನ್ನು ಮನೆ ಬಾಗಲಲ್ಲಿ ಹೊಗಳುವದು!

ಸಭಾ ಪ್ರಸಂಗಿ

೧ ಸಂಧಿ

ಭೂಮಿಯಲ್ಲಿ ಸಕಲವೂ ಮಾಯಾ ಮಾತ್ರವಾಗಿರುವದರಿಂದ ಮನುಷ್ಯನಿಗೆ ಪುರುಷಾರ್ಥವೇನೆಂತ ಕೇಳುವನೆ (೩.) ನಿತ್ಯ ಪರಿವರ್ತನಾ ಪ್ರೇರಿತವಾಂತರೇಳಾ ಮನುಷ್ಯ ಜಾತಿಯಲ್ಲೂ ಪೂರ್ವದ ಕಾಲಕ್ಕೆಲ್ಲಾ (೧೧.) ಜ್ಞಾನೇಚ್ಛೆಯಿಂದಲೂ ಪ್ರಯಾಸ ಪಡಬೇಕಾಗುತ್ತದೆ (೨,೧೧.) ಪ್ರಪಂಚ ಭೋಗದ ಪೆಶೆಯಿಂದಿರುವ ಭಾಗ್ಯವು ~~ಭಾಗ್ಯವು~~ ಮರಣಾವಸ್ಥೆಯಲ್ಲಿ ಹೋಗುತ್ತಿರುವದರಿಂದ ಜ್ಞಾನಿಗೆ ಸಾಲದು (೨೦.) ಹೋಗಿರುವದರಿಂದ ಪ್ರಯತ್ನದಿಂದಲೂ ಭೋಗದಿಂದಲೂ ಅಲ್ಲ ದೇವರ ಕಟಾಕ್ಷದಿಂದಲೇ ಭಾಗ್ಯವು ಪ್ರಾಪ್ತಿಸುವದು.

ದಾವೀದನ ಮಗನೂ ಯೆರೂಸಲೇಮಿನ ರಾಜನೂ ಆದ ಸಭಾಪ್ರಸಂ .೧
ಗಿಯ ಮಾತುಗಳು.

ಮಾಯೆಗಳ ಮಾಯವೆಂತ ಸಭಾಪ್ರಸಂಗಿಯು ಹೇಳುತ್ತಾನೆ, ಮಾಯೆ .೨
ಗಳ ಮಾಯವು ಸಕಲವೂ ಮಾಯವೇ! ಸೂರ್ಯನ ಕೆಳಗೆ ಮನುಷ್ಯನು .೩
ಕಷ್ಟಪಡುವ ಸಕಲ ಕಷ್ಟದಿಂದಲೂ ಅವನಿಗೆ ಏನು ಲಾಭವು? ಭೂಮಿ .೪
ಯುಗ ಪರ್ಯಂತ ನಿಂತಿರಲು ತಲಾಂತರ ಹೋಗುತ್ತದೆ ತಲಾಂತರ ಬರುತ್ತದೆ.
ಆದಿತ್ಯನು ಉದಯಿಸುತ್ತಾನೆ ಆದಿತ್ಯನು ಅಸ್ತಮಿಸಿ ತಾನೆ ಸ್ಥಳ ಬಯಸುತ್ತಾ .೫
ಅಲ್ಲಿ ಉದಯಿಸುತ್ತಾನೆ. ತೆಂಕಲಾಗಿ ಹೋಗಿ ಬಡಗಲಾಗಿ ತಿರುಗಿ ಸುಳಿ ಸುಳಿ .೬
ಹೋಗುತ್ತಾ ಪ್ರಾಕಾರಗಳಲ್ಲಿ ಹಿಂತಿರುಗಿ ಬರುತ್ತದೆ. ಎಲ್ಲಾ ಹೊಳೆಗಳೂ ಸಮುದ್ರಕ್ಕೆ .೭
ಹರಿಯುತ್ತದೆ ಆದರೆ ಸಮುದ್ರ ಏನೂ ತುಂಬದು, ಹೊಳೆಗಳು ಹೋಗುವ

೮ ಸ್ಥಗಿತ್ತನೇ ಮನಸ್ಸು ತೀರಿ ಹೋಗುತ್ತವೆ. ಮನುಷ್ಯನು ಹೇಳುವುದಕ್ಕೆ ಸಾಧ್ಯವಾಗದಂತೆ
ಸಕಲ ಕಾರ್ಯಗಳೂ ಆಯಾಸ ಪಟ್ಟು ಹೋಗುತ್ತವೆ; ನೋಡುವದರಿಂದ ಕಣ್ಣಿಗೆ
೯ ತೃಪ್ತಿಯಿಲ್ಲ, ಕೇಳುವದರಿಂದ ಕಿವಿ ತುಂಬಲಿಕ್ಕಿಲ್ಲ. ಇದ್ದದ್ದೇ ಇರತಕ್ಕಂಥಾ
ದ್ದು ಮಾಡಿಯಾದದ್ದು ಮಾಡಲ್ಪಡುವಂಥಾದ್ದೇ; ಸೂರ್ಯನ ಕೆಳಗೆ ನೂತನವಾದದ್ದು
೧೦ ಒಂದೂ ಇಲ್ಲ. ಇಗೋ ಇದು ಹೊಸದೆಂದು ಹೇಳುವ ಒಂದು ಕಾರ್ಯವಿದ್ದ
ರೆ ನಮಗೆ ಮೊದಲು ಇರುವ ಯುಗಗಳ ವರೆಗೆ ಅದು ಪೂರ್ವದಲ್ಲೇ ಇತ್ತು.
೧೧ ಪೂರ್ವಿಕರ ನೆನಪು ಇಲ್ಲ, ಆಗಲಿಕ್ಕಿರುವವರಿಂದ ನವರಿಗೂ ಅನಂತರ ಆಗಲಿಕ್ಕಿ
ರುವವರ ಸಂಗಡ ನೆನಪು ಆಗಲಿಕ್ಕಿಲ್ಲ ಸಹ.
೧೨ ಪ್ರಸಂಗಿಯಾದ ನಾನು ಯೆರೂಸಲೇಮಿನಲ್ಲಿ ಇಸ್ರಾಯೇಲಿನ ಮೇಲೆ
೧೩ ಅರಸನಾಗಿದ್ದೆನು; ಬಾನದ ಕೆಳಗೆ ಮಾಡಿ ನಡೆಯುವಂಥಾದ್ದೆಲ್ಲಾ
ಜ್ಞಾನದಿಂದ ಹುಡುಕುವುದಕ್ಕೆ ಮನಸ್ಸು ಕೊಟ್ಟೆನು; ಆದರೆ
೧೪ ಅದು ದೇವರು ಮನುಷ್ಯ ಮಕ್ಕಳಿಗೆ ಕಷ್ಟಪಡಲಿಕ್ಕೆ ಕೊಟ್ಟ ಕೆಟ್ಟ ಕಷ್ಟ. ಸೂರ್ಯನ
ಕೆಳಗೆ ನಡೆಯುವ ಸಕಲ ಕ್ರಿಯೆಗಳನ್ನು ನಾನು ನೋಡಿದೆನು, ಇಗೋ, ಎಲ್ಲಾ ಮಾಯ
೧೫ ವ್ಯರ್ಥ, ಗಾಳಿಯನ್ನು ಹಿಡಿಯುವ ಆಶೆಯೂ ಆಗಿದೆ. ಡೊಂಕಾದದ್ದನ್ನು ನೆಟ್ಟಗೆ
೧೬ ಮಾಡಲಿಕ್ಕೆ ಕೂಡದು, ಕೊರತೆಯನ್ನು ಎಣಿಸಲಿಕ್ಕೆ ಕೂಡದು. ನನ್ನ ಹೃದಯದ
ಸಂಗಡ ನಾನು ಮಾತಾಡಿದ್ದೇನಂದರೆ: ನನಗಿಂತ ಮುಂದಾದ ಯೆರೂಸಲೇಮಿನಲ್ಲಿ
ಇದ್ದ ಎಲ್ಲರಿಗಿಂತ ನಾನು ಜ್ಞಾನವನ್ನು ಹೆಚ್ಚಿಸಿ ವೃದ್ಧಿಯಾದೆನು. ನನ್ನ ಹೃದ
೧೭ ಯವು ಜ್ಞಾನವನ್ನೂ ತಿಳುವಳಿಕೆಯನ್ನೂ ಹೆಚ್ಚು ಕಂಡಿತು; ಆದರೆ ಜ್ಞಾನವನ್ನೂ ಬುದ್ಧಿ
ಯನ್ನೂ ಹುಚ್ಚುತನ ಮೂರ್ಖತನವನ್ನೂ ತಿಳಿಯಲಿಕ್ಕೆ ಮನಸ್ಸು ಕೊಟ್ಟಾಗ ಇದೂ
ಸಹ ಗಾಳಿಯನ್ನು ಹಿಡಿಯುವ ಆಶೆಯೆಂದು ತಿಳಿದುಕೊಂಡೆನು. ಯಾಕಂದರೆ ಜ್ಞಾನವು ಹೆ
ಚ್ಚಾದರೆ ವ್ಯಸನವೂ ಹೆಚ್ಚು, ತಿಳುವಳಿಕೆ ಹೆಚ್ಚಿಸುವವನು ದುಃಖವನ್ನು ಹೆಚ್ಚಿಸು
ವನು.

೨ನೇ ಸಂಧಿ

ಅನಂತರ ನಾನು ಹೃದಯದಲ್ಲಿ ಹೇಳಿದ್ದು: ಆಗಲಿ, ನಾನು ಸಂತೋಷದಿಂದ ೧
ನಿನ್ನನ್ನು ಪರೀಕ್ಷಿಸುವೆನು, ಸುಖವನ್ನು ಅನುಭವಿಸು! ಆಗ ಅದು ಸಹಾ ವ್ಯರ್ಥ,
ಮಾಯೆ ಎಂತಾ ಆಯ್ತು. ನಾನು ನಗೆಗೆ ಹುಚ್ಚು ಎಂತಲೂ ಸಂತೋಷಕ್ಕೆ ಇದು — ೨
ಏನು ಮಾಡುವುದೆಂತಲೂ ಹೇಳಿದೆನು. ನಾನು ಹೃದಯದಲ್ಲಿ ೩
ಆಲೋಚಿಸಿದ್ದು: ಮನುಷ್ಯ ಪುತ್ರರು ಬಾಳುವ ದಿನಗಳ ಪರ್ಯಂತರ (ಭೂಲೋಕ)
ಬಾನದ ಕೆಳಗೆ ಯಾವದನ್ನು ಮಾಡಿದರೆ ಒಳ್ಳೇದೆಂತಾ ನಾನು ನೋಡುವವ
ರೆಗೆ ಬಂದು ಹೊಯ್ದ ನನ್ನ ಹೃದಯವು ಜ್ಞಾನದಿಂದ ಆಳ್ವಿ ಇರಲು, ಮಾಂಸ
ವನ್ನು (ದ್ರಾಕ್ಷಾರಸದಿಂದ ಉತ್ಸಾಹ ಪಡಿಸಿ ಗಾಢ್ಯತನವು) ಅಂಟಿ ಕೊಳ್ಳಲಿ?
ಕೆಲಸಗಳು ನಾನು ಮಹಾ (ಕೆಲಸಗಳನ್ನು ಮಾಡಿದೆ ನನಗೆ ಮನೆಗಳನ್ನು ಕಟ್ಟಿ ೪
ಸಿ ಉಪವನಗಳನ್ನು ನೆಟ್ಟೆನು, ತೋಟಗಳನ್ನು ಉದ್ಯಾನವನಗಳನ್ನು ಉಂಟು ೫
ಮಾಡಿ ಅದರಲ್ಲಿ ಎಲ್ಲಾ ಫಲ ವೃಕ್ಷಗಳನ್ನು ನೆಟ್ಟೆನು, ವೃಕ್ಷಗಳು ಬೆಳೆಯುವ ವ ೬
ನವನ್ನು ನೀರು ಹಾಯಿಸಲಿಕ್ಕೆ ಕೆರೆಗಳನ್ನು ಉಂಟು ಮಾಡಿದೆನು, ದಾಸಿ ದಾಸ ೭
ರನ್ನು ಸಂಪಾದಿಸಿಕೊಂಡು ನನಗೆ ಮನೆಯಲ್ಲಿ ಹುಟ್ಟಿದ (ಗುಲಾ
ಮರು) ಉಂಟಾಗಿ ನನಗೆ ಮುಂಚೆ ಯೆರೂಸಲೇಮಿನಲ್ಲಿ ಇರುವ
ಎಲ್ಲರಿಗಿಂತ ಅಧಿಕ ಕುರಿ ದನ ಸ್ವಾಸ್ತ್ಯ ಹೆಚ್ಚಾಗಿ; ನನಗೆ ಬೆಳ್ಳಿ ೮
ಬಂಗಾರಗಳು ಅರಸರುಗಳ ಸಂಸ್ಥಾನಗಳಿಗೂ ಇರುವ ಭಂಡಾರ
ಕೂಡಿಸಿಕೊಂಡು, ಹಾಡುಗಾರರನ್ನು ಹಾಡುಗಾರ್ತಿಯರನ್ನು ಮನುಷ್ಯ ಪುತ್ರ
(ರ) ಕೌತುಕವಾದ ರಮ್ಯರಮಣಿಯರನ್ನು ಹೊಂದಿದೆನು. ಹೀಗೆ ನಾ ೯
ನು ಮಹಾಂತನೂ, ನನಗೆ ಮುಂಚೆ ಯೆರೂಸಲೇಮಿನಲ್ಲಿರುವ ಎಲ್ಲಾ
ರದಿಗಿಂತ ಅತಿ ಮಹಾಂತನೂ ಆಗಿ ನನ್ನ ಜ್ಞಾನವು ನನಗೆ ಸ್ಥಿರ ನಿಂತಿತು.

೧೦. ಕಂಣುಗಳು ಬೇಡಿದ ಯಾವದನ್ನೂ ನಾನು ತಡೆಯಲಿಲ್ಲ ಹೃದಯಕ್ಕೆ ಯಾವ
ಸಂತೋಷವನ್ನೂ ನಿರಾಕರಿಸಿದ್ದೂ ಇಲ್ಲ ನನ್ನ ಎಲ್ಲಾ ಕಷ್ಟದಲ್ಲಿಯೂ ಹೃದ
ಯವು ಸಂತೋಷಪಡುತ್ತಾ ಇತ್ತು ಅದು ಸಹಾ. ನನ್ನ ಎಲ್ಲಾ ಕಷ್ಟದಲ್ಲಿ
೧೧. ಯೂ ನನ್ನ ಪಾಲಾಯಿತಷ್ಟೇ. ಮತ್ತೆ ನನ್ನ ಕೈಗಳು ಮಾಡಿದ ಎಲ್ಲಾ ಕೆ
ಲಸಗಳನ್ನೂ (ಅವುಗಳ) ತೀರಿಸುವುದಕ್ಕೆ ನಾನು ಕಷ್ಟಪಟ್ಟ ಕಷ್ಟವನ್ನೂ ನೋ
ಡಿದಾಗ ಇಗೋ ಎಲ್ಲವೂ ಮಾಯವೂ ಘಾಳಿಯ ಆಸಕ್ತಿಯೂ ಅಷ್ಟೇ
ಸೂರ್ಯನ ಕೆಳಗೆ ಲಾಭವೇನೂ ಇಲ್ಲ (ನೋಡಿ ಕಂಡೆನು)

೧೨. ಮತ್ತೆ ಜ್ಞಾನವನ್ನೂ ಮರುಳುತನ ಹೆಡ್ಡತನಗಳನ್ನೂ ಕಾಣಲಿಕ್ಕೆ
ತಿರುಗಿ (ವಿಚಾರಿಸಿದ್ದೆ = ನೋಡಿಸಿದ್ದೆ): ಪೂರ್ವದಲ್ಲಿ ಆಳಿದ ಅರಸನ ತರು
೧೩ ವಾಯ ಬರುವ ಮನುಷ್ಯನು ಎಷ್ಟು ಮಾತ್ರದವನು (ಆಗುವವನು)? ಮತ್ತೆ
ಕತ್ತಲೆಗಿಂತ ಬೆಳಕಿಗೆ ಆಧಿಕ್ಯ ಇರುವಂತೆ ಹೆಡ್ಡತನಕ್ಕಿಂತ ಜ್ಞಾನಕ್ಕೆ ಆ
೧೪. ಧಿಕ್ಯ ಉಂಟೆಂತಲೂ, ಜ್ಞಾನಿಯ ತಲೆಯಲ್ಲಿ ಕಂಣುಗಳು ಉಂಟು ಮೂಢನು
ಕತ್ತಲೆಯಲ್ಲೇ ನಡೆಯುತ್ತಾನೆ ಎಂತಲೂ ಕಂಡರೂ, ಅವರಿಗೆಲ್ಲವರಿಗೂ ಆಗುವ
೧೫. ಅದೃಷ್ಟ ಒಂದೇ ಎಂದು ನಾನು ತಿಳಿಕೊಂಡೆನು. ಹೃದಯದಲ್ಲಿ ಹೇಳಿದ್ದು:
ಮೂಢನ ಅದೃಷ್ಟದಂತೆ ನನಗೂ ಆಗುವದಲ್ಲ ಮತ್ತು ನಾನು ಅಂದು ಜ್ಞಾ
೧೬. ನವು ಹೆಚ್ಚಾದವನಾದೆನು ಯಾಕೆ? ಎಂತ ಹೇಳಿ(ದೆನು) ಇದು ಸಹಾ ಮಾಯವೇ;
ಬರುವದಿವಸಗಳಲ್ಲಿ ಇವರೆಲ್ಲವರು ಪೂರ್ವದಲ್ಲೇ ಮರೆತು ಹೋದದರಿಂದ ಮೂ
ಢನಿಗೆ ಸರಿಯಾಗಿ ಜ್ಞಾನಿಗೆ ಸಹಾ ಎಂದೆಂದಿಗೂ ಇರುವ ನೆನಪು ಇಲ್ಲವಲ್ಲ,
ಜ್ಞಾನಿಯಾಗ ಆ ಮೂಢನಂತೆ ಸಾಯುವದು ಹ್ಯಾಗೆ! ಎಂತ ಹೃದಯದಲ್ಲಿ ನು
೧೭. ಡಿದೆನು. ಸೂರ್ಯನ ಕೆಳಗೆ ಮಾಡುವ ಕ್ರಿಯೆ ಎಲ್ಲಾ ಮಾಯವೂ ಘಾಳಿಯ

ಆಪೇಕ್ಷೆಯೂ ಆಗಿರುವದರಿಂದ ಕೆಟ್ಟದ್ದಾಗಿ ತೋರಿದ್ದರಿಂದ ಜೀವವನ್ನು ನಾನು
ಹಗೆ ಮಾಡಿದೆನು; ನನ್ನ ತರುವಾಯ ಇರುವ ಮನುಷ್ಯನಿಗೆ ಬಿಟ್ಟು ಕೊಡಬೇ ೧೮
ಕಾದ್ದರಿಂದ ನಾನು ಸೂರ್ಯನ ಕೆಳಗೆ ಕಷ್ಟ ಪಟ್ಟುಳ್ಳ ಕಷ್ಟವನ್ನು ಹಗೆ ಮಾ
ಡಿದೆನು; ಆತನು ಜ್ಞಾನಿಯೋ ಹೆಡ್ಡನೋ ಏನಾಗುವನೆಂದು ಯಾರು ಬಲ್ಲ ನಾನು ೧೯
ಸೂರ್ಯನ ಕೆಳಗೆ ಕಷ್ಟ ಪಟ್ಟು ಜ್ಞಾನ ತೋರಿಸಿದ ನನ್ನ ಎಲ್ಲಾ ಪ್ರಯತ್ನದಲ್ಲಿ
ಯೂ ಅಧಿಕಾರ ನಡಿಸುವನು! ಇದು ಸಹ ವ್ಯರ್ಥವೇ.

ಆಗ ನಾನು ತಿರುಗಿ ಸೂರ್ಯನ ಕೆಳಗೆ ~~ಕ~~ ನಾನು ಕಷ್ಟ ಪಟ್ಟ ಎಲ್ಲಾ ಪ್ರಯ ೨೦
ತ್ನದಲ್ಲಿಯೂ ನನ್ನ ಹೃದಯವನ್ನು ನಿರಾಶೆ ಪಡಿಸ ತೊಡಗಿದೆನು. ಯಾಕಂದರೆ ಒಬ್ಬ ೨೧
ನು ಜ್ಞಾನದಲ್ಲಿಯೂ ತಿಳುವಳಿಕೆಯಲ್ಲಿಯೂ ಜಾಣತನದಲ್ಲಿಯೂ ಕಷ್ಟಪಟ್ಟರೂ ಅದ
ನ್ನು ಕಷ್ಟಪಡದ ಮನುಷ್ಯನಿಗೆ ಅವನ ಪಾಲಾಗಿ ಬಿಟ್ಟು ಕೊಡಬೇಕಲ್ಲಾ; ಅದು ಸಹ ವ್ಯ
ರ್ಥವೂ ದೊಡ್ಡ ಕೇಡೂ ಅಷ್ಟೆ. ಯಾಕಂದರೆ: ಸೂರ್ಯನ ಕೆಳಗೆ ಮನುಷ್ಯನು ಕಷ್ಟಪ ೨೨
ಡುವ ಸಕಲ ಪ್ರಯತ್ನದಲ್ಲಿಯೂ ಹೃದಯಾಸಕ್ತಿಯಲ್ಲಿಯೂ ಅವನಿಗೆ ಏನದೆ?
ಅವನ ದಿನಗಳು ಎಲ್ಲಾ ದುಃಖಗಳೂ ಆತನ ಪ್ರಯಾಸ ವ್ಯಸನವೂ ಆಗಿ ೨೩
ದೆಯಲ್ಲಾ! ರಾತ್ರಿಯಲ್ಲಿಯೂ ಆತನ ಹೃದಯವು ಮಲಗುವದಿಲ್ಲವಂತೆ, ಅ
ದು ಸಹ ವ್ಯರ್ಥವೇ.

ತಿನ್ನುತ್ತಾ ಕುಡಿಯುತ್ತಾ ತನ್ನ ಕಷ್ಟದಲ್ಲಿ ಪ್ರಾಣಿಯನ್ನು ಮೇಲು ಅನುಭವಿಸ ೨೪
ಮಾಡುವದಲ್ಲದೆ ಮನುಷ್ಯರಲ್ಲಿ ಒಳ್ಳೇದಿಲ್ಲ, ಅದು ಸಹ ದೇವರ ಕೈಯಿಂದಲೇ
ಎಂದು ನಾನು ಕಂಡೆನು; ಆತನಿಂದಲ್ಲದೆ ಯಾವಾತನು ತಿನ್ನುವನು, ಯಾರು ೨೫
ಅನುಭವಿಸುವನು? ಯಾಕಂದರೆ ಆತನು ತನ್ನ ದೃಷ್ಟಿಗೆ ಒಳ್ಳೆಯವನಾಗಿ ೨೬
ತೋರುವ ಮನುಷ್ಯನಿಗೆ ಜ್ಞಾನವೂ ಅರಿವೂ ಸಂತೋಷವೂ ಕೊಡುತ್ತಾನೆ. ಆದ

[illegible]

೩ನೇ ಸಂಧಿ.

(– ೫, ೧೮.)

[illegible] (೧) [illegible] (೧೭) [illegible] (೪, ೧.) [illegible] (೪) [illegible] (೭) [illegible] (೧೩) [illegible] (೧೭) [illegible] (೫, ೭) [illegible] (೧೭) [illegible]

೧ [illegible]
೨ [illegible]
೩ [illegible]
೪ [illegible]
೫ [illegible]
೬ [illegible]
೭ [illegible]
೮ [illegible]

ಷಿಸಲಿಕ್ಕೆ ಕಾಲ, ಯುದ್ಧಕಾಲವೂ ಸಮಾಧಾನಕಾಲವೂ (ಉಂಟು.)
(ಹೀಗೆಲ್ಲಾ) ಕೆಲಸ ಮಾಡುವವನು ಕಷ್ಟಪಡುವದರಿಂದ ಲಾಭವೇನು? ೯
ದೇವರು ಮನುಷ್ಯಪುತ್ರರಿಗೆ ಕಷ್ಟಪಡತಕ್ಕೆ ಕೊಟ್ಟ ಕಷ್ಟವನ್ನು (೧, ೧೩) ನಾನು ನೋ- ೧೦
ಡಿದೆನು: ಆತನು ಸಕಲವೂ ಕಾಲದಲ್ಲಿ ಸುಂದರವಾಗುವಂತೆ ಮಾಡಿ ಅವರ ೧೧
ಹೃದಯದಲ್ಲಿ ನಿತ್ಯತ್ವವನ್ನು ಇಟ್ಟಿದ್ದಾನೆ, ದೇವರು ಮಾಡುವ ಕ್ರಿಯೆಯನ್ನು ಮಾ-
ತ್ರ ಮನುಷ್ಯನು ಆದಿಯಿಂದ ಅಂತ್ಯದವರೆಗೆ ಗ್ರಹಿಸುವದಿಲ್ಲವಲ್ಲ! (ಊದ್ಧ ೧೨
ರಿಂದ) ಜೀವಕಾಲದಲ್ಲಿ ಸಂತೋಷಪಡುತ್ತಾ ಮೇಲು ಮಾಡುವದರ ಹೊರತು ಅವರಿ-
ಗೆ ಬೇರೆ ಏನೂ ಇಲ್ಲವೆಂದೂ, ಯಾವ ಮನುಷ್ಯನಾದರೂ ತಿಂದು ಕುಡಿದು ೧೩
ತನ್ನ ಸಕಲ ಕಷ್ಟದಲ್ಲಿಯೂ ಮೇಲು ಅನುಭವಿಸಿದರೆ ಅದು ದೇವರ ವರವೆಂ-
ದೂ ನಾನು ತಿಳಿದೆನು. ದೇವರು ಮಾಡುವದೆಲ್ಲಾ ನಿತ್ಯವಾದದ್ದು ಅದರಲ್ಲಿ ೧೪
ಕೂಡಿಸಲಿಕ್ಕೆ ಕಡಿಮೆ ಮಾಡಲಿಕ್ಕೆ ಏನೂ ಇಲ್ಲವೆಂದೂ (ಜನರು) ಅವನ ಮುಂದೆ
ಭಯಪಡಲಿಕ್ಕೆ ಅವನು ಮಾಡಿದನೆಂದು ಅರಿತೆನು. ಆದದ್ದು ಮೊದಲಿದ್ದೇ, ಆಗ- ೧೫
ಲಿಕ್ಕಿರುವಂಥದ್ದೂ ಮೊದಲಿದ್ದಿತು, ಆಗಿ ಹೋದದ್ದನ್ನು ದೇವರು ಮತ್ತೂ ಹುಡು-
ಕುತ್ತಾನೆ. N.L. ಇದಲ್ಲದೆ ನಾನು ಸೂರ್ಯನ ಕೆಳಗೆ ಕಂಡದ್ದು ದಂಡನ್ಯಾಯ (in Mal. ೧೬
ನ್ಯಾಯವಿಸ್ತಾರ) ನಡೆಯುವ ಜಾಗದಲ್ಲಿ ದುಷ್ಟತ್ವವೂ ನೀತಿಯ ಸ್ಥಳದಲ್ಲಿ ದುಷ್ಟತ್ವ-
ವೂ ಉಂಟು! ಹೀಗೆ ಎಲ್ಲಾ ಕರ್ಮಕ್ಕೂ ಕಾಲವೂ ಎಲ್ಲಾ ಕೆಲಸಕ್ಕೂ ಅಲ್ಲಿ ಕಾಲವಿರು- ೧೭
ವದರಿಂದ ದೇವರು ನೀತಿವಂತನನ್ನೂ ದುಷ್ಟನನ್ನೂ ನ್ಯಾಯವಿಧಿಸುವನು ಎಂ-
ದು ನಾನು ಹೃದಯದಲ್ಲಿ ಹೇಳಿದೆನು. ಇದು ಮನುಷ್ಯಪುತ್ರರ ನಿಮಿತ್ತವೇ, ದೇವ- ೧೮
ರು ಅವರನ್ನು ಶೋಧಿಸಿ ಅವರು ತಮ್ಮನ್ನು ಮೃಗಗಳಾಗಿರುವಂತೆ ಕಂಡುಕೊಳ್ಳಲಿ-
ಕ್ಕೆ ಆಗಿಯೇ ಅಂತ ನಾನು ಹೃದಯದಲ್ಲಿ ಹೇಳಿದೆನು. ಮನುಷ್ಯಪುತ್ರರ ಅ- ೧೯
ದೃಷ್ಟವೂ ಮೃಗದ ಅದೃಷ್ಟವೂ, ಎರಡಕ್ಕೂ ಅದೃಷ್ಟ ಒಂದೇ; ಅವನು ಸಾಯುವಂತೆ
ಇದು ಸಹ ಸಾಯುತ್ತದೆ, ಎಲ್ಲಕ್ಕೂ ಒಂದು ಉಸಿರು (ಉಂಟು.) ಸಕಲ-
ವೂ ಮಾಯವಾಗಿರುವದರಿಂದ ಮನುಷ್ಯನಿಗೆ ಮೃಗಕ್ಕಿಂತ ವಿಶೇಷತೆ ಇಲ್ಲ. ಯೆ ೨೦

೩ನೇ ಸಂಧಿ.

ಲ್ಲಾ ಒಂದು ಸ್ಥಳಕ್ಕೆ ಹೋಗುತ್ತದೆ, ಎಲ್ಲಾ ಧೂಳಿಯಿಂದ (in Mal ಮಣ್ಣಿಯಿಂದ)
೨೧ ಉಂಟಾಗಿ ಧೂಳಿಗೆ ತಿರಿಗಿ ಹೋಗುತ್ತದೆ. ಮನುಷ್ಯ ಮಕ್ಕಳ ಆತ್ಮವು ಮೇಲಕ್ಕೆ ಏರುವದಾಗಲಿ, ಮೃಗದ ಆತ್ಮವು ಕೆಳಗೆ ಭೂಮಿಗೆ ಇಳಿಯುವದಾಗಲಿ (ಎರಡೂ)
೨೨ ಯಾರು ಬಲ್ಲ? ಆದ್ದರಿಂದ ಮನುಷ್ಯನು ಸ್ವಂತ (ಕ್ರಿ)ಯೆಗಳಲ್ಲಿ ಸಂತೋಷಿಸುವದೆಂಬದಲ್ಲದೆ ಒಳ್ಳೇದು ಯಾವದೂ ಇಲ್ಲ, ಇದೇ ಅವನ ಪಾಲು ಎಂದು ನಾನು ಕಂಡೆನು, ಅವನ ತರುವಾಯ ಉಂಟಾಗಲಿಕ್ಕಿರುವದು ಏನೆಂದು ನೋಡಲಿಕ್ಕೆ ಅವನನ್ನು ಯಾರು ತರಿಸುವನು

೪ನೇ ಸಂಧಿ

೧ ನಾನು ತಿರುಗಿ ಸೂರ್ಯನ ಕೆಳಗೆ ನಡೆಯುವ ಎಲ್ಲಾ ಪೀಡೆಗಳನ್ನು ಕಂಡೆನು, ಆಗೋ, ಪೀಡಿತರ ಕಣ್ಣೀರು, ಅವರಿಗೆ ಆದರಿಕನೂ (in Mal ಆಶ್ವಾಸ(ಪ್ರದನ್)) ಇಲ್ಲ ಸಹ, ಪೀಡಿಸುವವರ ಕೈಯಲ್ಲಿ (ಶ)ಕ್ತಿಯಿರುತ್ತದೆ, ಆದರಿಸುವವನು
೨ ಅವರಿಗೆ ಇಲ್ಲ. ಹೀಗೆ ಈವರೆಗೆ ಜೀವದಿಂದಿರುವ ಜೀವಿಗಳಿಗಿಂತ ಪೂರ್ವದಲ್ಲಿ ಸ
೩ ತ್ತವರನ್ನು ನಾನು ಕೊಂಡಾಡಿದೆನು. ಆದರೆ ಇವರಿಬ್ಬರಿಗಿಂತ ಒಳ್ಳೇದು ಸೂರ್ಯನ ಕೆಳಗೆ ನಡೆಯುವ ಕೆಟ್ಟ ಕೆಲಸವನ್ನು ಕಾಣದೆ ಈವರೆಗೂ ಉಂಟಾಗದವನೇ!
೪ ಎಲ್ಲಾ ಕಷ್ಟವನ್ನೂ ಕೆಲಸದಲ್ಲಿರುವ ಜಾಣತನವನ್ನೂ (in Mal ಪಾಟವ) ನಾನು ಕಂಡೆನು: ಫಲಾನಿಯವನು ಸಾಹಸ್ಯವನ್ನು ಗೆಲ್ಲಲಿಕ್ಕೆ ಪ್ರಯತ್ನಪಡಿಯುವದು ಎಂಬದೇ, ಅದು ಸಹ ಮಾಯೆಯೂ ಪ್ರಾಣದ ಆಯಾಸವೂ
೫ ಅಷ್ಟೇ. ಮೂಢನು ಕೈಗಳನ್ನು ಕಟ್ಟಿಕೊಂಡು ತನ್ನ ಮಾಂಸವನ್ನು ತಿನ್ನುತ್ತಾನೆ (ಆ
೬ ದರೆ), ಎರಡು ಕೈಯಲ್ಲಿಯೂ ಕಷ್ಟವೂ ಪ್ರಾಣದ ಆಯಾಸವೂ ತುಂಬವದಕ್ಕಿಂತ ಒಂದು ಸೆರೆ ವಿಶ್ರಾಂತಿ ಒಳ್ಳೇದಲ್ಲವೋ.
೭ ನಾನು ತಿರುಗಿ ಸೂರ್ಯನ ಕೆಳಗೆ ಬಂದ ಮಾಯೆಯ ಕಂಡದ್ದು: ಒಬ್ಬನು ಇದ್ದಾನೆ ಎರಡನೆಯವನು ಇಲ್ಲ, ಮಗನೂ ಸಹೋದರನೂ ಅವನಿಗೆ ಇಲ್ಲ ಆದರೆ ಅವನ ಎಲ್ಲಾ ಕಷ್ಟಕ್ಕೆ ಅವಸಾನವಿಲ್ಲ, ಕಣ್ಣಿಗೆ ಸಂಪತ್ತಿನಿಂದ ತೃಪ್ತಿಯೂ ಇಲ್ಲ.

ಮತ್ತು ಯಾರಿಗಾಗಿ ನಾನು ಕಷ್ಟಪಟ್ಟು/ದೇಹಕ್ಕೆ ಮೇಲನ್ನು ಕಮ್ಮಿಮಾಡಿಕೊಳ್ಳುವದು? ಎಂಬುದು ೮
ಸಹಾ ಮಾಯವಾಗದು ಕಷ್ಟವೂ ಅಷ್ಟೆ. ಒಬ್ಬನಿಗಿಂತ ಇಬ್ಬರು ಲೇಸು. ಅವರ ಕಷ್ಟದ ೯
ಲ್ಲಿ ಒಳ್ಳೇ ಕೂಲಿ ಸಿಕ್ಕುತ್ತದಲ್ಲ! ಯಾಕಂದರೆ, ಅವರು ಬಿದ್ದರೂ ಒಬ್ಬನು ಗೆಳೆಯನ ೧೦
ನ್ನು ಎಬ್ಬಿಸುವನು. ಬಿದ್ದರೆ ಎಬ್ಬಿಸತಕ್ಕ ಎರಡನೆಯವನು ಇಲ್ಲದಿದ್ದರೆ ಏಕ
ನಿಗೆ ಅಯ್ಯೋ! ಮತ್ತೆ ಇಬ್ಬರು ಮಲಗಿದರೆ ಅವರಿಗೆ ಬಿಸಿಯುಂಟು ಒಬ್ಬ ೧೧
ನಿಗಾದರೆ ಹ್ಯಾಗೆ ಬಿಸಿಯಾಗುವದು? ಒಬ್ಬನಿಂದ ಸೋಲುಕೊಂಡರೆ ಇಬ್ಬರು ಎ ೧೨
ದುರುನಿಲ್ಲುವರು ಮುಪ್ಪುರಿನೂಲು ಬೇಗ ಹರಿದು ಹೋಗಲಿಕ್ಕಿಲ್ಲ.

ಇನ್ನು ಬುದ್ಧಿಯನ್ನು ಹಸನು ಮಾಡಲಿಕ್ಕೆ ಸಮ್ಮತಿಸದಷ್ಟು ಮೂಢ ೧೩
ನಾದ ಬೆಳ್ಳರ ಅರಸನಿಗಿಂತ ದರಿದ್ರನಾದವನೂ ಜ್ಞಾನಿಯೂ ಆದ ಬಾಲನೂ ವಾಸಿ.
ಅವನ ರಾಜ್ಯದಲ್ಲಿ ಇವನು ಬಡವನಾಗಿ ಹುಟ್ಟಿದರೂ ಬಂಧಿಖಾನೆಯಿಂದ ಆ ೧೪
ಳಲಿಕ್ಕೆ ಹೊರಡುತ್ತಾನಲ್ಲ. ಮತ್ತೆ ಸೂರ್ಯನ ಕೆಳಗೆ ನಡೆಯುವ ಜೀವಿಗಳೆಲ್ಲಾ ೧೫
ಅವನ ಸ್ಥಾನದಲ್ಲಿ ನಿಲ್ಲತಕ್ಕಿರುವ ಆ ಎರಡನೆಯವನಾದ ಬಾಲನ ಸಂಗ
ಡ ಇರುವದನ್ನು ನಾನು ಕಂಡೆನು; ಅವರ ಮುಂದೆ ನಿಲ್ಲುವ/ನನ್ನು ಸಮಸ್ತ ೧೬
ಎಲ್ಲಾ ಜನಕ್ಕೂ ಬಂದು ಅಂತ್ಯವಿಲ್ಲ; ಆದರೆ ಮುಂದಿನವರು ಅವನಲ್ಲಿ ಸಂ
ತೋಷಪಡತಕ್ಕದ್ದಿಲ್ಲವಲ್ಲ. ನಿಶ್ಚಯ ಇದು ಸಹಾ ಮಾಯವೂ ಪ್ರಾಣಯಾ
ತನೆಯೂ ಅಷ್ಟೆ.

೫ನೆ ಸಂಧಿ.

ನೀನು ದೇವಾಲಯಕ್ಕೆ ಹೋಗುವಾಗ ಕಾಲನ್ನು ಕಾದುಕೋ! ಮೂಢರು ಬಲಿ ೪,೧೭
ಕೊಡುವದಕ್ಕಿಂತ ಕೇಳಲಿಕ್ಕೆ ಸಮೀಪಿಸುವದೇ ಒಳ್ಳೇದು; ಅವರು ದುಷ್ಟತ್ವ
ಮಾಡಲಿಕ್ಕೆ ತಿಳಿಯದ ಕಾರಣದಿಂದಲ್ಲವೋ. ಬಾಯಿಂದ ತ್ವರೆಪಡಬೇಡ. ದೇವರ ೫,೧

ಸಂನಿಧಿಯಲ್ಲಿ ಏನಾದರೂ ಹೇಳಲಿಕ್ಕೆ ನಿನ್ನ ಹೃದಯವು ಅವಸರ
೨. ಪಡಬಾರದು, ಯಾಕಂದರೆ ದೇವರು ಸ್ವರ್ಗದಲ್ಲಿ ನೀನು ಭೂಮಿಯಲ್ಲಿ
ಆದ್ದರಿಂದ ನಿನ್ನ ಮಾತುಗಳು ಕಮ್ಮಿಯಾಗಲಿ! ಕಷ್ಟವು ಹೆಚ್ಚುವದರಿಂದ
ಸ್ವಪ್ನವೂ ಮಾತುಗಳು ಹೆಚ್ಚುವದರಿಂದ ಮೂಢ ಜಲ್ಪನವೂ ಹುಟ್ಟುತ್ತದಲ್ಲಾ.
೩. ನೀನು ದೇವರಿಗೆ ಹರಕೆ ಹೇಳಿಕೊಂಡರೆ ಅದನ್ನು ಸಲ್ಲಿಸಲಿಕ್ಕೆ ತಡಮಾ
ಡಬೇಡ, ಮೂಢರಲ್ಲಿ ಸಂತೋಷವಿಲ್ಲವಂತೆ, ಹರಕೆ ಹೇಳಿಕೊಂಡದ್ದನ್ನು ಸಲ್ಲಿಸು!
ನೀನು ಸಲ್ಲಿಸದೆ ಹರಕೆ ಹೇಳಿಕೊಳ್ಳುವದಕ್ಕಿಂತ ಹೇಳಿಕೊಳ್ಳದಿರುವದು ಒಳ್ಳೇದು.
೪. ನಿನ್ನ ಬಾಯಿ ನಿನ್ನ ಮಾಂಸವನ್ನು ಪಾಪ ಮಾಡಿಸುವ ಹಾಗೆ ಮಾಡಬಾರದು. ಇದು (ತಿಳಿ
ಯದೆ ಬಂದ) ತಪ್ಪು ಎಂತ ದೂತನನ್ನು (ಮಲಾ ೨,೭) ನೋಡಿ ಹೇಳಲೂ ಬಾರದು!
೫. ನಿನ್ನ ಶಬ್ದದಲ್ಲಿ ದೇವರು ಕೋಪಿಸಲು ನಿನ್ನ ಕೈಗಳ ಕ್ರಿಯೆಯನ್ನು ನಾಶನ ಮಾ
೬. ಡಲು ಬೇಕು ಎಂತಲಾ? ಸ್ವಪ್ನಗಳು ಹೆಚ್ಚುವದರಲ್ಲಿಯೂ ಮಾತುಗಳು ಅಧಿಕವಾ
ಗುವದರಲ್ಲಿಯೂ ಮಾಯೆಗಳು ಹೆಚ್ಚಾಗುವವು ಸತ್ಯ, ಆದರೆ ನೀನು ದೇವರಿಗೆ
ಭಯಪಟ್ಟಿರು.
೭. ದೇಶದಲ್ಲಿ ದರಿದ್ರನನ್ನು ಪೀಡಿಸುವದೂ ನೀತಿನ್ಯಾಯಗಳನ್ನು ಅಪಹರಿ
ಸುವದೂ ಕಂಡರೆ ಆ ಕೆಲಸದಲ್ಲಿ ಆಶ್ಚರ್ಯಪಡ (In Mal. ಸ್ತಂಭಿಸ) ಬಾರದು!
ಉನ್ನತನ ಮೇಲೆ ಉನ್ನತನು ಕಾಯುವದೂ ಇವರ ಮೇಲೆ ಅತ್ಯುನ್ನತರೂ
೮. ಇದ್ದಾರಲ್ಲಾ. ದೇಶಕ್ಕೆ ಎಲ್ಲಾ ಬಗೆಯಿಂದಲೂ ಆದಾಯವಾಗಿರುವಂಥಾದ್ದು ಕೃಷಿ, ನೆಲವ್ಯ
೯. ವಸಾಯ ಮಾಡಲ್ಪಟ್ಟಿರುವ ಬಯಲು ಅರಸನು. ಹಣವನ್ನು ಪ್ರೀತಿಸುವವನಿಗೆ ಹ
ಣದಿಂದ ತೃಪ್ತಿ ಬರಲಿಕ್ಕಿಲ್ಲ. ಐಶ್ವರ್ಯವನ್ನು ಪ್ರೀತಿಸುವವನಿಗೆ ಆದಾಯವು
೧೦. ಇಲ್ಲ. ಇದು ಸಹಾ ಮಾಯವೇ. ವಸ್ತು ಹೆಚ್ಚುವಷ್ಟು ಅದನ್ನು ಉಣ್ಣುವವರು

ಹೊಟ್ಟೆಯನು ಹೊತ್ತು ಬಡೆಯರಿಗೆ ಕಂಗಾಲಾಗಿ ದೃಷ್ಟಿಯಲ್ಲದೆ ಏನು ಗತಿ ಎಷ್ಟು
ಮಾತ್ರದ್ದು? ಹುಟ್ಟುವಾಗ ಹೊಟ್ಟೆ ಎಂದರೂ ಬರೆಯುವವನ ನಿಷ್ಠೆ ಠೀಕೆ, ಧನ ೧೧
ವಂಶದ ಕೃಪೆಯು ಅವನನ್ನು ನಿದ್ರೆ ಮಾಡಗೊಡದು.

ನಾರಾಯಣನ ಕೈಗೆ ನಾನು ನೋಡಿದ ಬಂದು ಕೊಟ್ಟದ್ದು ಯಾರನಂದರೆ: ಬಡೆಯ ೧೨
ನಕ್ಕೆಡಿಗಾಗಿ ಕಾಪಾಡಿರುವ ಸಂಪತ್ತು; ಕೆಡು ಕಷ್ಟದಿಂದ ಆ ಸಂಪತ್ತು ಕೆಟ್ಟು ಹೋದರೂ ೧೩
ಮಗನನ್ನು ಹುಟ್ಟಿಸಿದರೂ ಅವನ ಕೈಯಲ್ಲಿ ಯೇನೂ ಇಲ್ಲದಿರದಿಷ್ಟು ನಾನು. ತಾಯಿಯ ೧೪
ಗರ್ಭದಿಂದ ಹೊರಟ ಹಾಗೆ (ಯೋಬ ೧, ೨೧) ಅವನು ಬಂದ ಹಾಗೆಯೇ ನಗ್ನನಾಗಿ ತಿರಿ
ಗಿ ಹೋಗುವನು, ಅವನ ಕಷ್ಟದಿಂದ ಕೈಯಲ್ಲಿ ತೆಗೆಂಡು ಹೋಗತಕ್ಕದ್ದು ಇರುವದು ಒಂ
ದೂ ಇಲ್ಲದಿಷ್ಟು ಇಲ್ಲ: ಇದು ಸಹಾ ಕೆಟ್ಟ ಕೇಡು: ಬಂದ ಕ್ರಮದಲ್ಲಿ ಹಾಗೆ ಆತನು ೧೫
ಹೋಗುತ್ತಾನೆ. ಮತ್ತೆ ಗಾಳಿಗೆ ಕಷ್ಟಪಟ್ಟದ್ದರಿಂದ ಲಾಭವೇನು ಅವನಿಗೆ ಯೆಷ್ಟು ಮಾತ್ರ
ದ್ದು? ತನ್ನ ಬಾಳುವ ದಿನವೆಲ್ಲಾ ಆತನು ಕತ್ತಲೆಯಲ್ಲಿ ಉಣ್ಣುತ್ತಾನೆ, ~~[illegible]~~ ಅತ್ಯಂತ ೧೬
N.L
ವ್ಯಸನವೂ ವ್ಯಾಧಿಯೂ ಕೋಪವೂ ಸಹಾ. ನಾನು ಒಳ್ಳೇದೆಂತಲೂ ಉಚಿತವೆಂತಲೂ ೧೭
ಕಂಡದ್ದು ಇದೇ: ಆತನು ಸೂರ್ಯನ ಕೆಳಗೆ ಕಷ್ಟಪಡುವ ಯೆಲ್ಲಾ ಕಷ್ಟದಲ್ಲಿಯೂ
ದೇವರು ಕೊಟ್ಟ ಬಾಳುವ ದಿವಸದ ಪರಿಯಂತ ತಿನ್ನುತ್ತಾ ಕುಡಿಯುತ್ತಾ ಮೇಲನ್ನು
ಅನುಭವಿಸಲಿ, ಇದೇ ಆತನ ಪಾಲು. ಮತ್ತೆ ಯಾವ ಮನುಷ್ಯನಿಗೆ ದೇವರು ಸಂಪತ್ತನ್ನೂ ೧೮
ನಿಕ್ಷೇಪಗಳನ್ನೂ ಅದರಿಂದ ತಿನ್ನುವಿಷ್ಟು ತನ್ನ ಪಾಲನ್ನು ಹೊಂದುವಿಷ್ಟು ಕಷ್ಟದಲ್ಲಿ ಸಂತೋ
ಷಪಡುವಿಷ್ಟು ಅಧಿಕಾರ ಕೊಟ್ಟರೆ ಅದು ಸಹಾ ದೇವರ ವರವೇ. ಹೃದಯ ಸಂತೋ ೧೯
ಷವನ್ನು ದೇವರು ಉತ್ತರ ಕೊಡುವದರಿಂದ ತನ್ನ ಬಾಳುವ ದಿನಗಳನ್ನು ಆತನು ಹೆ
ಚ್ಚು ಜ್ಞಾಪಕ ಮಾಡತಕ್ಕದ್ದಿಲ್ಲ;

೨

೬ನೇ ಸಂಧಿ.

(—೮, ೧೫.)

ದೇವರು ಅನುಭವಿಸ ಮಾಡುವವರ ಹೊರತು ಐಶ್ವರ್ಯದಿಂದ ಫಲವಿಲ್ಲದ್ದರಿಂದ (೭) ಜ್ಞಾನಿಯು ದೇವವಿಧಿಯಲ್ಲಿ ವಿಧೇಯನಾಗಿ ಅಲ್ಪಸಂತುಷ್ಟತೆಯನ್ನು ಹೊಂದಿ (೭,೧) ಮೂಢನ ಆಟವನ್ನು ಬಿಟ್ಟು (೮) ದೇವರು ಬರಮಾಡುವದನ್ನು ಕಾಯ್ದು (೧೪) ಸಾಧಾರಣ ಪಾಪತ್ವವನ್ನು ತಿಳಿದು ಮಧ್ಯಮ ಗುಣದಲ್ಲಿಯೂ ಸಂತೋಷಿಸುವನು (೭,೨) ಇಂಥ ದುರ್ಲಭವಾದ ಜ್ಞಾನವನ್ನು ಹುಡುಕಿದರೆ (ಸ್ತ್ರೀ)ಗಳಿಂದ ಕಾಪಾಡಿ (೮,೧) ಅಂತ್ಯ ವಿಸ್ತಾರವನ್ನು ಎದುರು ನೋಡುತ್ತಾ ನಿಷ್ಕಂಟಕರ ಸಂಗದ ಮತ್ಸರ ಮಾಡದೆ (೧೦) ದುಷ್ಟರಲ್ಲಿ ಅನ್ಯಾಯ ಕಾಣದೆ (೧೫) ಅತಿಚಿಂತೆಯನ್ನು ಬಿಟ್ಟು ಸುಖಪಡತಕ್ಕದ್ದು.

೧. ಸೂರ್ಯನ ಕೆಳಗೆ ನಾನು ಕಂಡ ಒಂದು ಕೇಡು ಉಂಟು, ಅದು ಮನುಷ್ಯರ ಮೇಲೆ ಭಾ
೨ ರವಾಗಿರುತ್ತದೆ: ದೇವರು ಒಬ್ಬನಿಗೆ ಸಂಪತ್ತು ನಿಕ್ಷೇಪಗಳು ಘನವನ್ನು ಕೊಟ್ಟು, ಆ
ಶಿಸುವದು ಯಾವದೂ ಅವನಿಗೆ ಕಡಿಮೆಯಾಗದಿದ್ದರೂ ಅದನ್ನು ಅನುಭವಿಸಲಿಕ್ಕೆ
ದೇವರು ಅಧಿಕಾರ ಕೊಡುವದಿಲ್ಲ ಸಹಾ, ಅನ್ಯ ಪುರುಷನು ಅದನ್ನು ಅನುಭವಿಸು
೩ ವನಷ್ಟೆ, ಇದೂ ಮಾಯವೂ ಕೆಟ್ಟ ವ್ಯಾಧಿಯೂ ಆಗಿದೆ, ಒಬ್ಬನು ನೂರು ಹುಟ್ಟಿ
ಸಿದರೂ ಹಲವು ವರುಷ ಬದುಕಿ ವರುಷಗಳ ದಿನಗಳು ಅಧಿಕವಾಗಿ ಹೆಚ್ಚಿದರೂ ಒ
ಳ್ಳೇತನದಿಂದ ಅವನಿಗೆ ತೃಪ್ತಿ ಇಲ್ಲ, ಸಮಾಧಿಯೂ ಇಲ್ಲವೆಂತಾದರೆ ಅವನಿಗಿಂತ ಬಿದ್ದ
೪ ಬಸುರು ವಾಸಿಯೆಂತ ನಾನು ಹೇಳುವೆನು; ಯಾಕಂದರೆ ಅದು ಮಾಯದಿಂದ ಬಂ
೫ ದು ಕತ್ತಲೆಯಲ್ಲಿ ಹೋಗುತ್ತದೆ, ಕತ್ತಲೆಯಲ್ಲಿ ಅದರ ಹೆಸರು ಮರೆಯಾಗಿರುತ್ತದೆ, ಸೂ
ರ್ಯನನ್ನು ನೋಡಲು (In Mal ಕಂಡುಕೊಳ್ಳದದ್ದು) ಇಲ್ಲ, ಅವನಿಗಿಂತ ಇದಕ್ಕೆ ವಿಶ್ರಾಂತಿ
೬ ಉಂಟು. ಅವನು ಎರಡು ಸಾವಿರ ವರುಷ ಬದುಕಿದಾಗ್ಯೂ ಒಳ್ಳೇದನ್ನು ಕಾಣದಿದ್ದರೆ

ಸಕಲವೂ ಒಂದು ಸ್ಥಳಕ್ಕೆ ಹೋಗುವದಿಲ್ಲವೋ?

ಮನುಷ್ಯನ ಕಷ್ಟವೆಲ್ಲ ಅವನ ಬಾಯಿಗೋಸ್ಕರವಾಗಿದೆಯಲ್ಲ! ಆಶೆಯು ಎಂದಿಗೆ ತುಂ- ೭
ಬುವದಿಲ್ಲವಲ್ಲಾ, ಜೀವಿಗಳ ಮುಂದೆ ನಡೆಯತಕ್ಕ ಬಲ್ಲ ಸಾಧುವಿಗೂ ಜ್ಞಾನಿಗೂ ಮೂ- ೮
ಢನಿಗಿಂತ ಏನು ವಿಶೇಷತೆ? ಆಶೆಯು ದೂರ ಹೋಗುವದಕ್ಕಿಂತ ಕಣ್ಣುಗಳು ಕಾ-
ಣುವಂಥಾದ್ದೆ ವಾಸಿ, ಇದು ಸಹ ಮಾಯವೂ ಗಾಳಿಯ ಬೆನ್ನಟ್ಟುವಿಕೆಯೂ ಅಷ್ಟೆ.— ಏನಿದ್ದ-
ರೂ ಅದರ ಹೆಸರು ಪೂರ್ವದಲ್ಲಿ ಕರೆಯಲ್ಪಟ್ಟಿತು. ಮನುಷ್ಯನು ಏನಾಗುವನೆಂದು ೧೦
ಮುಂತಿಳಿಯಲ್ಪಟ್ಟಿತು, ತನಗಿಂತ ಮುಷ್ಕರ ಹೆಚ್ಚಾದವನ ಸಂಗಡ ವ್ಯವಹಾರ ಮಾ-
ಡಲಿಕ್ಕೆ ಕೂಡದು. ಮಾಯವನ್ನು ಹೆಚ್ಚಿಸುವ ಮಾತುಗಳು ಹೆಚ್ಚು ಇದೆಯಲ್ಲ (ಅ-೬) ೧೧
ಮನುಷ್ಯನಿಗೆ (ಅದರಿಂದ) ಏನು ಫಲ? ನೆರಳಿನಂತೆ ತೀರಿಸುವ ಮಾಯಾಮಯ
(ವ್ಯರ್ಥ) ಬಾಳುವ ದಿನಗಳ ಪರಿಯಂತ ಜೀವದಲ್ಲಿ ಮನುಷ್ಯನಿಗೆ ಇಂಥಾದ್ದು ಒಳ್ಳೆ-
ದೆಂದು ಯಾರು ಬಲ್ಲ? ಅವನ ತರುವಾಯ ಸೂರ್ಯನ ಕೆಳಗೆ ಇಂಥಾದ್ದು ಆ-
ಗುವದೆಂತ ಮನುಷ್ಯನಿಗೆ ಯಾರು ತಿಳಿಸುವನು?

೭ನೆ ಸಂಧಿ.

ಒಳ್ಳೆ ತೈಲಕ್ಕಿಂತ ಒಳ್ಳೆ ಹೆಸರೂ ಹುಟ್ಟಿದ ದಿನಕ್ಕಿಂತ ಸಾಯುವ ದಿವಸವೂ ವಾಸಿ. ೧
ಔತಣದ ಮನೆಗೆ ಹೋಗುವದಕ್ಕಿಂತ ವಿಲಾಪದ ಮನೆಗೆ ಹೋಗುವದು ವಾಸಿ, ೨
ಸಕಲ ಮನುಷ್ಯನಿಗೂ ಇದೇ ಅವಸಾನವು, ಜೀವಉಳ್ಳವನು ಅದನ್ನು ಹೃದಯ-
ದಲ್ಲಿ ಇಟ್ಟುಕೊಳ್ಳುವನು. ನಗೆಗಿಂತ ವ್ಯಸನವು ವಾಸಿ, ಮುಖದ ಕಳೆಗುಂದುವಿಕೆ ೩
ಯಿಂದ ಹೃದಯವು ಚಿಗುರುವದು, ಜ್ಞಾನಿಗಳ ಹೃದಯವು ವಿಲಾಪದ ಮನೆಯ ೪
ಲ್ಲಿಯೂ ಮೂಢರ ಹೃದಯವು ಸಂತೋಷದ ಮನೆಯಲ್ಲಿಯೂ ಇರುತ್ತದೆ. ಒಬ್ಬಾ- ೫
ತನು ಮೂಢರ ಹಾಡನ್ನು ಕೇಳುವದಕ್ಕಿಂತ ಜ್ಞಾನಿಯ ಆಕ್ಷೇಪವನ್ನು ಕೇಳುವದು ವಾಸಿ.

೨ನೇ ಸಂಧಿ.

೬. ಮಡಿಕೆಯ ಕೆಳಗೆ ಮುಳ್ಳುಗಳು ಸಿಡಿವಂತೆ (ಕೀರ್ತ ೧೧ ಅ ೧೭.) ಮೂ
೭. ಢನ ನಗೆಯಾಗಿದೆಯಲ್ಲಾ ಇದೂ ಸಹಾ ಮಾಯವೇ. ಜುಲುಮೆಯು (=ಅನ್ಯಾ
ಯದ ಕಿರುಕುಳವು) ಜ್ಞಾನಿಯನ್ನು ಮರುಳು ಮಾಡಿ ಇನಾಮು ಹೃದಯವ
ನ್ನು ಕೆಡಿಸುವದು ಸ್ಪಷ್ಟ.

೮. ಕಾರ್ಯದ ಆರಂಭಕ್ಕಿಂತ ಅಂತ್ಯವು ಲೇಸು, ಮನಸ್ಸಿನ ಉಬ್ಬುವಿಕೆ
೯. ಗಿಂತ ಮನಶ್ಶಾಂತಿಯು ಲೇಸು. ಮೂಢರ ಮಡಿಲಲ್ಲಿ ವ್ಯಸನವು ಆವಾಸ
೧೦. ಮಾಡುವದರಿಂದ ಆತ್ಮದಲ್ಲಿ ವ್ಯಸನ ಪಡಲಿಕ್ಕೆ ತ್ವರೆ ಪಡಬೇಡ! ಪೂರ್ವದ
ದಿನಗಳು ಇವುಗಳಿಗಿಂತ ಲೇಸು ಯಾತರಿಂದ ಎಂತ ಕೇಳ ಬಾರದು! ಇ
೧೧. ದನ್ನು ಕುರಿತು ನೀನು ಜ್ಞಾನದಿಂದಲ್ಲ ಕೇಳುವದು. ಬಾಧ್ಯತೆಯ ಸಂಗಡ ಜ್ಞಾನ
೧೨. ವು ಒಳ್ಳೇದು ಸೂರ್ಯನನ್ನು ಕಾಣುವವರಿಗೆ ಇದೇ ಲಾಭ; ಯಾಕಂದರೆ
ಜ್ಞಾನದಿಂದ ನೆರಳೂ ಹಣದಿಂದ ನೆರಳೂ ಅದೆ ಆದರೆ ತಿಳುವಿಕೆಯ
ಶ್ರೇಷ್ಠತ್ವವು (the real ವೈಶಿಷ್ಟ್ಯವು) ಜ್ಞಾನವುಳ್ಳವರನ್ನು ಬದುಕಿಸುವಂಥಾ
೧೩. ದ್ದು. ದೇವರ ಕ್ರಿಯೆಯನ್ನು ನೋಡು: ಆತನು ಸೊಟ್ಟಗೆ ಮಾಡಿದ್ದನ್ನು ನೆಟ್ಟ
೧೪. ಗೆ ಮಾಡಲಿಕ್ಕೆ ಯಾರಿಗೆ ಕೂಡುವದು (೧,೧೫)! ಒಳ್ಳೇತನದ ದಿವಸ
ದಲ್ಲಿ ಸುಖಪಡು ಕೇಡಿನ ದಿನದಲ್ಲಿ ನೋಡಿಕೋ ([illegible] ಎದುರು ನೋ
ಡು): ಅದರ ಸಂಗಡ ಇದನ್ನು ಸಹಾ ದೇವರು ಉಂಟು ಮಾಡಿದ್ದ
ಮುಂದೆ
ಮನುಷ್ಯನು ತನ್ನ ಹಿಂದೆ (ಪ್ರಾಸಕ್ತಾಗಿ) ಏನೂ ಕಂಡು ಕೊಳ್ಳದೋಲಕ್ಕಾಗಿಯೇ
೧೫. ತನ್ನ ವ್ಯರ್ಥ ದಿನಗಳಲ್ಲಿ ನಾನು ಸಕಲ ಕಂಡೆನು: ತನ್ನ ನೀತಿಯಲ್ಲಿ ಕೆಟ್ಟು
ಹೋಗುವ ನೀತಿವಂತನೂ ಇದ್ದಾನೆ ತನ್ನ ಆಗದ್ದರಲ್ಲಿ (ಆಯುಸ್ಸನ್ನು)
೧೬. ವೃದ್ಧಿ ಮಾಡುವ ದುಷ್ಟನೂ ಇದ್ದಾನೆ. ಅತಿ ನೀತಿವಂತನು ಆಗ ಬಾರದು;

ಅತ್ಯಂತ ಜ್ಞಾನಿಯಾಗಿ ತೋರಿಸಲೂ ಬಾರದು! ನೀನು ಹಾಳಾಗಿ ಹೋಗಲಿಕ್ಕೆ ಏನು? ೧೭
ಅತಿ ದುಷ್ಟನೂ ಆಗ ಬಾರದು ಮೂರ್ಖನೂ ಆಗ ಬಾರದು ಅಕಾಲದಲ್ಲಿ
ನೀನು ಸಾಯಲಿಕ್ಕೆ ಏನು? ಇದನ್ನು ಹಿಡಿಯುವದೂ ಅದನ್ನು ಕೈಬಿಡದೆ ೧೮
ಇರುವದೂ ಹೆಚ್ಚು ಒಳ್ಳೇದು; ದೇವರನ್ನು ಭಯಪಡುವವನು ಎಲ್ಲಾದರಿಂದ
ತಪ್ಪಿ ಹೋಗುವವನು ಸತ್ಯ.— ಹತ್ತು ಶೂರರು ನಗರದಲ್ಲಿರುವದಕ್ಕಿಂತ ೧೯
ಜ್ಞಾನಿಗೆ ಬಲ ಹೆಚ್ಚಾಗುವದು ಜ್ಞಾನದಿಂದ; ತಪ್ಪದೆ ಒಳ್ಳೇದು ಮಾಡುವ ೨೦
ನೀತಿವಂತನು ಸತ್ಯವಾಗಿ ಭೂಮಿಯಲ್ಲಿ ಇಲ್ಲವಲ್ಲ. ಜನರು ಆಡುವ ಎ ೨೧
ಲ್ಲಾ ಮಾತುಗಳನ್ನು ಲಕ್ಷ್ಯ ಮಾಡಬೇಡ, ನಿನ್ನ ದಾಸನು ನಿನ್ನನ್ನು ಶಪಿ
ಸುವದನ್ನು ಕೇಳದಿರಲಿಕ್ಕಾಗಿಯೇ! ಬೇರೆಯವರನ್ನು ನೀನು ಶಪಿಸಿದ ೨೨
ಹಾಗೆ ನಿನ್ನ ಹೃದಯವು ಎಷ್ಟೋ ಸಾರಿ ತಿಳಿಯುತ್ತದೆ.

ಇದನ್ನೆಲ್ಲಾ ನಾನು ಜ್ಞಾನದಿಂದ ಪರೀಕ್ಷೆ ಮಾಡಿ ಜ್ಞಾನಿಯಾಗ ಬೇಕೆಂತ ೨೩
ಇದ್ದೆನು, ಆದರೆ ಅದು ನನಗೆ ದೂರ ([illegible] ಅಗಲ) ವಾಗಿತ್ತು. ಇರು ೨೪
ವದಾಗಲಿ ಆಳದಲ್ಲಿರುವ ಆಳವೂ ಆಗಿದೆ, ಯಾರು ಅದನ್ನು ಕಂಡು
ಕೊಳ್ಳುವನು? ನಾನು ತಿಳಿಯಲಿಕ್ಕೂ ಆರಾಯಲಿಕ್ಕೂ ಜ್ಞಾನವನ್ನೂ ಯುಕ್ತಿ ೨೫
ಯನ್ನೂ ದುಷ್ಟತನ ~~[illegible]~~ ಮೂಢತ್ವವೆಂದೂ ಹುಚ್ಚುತನ
ಮರುಳುತನವೆಂದೂ ತಿಳಿಯಲಿಕ್ಕೆ ನಾನು ತಿರಿಗಿ ಮನಸ್ಸು ಮಾಡಿದಾಗ, ಮ ೨೬
ರಣಕ್ಕಿಂತಲೂ ಕಹಿಯಾಗಿ ತೋರಿದ್ದು (ಸ್ತ್ರೀಯೇ. (ಸಾ ಮ ೨, ೧೬) ಹೃದಯವು
ಉರುಲುಗಳೂ ಬಲೆಗಳೂ ಕೈಗಳು ಬೇಡಿಗಳೂ ಆಗಿರುವಂಥಾಳೇ. ದೇವರ
ಸನ್ನಿಧಿಯಲ್ಲಿ ಒಳ್ಳೇಯವನಾದವನು ಅವಳನ್ನು ಬಿಟ್ಟು ತಪ್ಪಿ ಹೋ
ಗುವನು ಪಾಪಿಯು ಅವಳಿಂದ ಹಿಡಿಯಲ್ಪಡುವನು. ಇಗೋ ಲೆಕ್ಕ ೨೭

ಸಾಧಿಸಲಿಕ್ಕೆ ನಾನು ಒಂದರ ಸಂಗಡ ಒಂದು ಹೋಲಿಸಿ ಇದನ್ನು ಕಂಡು
೨೮. ಕೊಂಡೆನು ಎಂತ ಪ್ರಸಂಗಿ ಹೇಳುತ್ತಾನೆ; ತಿರಿಗಿ ನನ್ನ
ಪ್ರಾಣವು ಹುಡುಕಿದರೂ ಕಂಡುಕೊಳ್ಳಲಿಲ್ಲವಾದರೆ: ಸಾವಿರದಲ್ಲಿ ಒಬ್ಬ ಮ
ನುಷ್ಯನನ್ನು ಕಂಡು ಕೊಂಡೆನು ಅಷ್ಟರಲ್ಲಿ ಒಬ್ಬ ಹೆಂಗಸನ್ನು ನಾನು
೨೯. ಕಂಡದ್ದೂ ಇಲ್ಲ. ಒಂದು ಮಾತ್ರ ನಾನು ಇಂನು ಕಂಡದ್ದೇನಂದರೆ:
ದೇವರು ಮನುಷ್ಯನನ್ನು ನೆಟ್ಟನೆಯವನಾಗಿ ಉಂಟು ಮಾಡಿದನು ಆದ
ರೆ ಅವರು ಅನೇಕ ಯುಕ್ತಿಗಳನ್ನು ಹುಡುಕಿಕೊಂಡಿದ್ದಾರೆ.

೮ನೇ ಸಂಧಿ

೧. ಜ್ಞಾನಿಗೆ ಯಾರು ಸಮಾನನು (In trial ಒಪ್ಪುವವನು) ಕಾರ್ಯಕ್ಕೆ
ಅರ್ಥವನ್ನು ಯಾರು ತಿಳಿಯುವವನು? ಮನುಷ್ಯನ ಜ್ಞಾನವು ಅವನ ಮು
ಖವನ್ನು ಪ್ರಕಾಶಿಸ ಮಾಡುವದು ಮುಖದ ಕಠಿನತ್ವವು ಬದಲಾಗುತ್ತದೆ
೨. ನೋಡು. ನಾನು (ಹೇಳುವದೇನಂದರೆ): ಅರಸನ ಬಾಯಿಯನ್ನು ಕಾಯು
ಕೋ ದೇವರನ್ನು ಆಣೆ ಇಟ್ಟದ್ದರ ನಿಮಿತ್ತ ನೋಡು. (ಅದು ಬೇಕಾದದ್ದು).
೩. ಅವನನ್ನು ಬಿಟ್ಟು ಹೋಗಲಿಕ್ಕೆ ಅವಸರ ಪಡಬೇಡ ದುಷ್ಕಾರ್ಯದಲ್ಲಿ
೪. ಸೇರಿ ನಿಲ್ಲಬೇಡ ಅವನು ತನಗೆ ಇಷ್ಟವಾದದ್ದೆಲ್ಲಾ ಮಾಡುವನಲ್ಲಾ; ಅರಸನ ಮಾತು
ಪ್ರಬಲವಾಗುತ್ತದೆ ಸಹ. ನೀನು ಏನು ಮಾಡುತ್ತೆ ಎಂತ ಅವನಿಗೆ ಯಾ
೫. ರು ಹೇಳುವವನು? ಅಪ್ಪಣೆಯನ್ನು ಕಾಯುವವನು ದುಷ್ಕಾರ್ಯವನ್ನು
ತಿಳಿಯನು; ಕಾಲವನ್ನೂ ನ್ಯಾಯವಿಧಿಯನ್ನೂ ಜ್ಞಾನಿಯ ಹೃದಯವು ತಿಳಿ
೬. ಯುವದು. ಸಕಲ ಕಾರ್ಯಕ್ಕೂ ಕಾಲವೂ ನ್ಯಾಯವಿಧಿಯೂ ಉಂಟಲ್ಲಾ
೭. ಮನುಷ್ಯನ ಕೆಟ್ಟತನವು ಅವನ ಮೇಲೆ ಭಾರವಾಗಿರುವದು ಸಹ. ಇಂಥಾದ್ದು

ಆಗುವದೆಂದು ಅವನಿಗೆ ತಿಳಿಯದ್ದರಿಂದ ಹ್ಯಾಗೆ ಆಗುವದೆಂದು ಯಾವನು
ತಿಳಿಸುವನು ? ಪ್ರಾಣವನ್ನು ಹಿಡಿದಿಡುವದಕ್ಕೆ ಬಲ್ಲ ಮನುಷ್ಯನಾದರೂ ಇಲ್ಲ. ೮ ಗಾ-
ಳಿಯ ಮೇಲೆ (ಪ್ರ)ಬಲನಿಲ್ಲ, ಮರಣದಿನದ ಮೇಲೆ (ಪ್ರ)ಬಲ್ಯವೂ ಇಲ್ಲ,
ಯುದ್ಧದಲ್ಲಿ (ಯಾರಿಗೂ) ಪುರುಸೊತ್ತು (In Mal. ಬಿಡುಗಡೆ) ಇಲ್ಲ. ದುಷ್ಟ
ತೆಯು ತನ್ನೊಡೆಯರನ್ನು ಬಿಡುಗಡೆ ಮಾಡುವದು ಇಲ್ಲವಷ್ಟೆ.

ಸೂರ್ಯನ ಕೆಳಗೆ ನಡೆಯುವ ಎಲ್ಲಾ ಕ್ರಿಯೆಗಳಲ್ಲಿಯೂ ಮನಸ್ಸಿಟ್ಟಾಗ —
ಇದೆಲ್ಲಾ ನಾನು ಕಂಡೆನು. ~~ಸೂರ್ಯನ ಕೆಳಗೆ ನಡೆಯುವ ಎಲ್ಲಾ ಕ್ರಿಯೆಗಳಲ್ಲಿ
ಯೂ ಮನಸ್ಸು ಇಟ್ಟಾಗ ಇದೆಲ್ಲಾ ನಾನು ಕಂಡೆನು~~ ಮನುಷ್ಯನು ಮನು
ಷ್ಯನನ್ನು ಕೆಟ್ಟತನಕ್ಕಾಗಿ ಆಳುವ ಸಮಯವಲ್ಲಿಯೇ. — ಹಾಗೆಯೇ ದು ·೧೦
ಷ್ಟರು ಹೂಣಲ್ಪಟ್ಟು ಹೋಗುವದೂ ಸರಿಯಾಗಿ ಮಾಡಿದವರು ಪರಿಶುದ್ಧ ಸ್ಥಳವನ್ನು
ಬಿಟ್ಟು ನಡೆದು ನಗರದಲ್ಲಿ ಮರೆಯಲ್ಪಟ್ಟದ್ದೂ ನಾನು ಕಂಡೆನು. ಇದು ಸಹ ಮಾಯ
ವೇ. ದುಷ್ಕ್ರಿಯೆಗೆ ಬಂದ ಶಿಕ್ಷೆಯು ತ್ವರೆಯಾಗಿ ನಡೆಯದ್ದರಿಂದ ಮನುಷ್ಯಪು ·೧೧
ತ್ರರ ಹೃದಯವು ಕೆಟ್ಟತನವನ್ನು ಮಾಡುವದಕ್ಕೆ ಅವರಲ್ಲಿ ತುಂಬಿ ಹೋಗುತ್ತದೆ
(In Mal. ಉಬ್ಬುತ್ತದೆ.) ಪಾಪಿಯು ನೂರು ದೋಷವನ್ನು ಮಾಡುತ್ತಾ ·೧೨
(ಆಯುಷ್ಯವನ್ನು) ದೀರ್ಘಮಾಡಲಾಗಿ ನಾನು ದೇವರನ್ನು ಭಯಪಡುವ
ವರಿಗೆ ಅವನ ಮುಂದೆ ಭಯಪಡುವದರಿಂದ ಮೇಲು ಉಂಟಾಗುವದೆಂದೂ,
ದುಷ್ಟನಿಗೆ ಮೇಲು ಉಂಟಾಗಲಿಕ್ಕಿಲ್ಲ ದೇವರ ಮುಂದೆ ಭಯಪಡದ್ದರಿಂದ ·೧೩
ನೆರಳಿನಂತೆ ಬಾಳುವ ದಿನವನ್ನು ದೀರ್ಘಮಾಡಲಿಕ್ಕೂ ಇಲ್ಲವೆಂದೂ ನಾನು
ಬಲ್ಲೆನು ಸಹಾ.

ಭೂಮಿಯ ಮೇಲೆ ಬಂದು ಮಾಯ ನಡೆಯುವದೇನಂದರೆ: ದುಷ್ಟರ ೧೪.

(ಕಿ)ಟಯಿಗೆ ತಕ್ಕಷ್ಟು ಕಾಣುವ ನೀತಿವಂತರೂ ಇದ್ದಾರೆ. ನೀತಿವಂತರ (ಕಿ)ಟಯಿಗೆ ತಕ್ಕಷ್ಟು ಕಾಣು
೧೫ ವ ದುಷ್ಟರೂ ಇದ್ದಾರೆ; ಇದು ಸಹಾ ಮಾಯವೆಂದು ನಾನು ಹೇಳುತ್ತೇನೆ. ಆದ್ದರಿಂದ
ಮನುಷ್ಯನು ತಿನ್ನುತ್ತಾ ಕುಡಿಯುತ್ತಾ ಸಂತೋಷಿಸುವದಲ್ಲದೆ ಮೇಲು ಏನೂ ಇ
ಲ್ಲದ್ದರಿಂದ ನಾನು ಸಂತೋಷವನ್ನು ಹೊಗಳುವೆನು; ದೇವರು ಅವನಿಗೆ ಸೂರ್ಯನ ಕೆಳಗೆ
ಕೊಟ್ಟ ಬಾಳುವ ದಿನಗಳ ಪರಿಯಂತ ಅವನ ಕಷ್ಟದಲ್ಲಿ ಇದೇ ಅವನ ಸಂಗಡ
ಹೋಗುವಂತೆ ಆಗಲಿ.

೮ನೇ ಸಂಧಿ.

(— ೧೨, ೭ —)

ದೇವರು ಕಾರ್ಯಾಂತರಗಳನ್ನು ವಿಚಾರಿಸುವ ವಿಧವು ಮನುಷ್ಯಬುದ್ಧಿಗೆ ಮೀ
ರಿದ್ದು ಬುದ್ಧಿಹೀನರ ಹೃದಯದಲ್ಲಿ ಅಡಕವಾಗಿರುವಂಥಾದ್ದು ಆದರೂ (೪) ಕಷ್ಟವು
ಮಾಡಿದ ಪಾಪವು ಕಾರ್ಯವಾಸ್ತವಾಗಿ ಬೈಗಾಗಿರುವದರಿಂದ (೧೧)
ಜ್ಞಾನದಿಂದ ಉದ್ಯೋಗವನ್ನು ಮಾಡಿಕೊಂಡು (೧೬) ಮರಣಾಂತರ ~~ಹ~~ಪೆ
ದ್ಧಾರವನ್ನು ಕಾಣಲೇ ಬೇಕಾದ ಕಾರಣ (೧೦, ೫) (ಕ)ಮಕ್ಕೆ ದುಃಖಗಳನ್ನು ತೀರಿಸ
ತಕ್ಕ ಬಲಾತ್ಕಾರ ಕೊಡತಕ್ಕದೆಂದೂ (೧೨, ೫) ನಿಸ್ಸಾರ ಅಧಿಕಾರಗಳನ್ನು ಕ
ಟಿಸದೆಂದೂ (೧೧, ೧) ಕಾಂಡಗಳಲ್ಲಿ ಉತ್ಸಾಹ ಪಡದೂ (೭) ಯೌವನ
ಕಾಲದಲ್ಲಿ (ಪ್ರತ್ಯೇಕ) ದೇವಭಯ ದಾಂಟಿಗೆ ಸುಖಪಡದೂ (೧೨, ೧)
ಆದರಿಂದ ಪಾಪ್ರಶ್ನ ದುಃಖವನ್ನು ಪರಿಗ್ರಹಿಸಿಯನ್ನು ಶಮನ ಮಾ
ಡಲೂ ಬೇಕು.

೮, ೧೬. (ಮನುಷ್ಯನು) ರಾತ್ರಿ ಹಗಲು ಕಣ್ಣುಗಳಿಗೆ ನಿದ್ರೆ ಕಾಣದ ಹಾಗೆ ಭೂಮಿಯ ಮೇ
ಲೆ ನಡಿಯುವ ಕಷ್ಟವನ್ನು ಕಾಣಲಿಕ್ಕೂ ಜ್ಞಾನವನ್ನು ತಿಳಿಯಲಿಕ್ಕೂ ನಾನು ಹೃದ
೧೭ ಯ ವಿಟ್ಟಾಗ, ಸೂರ್ಯನ ಕೆಳಗೆ ನಡಿಯುವ ಕೆಲಸವನ್ನು ಮನುಷ್ಯನು (ಕ)ಂಡ

ಪ್ರಸಂಗಿ.

ಅಕ್ಕೆ ಕೂಡದೆಂದು ನಾನು ದೇವರ ಕ್ರಿಯೆಯನ್ನು (ಸುರಿ) ಕಂಡುಕೊಂಡೆನು; ಕಾರ್ಯಾದಿ
ಸಲಿಕ್ಕೆ ಮನುಷ್ಯನು ಎಷ್ಟು ಕಷ್ಟಪಟ್ಟರೂ [struck out] ಗೊತ್ತಿಲ್ಲ, (ಅದನ್ನು)
ತಿಳಿಯಲಿಕ್ಕೆ ಜ್ಞಾನಿ ನೆನಸಿದರೂ ಗೊತ್ತಿಲ್ಲ ಕೂಡದು.

ಇದೆಲ್ಲ ನಾನು ಕಲ್ಪಿಸಿಕೊಂಡು ಇದನ್ನೆಲ್ಲ ಬೈಲು ಮಾಡಲಿಕ್ಕೆ (ಸಿದ್ಧನಾ ೯,೧.
ದೆನು): ನೀತಿವಂತರೂ ಜ್ಞಾನಿಗಳೂ ಅವರ ಕೆಲಸಗಳು ದೇವರ ಕೈಯಲ್ಲಿ, ಸ್ನೇ
ಹವೂ ದ್ವೇಷವೂ ಬಿಟ್ಟ ಮನುಷ್ಯನಿಗೂ ತಿಳಿಯದು, ಸಕಲವೂ ಅವರ ಮುಂ
ದೆ ಇರುತ್ತದೆ. ಸಕಲವೂ ಎಲ್ಲರಿಗೂ ಒಂದಾಗಿಯೇ ಬರುವದು, ಅದೃಷ್ಟವು ಒಂ ೨
ದೇ, ನೀತಿವಂತನಿಗೂ ದುಷ್ಟನಿಗೂ ಒಳ್ಳೆಯವನಿಗೂ ಶುದ್ಧನಿಗೂ ಅಶುದ್ಧನಿ
ಗೂ ಬಲಿ ಅರ್ಪಿಸುವವನಿಗೂ ಯಾವನೂ ಅರ್ಪಿಸದವನಿಗೂ (ಹೋಗುತ್ತದೆ.) ಒಳ್ಳೆ
ಯವನೂ ಪಾಪಿಯೂ ಆಣೆ ಇಡುವವನೂ ಆಣೆಗೆ ಅಂಜುವವನೂ
ಒಂದೇ ಪ್ರಕಾರ. ಎಲ್ಲವರಿಗೂ ಅದೃಷ್ಟ ಒಂದೇ, ಎಂಬದು ಸೂರ್ಯನ ಕೆಳಗೆ ೩
ನಡಿಯುವ ಎಲ್ಲಾದರಲ್ಲಿಯೂ ಕೆಟ್ಟದ್ದಾಗಿ ತೋರುತ್ತದೆ; ಆದ್ದರಿಂದ ಮನು
ಷ್ಯಪುತ್ರರ ಹೃದಯವು ಕೇಡಿನಿಂದ ತುಂಬಿದ್ದು ಅವರು ಬದುಕುವ ವರೆಗೆ ಹೃದ
ಯದಲ್ಲಿ ಹುಚ್ಚುತನ ವಾಸ ಮಾಡುವದೂ ಉಂಟು. ಆದರೆ ಅವನು ಅ
ನಂತರದಲ್ಲಿ ಸತ್ತವರ ಹತ್ತರವೇ.

ಇದರಲ್ಲಿ ಆರಿಸಲ್ಪಡುವದು ಯಾವನು ಮಾತ್ರದವನು? ಎಲ್ಲ ಜೀವಿ ೪
ಗಳ ಕೂಡೆ ನಿರೀಕ್ಷೆ ಉಂಟು. ಸತ್ತ ಸಿಂಹಕ್ಕಿಂತಲೂ ಬದುಕುವ ನಾಯಿ ಒಳ್ಳೇ
ದಲ್ಲ! ಯಾಕಂದರೆ ಸಾಯುವೆವೆಂದು ಜೀವ ಉಳ್ಳವರು ಬಲ್ಲರು, ಆದರೆ ಸ ೫
ತ್ತವರು ಯಾವನೂ ಅರಿಯದವರೂ ಅವರ ನೆನಪು ಸಹ ಮರೆತು ಹೋಗುವ
ದರಿಂದ ಕೂಲಿ ಯಾವನೂ ಇಲ್ಲದವರೂ ಆಗಿದ್ದಾರೆ. ಅವರ ಸ್ನೇಹವೂ ದ್ವೇಷವೂ

ಪ್ರಸಂಗಿ.

ಇನ್ನೂ ಯಾವದರಲ್ಲಿ ಕೆಟ್ಟು ಹೋಯಿತು. ಸೂರ್ಯನ ಕೆಳಗೆ ನಡೆಯುವ ಎಲ್ಲಾದರ
ಲ್ಲಿಯೂ ಅವರಿಗೆ ಒಂದು ಪಾಲೂ ಇಲ್ಲ.

೭ ಹಾಗಾದರೆ ಹೋಗು, ಸಂತೋಷದಿಂದ ನಿನ್ನ ಆಹಾರ ಉಣ್ಣು, ಸುಖಮನಸ್ಸಿ
ನಿಂದ ದ್ರಾಕ್ಷಾರಸವನ್ನು ಕುಡಿ, ಯಾಕಂದರೆ ನಿನ್ನ ಕ್ರಿಯೆಗಳು ಈಗಲೇ ದೇವರಿ
೮ ಗೆ ಮೆಚ್ಚಿಕೆಯಾಗಿದ್ದಾವಲ್ಲ; ನಿನ್ನ ವಸ್ತ್ರಗಳು ಯಾವಾಗಲೂ ಬಿಳ್ಪಾಗಿರಲಿ, ತಲೆ
೯ ಗೆ ಎಣ್ಣೆ ಕಮ್ಮಿಯಾಗಲೂ ಬಾರದು! ದೇವನು ಸೂರ್ಯನ ಕೆಳಗೆ ನಿನಗೆ ಕೊಟ್ಟ
ವ್ಯರ್ಥವಾದ ದಿವಸಗಳೆಲ್ಲ ನೀನು ಪ್ರೀತಿಸುವ ಹೆಂಡತಿಯ ಸಂಗಡ ನಿನ್ನ
ವ್ಯರ್ಥದ ದಿವಸಗಳ ಪರಿಯಂತ ಜೀವವನ್ನು ಅನುಭವಿಸಿಕೋ, ನೀನು ಸೂರ್ಯನ
ಕೆಳಗೆ ಕಷ್ಟಪಡುವ ನಿನ್ನ ಕಷ್ಟದಲ್ಲಿಯೂ ಜೀವದಲ್ಲಿಯೂ ಇದೇ ನಿನ್ನ ಪಾಲು.
೧೦ ನಿನ್ನ ಬಲದಿಂದ ಕೈಗೆ ಮಾಡಸಿಕ್ಕಿದ್ದನ್ನು ಮಾಡಿಕೋ; ನೀನು ಹೋಗುವ
ಪಾತಾಳದಲ್ಲಿ ಕ್ರಿಯೆಯೂ ಯುಕ್ತಿಯೂ ತಿಳುವೂ ಜ್ಞಾನವೂ ಏನೂ ಇಲ್ಲ
ವಷ್ಟೆ!

೧೧ ನಾನು ತಿರುಗಿ ಸೂರ್ಯನ ಕೆಳಗೆ ಕಂಡದ್ದೇನಂದರೆ: ಓಟವು ಓಡುವವ
ರಿಗೂ ಎಲ್ಲವರಿಗೂ ಆಗುವದರಿಂದ ಶೂರ ಪಡುವವರಿಗೆ ಜಯವೂ ಇಲ್ಲ,
ಜ್ಞಾನಿಗಳಿಗೆ ಉಣ್ಣುವದೂ ಇಲ್ಲ. ಜ್ಞಾನಿಗಳಿಗೆ ಆಹಾರವೂ ಇಲ್ಲ. ವಿವೇಕಿಗಳಿಗೆ ಸಂಪ
೧೨ ತ್ತು ಇಲ್ಲ, ತಿಳಿಯುವವರಿಗೆ ಕೃಪೆಯೂ ಇಲ್ಲ. ತನ್ನ ಕಾಲವನ್ನಾದರೂ ಮನುಷ್ಯ
ನು ತಿಳಿಯುವದಿಲ್ಲ, ಕೆಟ್ಟ ಬಲೆಯಲ್ಲಿ ಹಿಡಿಯಲ್ಪಡುವ ಮೀನುಗಳಂತೆ
ಯೂ ಉರುಲಲ್ಲಿ ಸಿಕ್ಕುವ ಪಕ್ಷಿಗಳಂತೆಯೂ ಮನುಷ್ಯಪುತ್ರರು ದುಷ್ಟ
೧೩ ಕಾಲವು ಫಕ್ಕನೆ ಅವರ ಮೇಲೆ ಬೀಳುವಾಗ ಅದರಲ್ಲಿ ಸಿಕ್ಕಿ ಬೀಳುತ್ತಾರೆ. — ಈಗೆ
ನಾನು ಸೂರ್ಯನ ಕೆಳಗೆ ಜ್ಞಾನವಾಗಿ ಕಂಡದ್ದು ಮತ್ತು ಮನಸ್ಸಿಗೆ ದೊಡ್ಡದೆಂ
೧೪ ದು ತೋರಿತು: ಸ್ವಲ್ಪ ಮನುಷ್ಯರಿರುವ ಒಂದು ಸಣ್ಣ ಪಟ್ಟಣವು ಇರುವದಕ್ಕೆ
ವಿರೋಧವಾಗಿ ದೊಡ್ಡ ಅರಸನು ಬಂದು ಅದನ್ನು ಮುತ್ತಿಗೆ ಹಾಕಿ ಮಹಾ
೧೫ ಯುದ್ಧಗಳನ್ನು ಅದಕ್ಕೆದುರಾಗಿ ಮಾಡಿದನು, ಅದರಲ್ಲಿ ದರಿದ್ರನಾದ ಜ್ಞಾನಿಯು

ಲ್ಲಿಂದ ಬಿಟ್ಟನು, ಶಾಂತಿ ಬಂದನು. ಸ್ವಜ್ಞಾನದಿಂದ ಆ ಪಕ್ಷವನ್ನು ಬಿಡಿಸಿದಾಗ ವಿಶ್ವ ೧೫
ಜ್ಞಾದವನನ್ನು ಮತ್ತೊಂದು ನೆನೆಸು ಮಾಡಿದ್ದಾನಲ್ಲ. ಆದ ನಾನು ಹೇಳಿದ್ದೇನೆ ೧೬
ಇಷ್ಟಕ್ಕಿಂತ ಜ್ಞಾನವು ಬಿಟ್ಟೆನು, ಆದರೆ ವಿಶ್ವಜ್ಞಾದವನ ಜ್ಞಾನವು ನಿರಾಶಿಸಲ್ಪಟ್ಟದ್ದು
ಅವನ ಮಾತುಗಳು ಹೇಳಲ್ಪಡದ್ದೂ ಆಗಿದೆ.

೧೦ನೇ ಸಂಧಿ.

ಸಾವಧಾನದಿಂದ ಹೇಳಲ್ಪಟ್ಟರೆ, ಜ್ಞಾನಿಯ ಮಾತುಗಳು ಮೂಢರನ್ನು ಆಳು ೧೭
ವವನ ಕೂಗಿಗಿಂತ ಬಿಟ್ಟೆನು. ಯುದ್ಧಸನ್ನಾಹಕ್ಕಿಂತ ಜ್ಞಾನವು ವಾಸಿ. ಆದರೆ ೧೮
ಒಬ್ಬ ಪಾಪಿಯು ಬಹಳ ಒಳ್ಳೆಯದನ್ನು ಕೆಡಿಸುವನು. ಸುಗಂಧಗಾರನ ೧೦, ೧.
ತೈಲವನ್ನು ಸತ್ತ ನೊಣವು ದುರ್ವಾಸನೆ ಮಾಡಿ ನಾತ ಹುಟ್ಟಿಸುತ್ತದೆ. ಜ್ಞಾನಕ್ಕಿಂತಲೂ, ಘ
ನತ್ವಕ್ಕಿಂತಲೂ ಸ್ವಲ್ಪ ಮೂರ್ಖತನವು ಭಾರ (In Mal ...) ಹೆಚ್ಚಾದದ್ದು. ಜ್ಞಾನಿಯ ೨
ಹೃದಯವು ಅವನ ಬಲಗಡೆಗೂ ಮೂಢನ ಹೃದಯವು ಎಡಗಡೆಗೂ ಇರು
ವಂಥದ್ದು; ಹೆಡ್ಡನು ನಡೆಯುವ ದಾರಿಯಲ್ಲಿಯೂ ಬುದ್ಧಿಹೀನನೇ, ತಾ ೩
ನು ಹೆಡ್ಡನೆಂತ ಎಲ್ಲರಿಗೂ ಹೇಳುತ್ತಾನೆ. — ಆಳುವವನ ಕೋಪವು ನಿನ್ನ ಕಡೆಗೆ ೪
ಎದ್ದರೆ ನಿನ್ನ ನೆಲೆಯನ್ನು ಬಿಟ್ಟು ಹೋಗಬೇಡ, ಮಹಾ ಪಾಪಗಳನ್ನು ಶಾಂತ
ತೆಯು ಪರಿಹರಿಸುವದಂತೆ.

ನಾನು ಸೂರ್ಯನ ಕೆಳಗೆ ನೋಡಿದ ಒಂದು ಕೇಡು ಏನಂದರೆ: ಅಧಿಪತಿ ೫
ನಿಂದ ಹುಟ್ಟುವ ಒಂದು ತಪ್ಪು (ಭ್ರಾಂತಿ). ಮೂಢತೆಯು ಮಹಾ ಸ್ಥಾನ ೬
ಗಳಲ್ಲಿ ಇಡಲ್ಪಟ್ಟು ಧನವಂತರು ತಗ್ಗಿನ (In Mal ...) ದಲ್ಲಿ ವಾಸ ಮಾ
ಡುವರು ಸಹಾ; ನಾನು ದಾಸರನ್ನು ಕುದುರೆಯ ಮೇಲೆಯೂ, ಪ್ರಭುಗಳು ದಾಸ ೭
ರಂತೆ ನೆಲದಲ್ಲಿ ನಡೆಯುವದನ್ನೂ ಕಂಡೆನು. — ಆದರೆ ಗುಳಿಯನ್ನು ೮
(In Mal ...) ತೋಡುವವನು ಅದರಲ್ಲಿ ಬೀಳುವ, ಗೋಡೆಯನ್ನು ಮುರಿಯು
ವವನನ್ನು ಸರ್ಪವು ಕಚ್ಚಬಹುದು; ಕಲ್ಲುಗಳನ್ನು ತೆಗೆಯುವವನು ಅದರಿಂದ ೯
ನೋಯಲೂ, ಮರಗಳನ್ನು ಒಡೆಯುವವನು ಅವುಗಳಿಂದ ಮುರಿಯಲೂ ಬಹು
ದು. ಕಬ್ಬಿಣಕ್ಕೆ ಹದ ಕೆಟ್ಟರೆ ಬಾಯನ್ನು ಮಸೆಯದೆ ಇದ್ದರೆ, ಅತಿ ಬಲದಿಂದ ೧೦

೧೦ನೆ ಸಂಧಿ

೧೦ ಬಲ ಹೆಚ್ಚಿಸಬೇಕಾಗುವದು, ಯಥಾರ್ಥ ಮಾಡುವದರ ಲಾಭವು ಜ್ಞಾನ.
೧೧ ಮಂತ್ರಕಾರನನ್ನು (ಮ)ಂತ್ರಿಸದೆ ಸರ್ಪವು ಕಚ್ಚಿದರೆ ನಾಲಿಗೆಯವನಿಗೆ (ನಾಲಿಗೆಯಿಂ
ದ) ಉಪಕಾರವಿಲ್ಲವಲ್ಲ!

೧೨ ಜ್ಞಾನಿಯ ಬಾಯಿ ಮಾತುಗಳು ಉಪಕಾರವೇ. ಮೂರ್ಖನ ಅಧರಗಳು ಅವನ
೧೩ ನ್ನು ನುಂಗುವವು. ಅವನ ಬಾಯಿಯ ಮಾತುಗಳ ಆರಂಭವು ಹೆಡ್ಡತನ
೧೪ ವೇ. ಮತ್ತು ಅವನ ಬಾಯಿಯ ಅವಸಾನವು ಕೆಟ್ಟ ಹುಚ್ಚುತನವೇ. ಹೆಡ್ಡನು
ಮಾತುಗಳನ್ನು ಅಧಿಕ ಮಾಡುತ್ತಾನೆ. ಆಗತಕ್ಕಂಥಾದ್ದು ಮನುಷ್ಯನು
ತಿಳಿಯನಲ್ಲ! ಅವನ ತರುವಾಯ ಆಗುವಂಥಾದ್ದನ್ನು ಅವನಿಗೆ
೧೫ ಯಾವಾತನು ತಿಳಿಸುವನು. (ಊರಿ)ನೊಳಕ್ಕೆ ಹೋಗತಕ್ಕದ್ದು ತಿಳಿಯದ್ದರಿಂದ
ಮೂರ್ಖರ ಕಷ್ಟವು ಅವರಿಗೆ ದಣಿವನ್ನುಂಟು ಮಾಡುತ್ತದೆ.
೧೬ ಯಾವಲ್ಲಿ ಬಾಲನು ಅರಸನಾಗಿಯೂ (ಪ್ರಧಾ)ನರುಗಳು ಬೆಳಿಗ್ಗೆ ತಿನ್ನುತ್ತಾರೋ
೧೭ ಅಂಥ ದೇಶವೇ ನಿನಗೆ ಹಾ ಕಷ್ಟ! ಉದಾರ ಪು(ತ್ರ)ನು ಅರಸಾಗಿಯೂ (ಪ್ರಧಾ
ನ)ರು ಅಮಲಿಗಲ್ಲ, ಬಲಕ್ಕೋಸ್ಕರವಾಗಿ ತಕ್ಕ ಸಮಯದಲ್ಲಿ ತಿನ್ನುತ್ತಾರೋ ಅ
೧೮ ಂಥ ದೇಶವೇ ನೀನು ಧನ್ಯವು! ಮೈಗಳ್ಳತನದ ಕೈಗಳಿಂದ ತೊಲೆಗಳು ಜ
೧೯ ಗ್ಗುತ್ತವೆ. ಕೈಗಳ ಜೋಲಿನಿಂದ ಮನೆ ಸೋರುತ್ತದಲ್ಲ. ನಗಾಡಲಿಕ್ಕಾಗಿ ಔತ
ಣವನ್ನು ಮಾಡಿಸುತ್ತಾರೆ. — (ದ್ರಾಕ್ಷೆ)ರಸವು ಜೀವವನ್ನು ಸಂತೋಷಪಡಿಸು
೨೦ ತ್ತದೆ. ರೊಕ್ಕವು ಎಲ್ಲವನ್ನು ಉಂಟುಮಾಡುತ್ತದೆ, ಕಷ್ಟ! (ಹೀ)ಗೆ ನಿನ್ನ ಮನ
ದಿಂದಾದರೂ ಅರಸನನ್ನು ಶಪಿಸಬೇಡ, ನಿನ್ನ ಮಲಗುವ ಕೋಣೆಗಳಲ್ಲಿಯೂ ಧನವಂ
ತನನ್ನು ಶಪಿಸಲು ಬಾರದು, ಯಾಕಂದರೆ ಆಕಾಶದ ಪಕ್ಷಿಯು ಆ ಶಬ್ದವ
ನ್ನು ಒಯ್ದು ರೆಕ್ಕೆಯುಳ್ಳದ್ದು ಮಾತನ್ನು ತಿಳಿಸುವದಲ್ಲ.

ನಿನ್ನ ಆಹಾರವನ್ನು ನೀರಿನ ಮೇಲೆ ಹಾಕಿ ಬಿಡು, ಬಹಳ ದಿವಸಗಳು ಹೋದ ೧
ನಂತರ ನೀನು ಅದನ್ನು ಕಂಡುಕೊಳ್ಳುವಿ ನಿಶ್ಚಯ. ಭೂಮಿಯ ಮೇಲೆ ಏ— ೨
ನೆಲ್ಲಾ ಕೇಡು ಆಗುವದೆಂದು ತಿಳಿಯದ್ದರಿಂದ ಏಳು ಪಾಲನ್ನು ಎಂಟರಿಗೂ
ಹಂಚಿ ವಿಭಾಗಿಸು. ಮೋಡಗಳು ಮಳೆಯಿಂದ ತುಂಬಿ ಇದ್ದರೆ ಭೂಮಿಯ ೩
ಮೇಲೆ ಸುರಿಯುವದಲ್ಲದೆ ಮರವು ದಕ್ಷಿಣಕ್ಕಾಗಲಿ ಉತ್ತರಕ್ಕಾಗಲಿ ಬಿದ್ದರೂ
ಬೀಳುವಲ್ಲಿ ಮರ ಇರುವದು. ಗಾಳಿಯನ್ನು ಕಾಯುತ್ತಿರುವವನು ಬಿತ್ತ ೪
ಲಿಕ್ಕಿಲ್ಲ, ಮೋಡಗಳನ್ನು ನೋಡುವವನು ಕೊಯ್ಯಲಿಕ್ಕಿಲ್ಲ. ಗಾಳಿಯ ಮಾ ೫
ರ್ಗ ಇಂಥದ್ದೆಂದೂ ಗರ್ಭಿಣಿಯ ಉದರದಲ್ಲಿ ಎಲುಬುಗಳು ಹೇಗೆಂದೂ ನೀ
ನು ತಿಳಿಯದಿರುವ ಹಾಗೆ ಸಕಲವನ್ನು ಮಾಡುವ ದೇವರ ಕ್ರಿಯೆಯನ್ನು
ನೀನು ತಿಳಿಯುವದಿಲ್ಲವಲ್ಲ. ಬೆಳಗ್ಗೆ ನಿನ್ನ ಬೀಜವನ್ನು ಬಿತ್ತು; ಸಂಜೆಗೆ ಸಹ ೬
ನಿನ್ನ ಕೈ ವಿಶ್ರಮಿಸದಿರಲಿ! ಇದೋ, ಅದೋ ಯಾವದು ಫಲಿಸುವದೆಂದೂ
ಎರಡೂ ಒಂದೇ ಪ್ರಕಾರ ಒಳ್ಳೇದಾಗುವದೋ, ಎಂದೂ ತಿಳಿಯುವದಿಲ್ಲವಲ್ಲ.
ಬೆಳಕು ಮಧುರವು, ಆದಿತ್ಯನನ್ನು ನೋಡುವದು ಕಣ್ಣಿಗೆ ಒಳ್ಳೇದಾಗಿ ೭
ದೆ. ಆದರೆ ಮನುಷ್ಯನು ಬಹಳ ವರುಷ ಬದುಕಿದ್ದರೂ ಎಲ್ಲಾದರಲ್ಲಿಯೂ ೮
ಆತನು ಸಂತೋಷಿಸಿ ಅಂಧಕಾರ ದಿವಸಗಳನ್ನು ಬಹಳವಾಗುವದೆಂದು
ಜ್ಞಾಪಕ ಮಾಡಿಕೊಳ್ಳಲಿ! ಬರುವದೆಲ್ಲಾ ಮಾಯವೇ. — ಯೌವನಸ್ಥನೇ, ೯
ನಿನ್ನ ಬಾಲ್ಯದಲ್ಲಿ ಸಂತೋಷಪಡು, ನಿನ್ನ ಯೌವನದ ದಿವಸಗಳಲ್ಲಿ ಹೃದಯ
ವು ನಿನ್ನನ್ನು ಸುಖಪಡಿಸಲಿ, ನಿನ್ನ ಮನಸ್ಸಿನ ಮಾರ್ಗಗಳಲ್ಲಿಯೂ ಕಣ್ಣುಗಳ ದೃಷ್ಟಿ
ಯಲ್ಲಿಯೂ ನಡೆದುಕೋ, ಆದರೆ ಇವು ಎಲ್ಲಾದರಿಂದಲೂ ದೇವರು ನಿನ್ನನ್ನು ನ್ಯಾ
ಯತೀರ್ಪಿಗೆ ಎಳೆಯುವನೆಂದು ತಿಳಿದುಕೋ! ಹೃದಯದಿಂದ ವ್ಯಸನವನ್ನು ೧೦

ಅಗಲಿಸಿ ಮಾಂಸದಿಂದ ಕೇಡನ್ನು ಹೋಗಲಾಡಿಸು; ಬಾಲ್ಯವೂ ಅರುಣ್ಯವೂ
ದಯವೂ ಮಾಯೆಯಾಗಿದೆಯಲ್ಲ.

೧೨ನೇ ಸಂಧಿ.

೧ ನಿನ್ನ ಯೌವನ ದಿನಗಳಲ್ಲಿ ನಿನ್ನ ಸೃಷ್ಟಿಕರ್ತನನ್ನು ನೆನಸು, ಕೇಡಿನ ದಿವಸಗಳು ಬ
ರುವದಕ್ಕೂ ಇವುಗಳಲ್ಲಿ ನನಗೆ ಇಷ್ಟವೇನೂ ಇಲ್ಲವೆಂಬ ನೀನು ಹೇಳುವ ದಿನಗಳು
೨ ಹತ್ತಿರ ಬರುವದಕ್ಕೂ ಮೊದಲೇ! ಸೂರ್ಯನೂ ಬೆಳಕೂ ಚಂದ್ರ ನಕ್ಷತ್ರಗಳು
ಕತ್ತಲಾಗಿ ಹೋಗುವದಕ್ಕೂ ಮಳೆಗರೆದು ಮೋಡಗಳು ತಿರಿಗಿ ಬರುವದಕ್ಕೂ ಮೊ
೩ ದಲೇ; ಮನೆಯ ಕಾವಲಿಗಾರರು ನಡುಗಿ ಸ್ಥಿರ ಬಲವಂತರು ಬಾಗ್ಗಿ ಬೀಸುವ
ವರು ಕಮ್ಮಿಯಾಗುವಷ್ಟು ಕೆಲಸ ಬಿಟ್ಟು ಬಿಟ್ಟು ಕಿಟಿಕಿಗಳಿಂದ ನೋಡುವ
೪ ವರು ಕತ್ತಲಾಗಿ, ಬೀಸುವ ಶಬ್ದ ಕುಂದುತ್ತಲೇ ಬೀದಿಯ ಕದಗಳು ಮುಚ್ಚಿ
ಗುಬ್ಬಿಯ ಶಬ್ದಕ್ಕೆ ಎದ್ದು ಹಾಡು ಗಾರ್ತಿಗಳೆಲ್ಲಾ ಮುಗಿಸುವ (ಹಿಂದಕ್ಕೆ ಸರಿಯು
೫ ವ) ದಿನದಲ್ಲೇ. ಎತ್ತರವಿಕೆಗೂ ಅವರು ಭಯ ಪಡುವವರು, ಮಾರ್ಗದಲ್ಲಿ ಭೀತಿ
ಪ್ರಾಣಗಳು (ನ್ಯಾಯವಾಗಿ) ಬಾದಾಮಿ ಹೂತು ಮಿಡತೆಗಳು ಹೊರೆಯಾಗಿ ಮ
ನಸೋ ರಥವ ಮೊಸಗಾಗುವದು; ಯಾಕಂದರೆ ಮನುಷ್ಯನು ತನ್ನ ನಿತ್ಯ ಭವನ
೬ ಕ್ಕೆ ಹೋಗುತ್ತಾನೆ. ಗೋಳಾಡುವವರು ಬೀದಿಯಲ್ಲಿ ತಿರುಗಾಡುತ್ತಾರೆ; ಬೆಳ್ಳಿ
ಯ ನೂಲು (ಉಡುದಾರ) ಮುರಿದು ಚಿನ್ನದ ಮಡಿಕೆ ಒಡೆದು ಬುಗ್ಗೆಯಲ್ಲಿ ಕೊಡ ಮು
೭ ರಿದು ಬಾವಿಯಲ್ಲಿ ಚಕ್ರ ಒಡೆದು, ಧೂಳಿಯು ಇದ್ದ ಹಾಗೆ ಭೂಮಿಗೆ ತಿರಿಗಿ
ಆತ್ಮವು ಕೊಟ್ಟ ದೇವರ ಕಡೆಗೆ ಹಿಂದಿರುಗುವದಕ್ಕೆ ಮೊದಲೇ. (ನೆನಸು.)
೮ ಹಾ! ಮಾಯೆಗಳ ಮಾಯೆ ಎಂದು ಸಭಾ ಪ್ರಸಂಗಿ ಹೇಳುತ್ತಾನೆ. ಎಲ್ಲವೂ
ಮಾಯೆಯೇ. (೧೨.)

ಸಮಾಪ್ತಿ.

(ಅ) ಜ್ಞಾನಸಾಧಕನ (ಪ್ರ)ಬೋಧನೆಯ ಕಾರ್ಯವು ಏನಂದರೆ. (೧೧)
ನ್ಯಾಯ ವಿಧಿಯನ್ನು ನೆನಸಿ ದೇವಭಕ್ತಿಯನಡಸೆ.

ತರುವಾಯ-ಸಭಾ(ಪ್ರ)ಸಂಗಿ ಜ್ಞಾನಿಯಾಗಿದ್ದದ್ದಲ್ಲದೆ ಜನರಿಗೆ ತಿಳುವಳಿಕೆಯನ್ನು ೯
ಕಲಿಸಿ ತೂಗಿ ಆರಾಯುತ್ತ ಅನೇಕ ಸಾಮತಿಗಳನ್ನು ರಚಿಸಿದನು. ಸಭಾ(ಪ್ರ) ೧೦
ಸಂಗಿ ಇಷ್ಟವಚನಗಳನ್ನು ನೆಟ್ಟನೆತನದಿಂದ ಬರೆದ ಸತ್ಯವಾಕ್ಯಗಳನ್ನು ಕಂಡು
ಕೊಳ್ಳಲಿಕ್ಕೆ ಹುಡುಕಿದನು. ಜ್ಞಾನಿಗಳ ಮಾತುಗಳು ಅಂಕುಶಕ್ಕೂ ಮೊಳೆಗಳಿಗೆ ೧೧
ಕೂಡಿಸಿದ ಜಡಿದ ಮೊಳೆಗಳಿಗೂ ಹೋಲುವವು, ಒಬ್ಬ ಕುರುಬನಿಂದ ಕೊಡ
ಲ್ಪಟ್ಟವೆ.

ಇಂದಾಗಿ ನನ್ನ ಮಗನೆ, ಬುದ್ಧಿಯನ್ನು ಕೇಳು, ಬಹುಪುಸ್ತಕಗಳನ್ನು — ೧೨
ಮಾಡುವದಕ್ಕೆ ಅಂತ್ಯವಿಲ್ಲ. ಅಧಿಕ ವಿದ್ಯಾಭ್ಯಾಸವು ಮಾಂಸಕ್ಕೆ ಆಯಾ
ಸವು. ಎಲ್ಲಾ ಕೇಳಿದ ನಂತರ ಕಾರ್ಯದ ಒಟ್ಟುಫಲ (In Mal ಜಾಮುಲ) ೧೩
ಏನಂದರೆ: ದೇವರನ್ನು ಭಯಪಟ್ಟು ಅವನ ಅಪ್ಪಣೆಯನ್ನು ಕಾದು
ಕೊ, ಇದು ಎಲ್ಲಾ ಮನುಷ್ಯನಿಗೂ ಬೇಕಾದದ್ದಲ್ಲವೋ. ಯಾಕಂದರೆ ಒಳ್ಳೆ ೧೪
ದಾದರೂ ಕೆಟ್ಟದ್ದಾದರೂ ಎಲ್ಲಾ (ಕೃ)ತ್ಯವನ್ನು ದೇವರು ಮರೆಯಾದದ್ದ
ಕ್ಕೆಲ್ಲಾದಕ್ಕೂ (ನಡಿಸುವ) ನ್ಯಾಯ ವಿಧಿಯಲ್ಲಿ ಬರ ಮಾಡುವನು.

[illegible]

I. [illegible] (—೨, ೬)

[illegible]

[illegible]

೧. [illegible]

೨ [illegible]

೩ [illegible]

೪ [illegible]

೫. [illegible]

೬ [illegible]

೧ನೇ ಸಂಧಿ.

ತೋಟಗಳಲ್ಲಿ ಕಾವಲುಗಾರಳಾಗಿ ಇಟ್ಟರು, ಸ್ವಂತ ತೋಟವನ್ನು ಮಾತ್ರ ನಾನು ಕಾ
ಯಲಿಲ್ಲ. ನನ್ನಾತ್ಮ ಸ್ನೇಹಿತನೇ, ನೀನು ಎಲ್ಲಿ ಮೇಯಿಸುತ್ತೀ. ನಿನ್ನ ಗೆಳೆಯರ ೭
ಕುರಿಹಿಂಡುಗಳ ಬಳಿಯಲ್ಲಿ ನಾನು ಮುಸುಕು ಹಾಕಿದ (ಸ್ತ್ರೀ)ಯಂತೆ ಅಲೆದಾಡುವ
ದಕ್ಕೆ ನೀನು ಮಧ್ಯಾಹ್ನಕ್ಕೆ ಮಲಗುವಂತೆ ಮಾಡುವ ಸ್ಥಳವನ್ನು ನನಗೆ ತಿಳಿಸು! (ಗೆಳೆ ೮
ಯರು) ಸ್ತ್ರೀಗಳಲ್ಲಿ ಅತಿ ಸುಂದರಿಯೇ, ನೀನು ತಿಳಿಯದಿದ್ದರೆ ಕುರಿಗಳ ಹೆಜ್ಜೆ
ಗಳನ್ನು ಹಿಡಿದುಕೊಂಡು ಕುರುಬರ ಗುಡಾರಗಳ ಸಮೀಪದಲ್ಲಿ ನಿನ್ನ ಕುರಿಮರಿ
ಗಳನ್ನು ಮೇಯಿಸಿಕೋ!

(ಸೊಲೊಮೋನ) ನನ್ನ (ಪ್ರಿಯ)ಳೇ, (In Mal ಇಷ್ಟೆಯೇ,) ಫರೋನನ ರಥದಲ್ಲಿ ೯
ಇರುವ ಕುದುರೆಗೆ ನಾನು ನಿನ್ನಲ್ಲಿ ಸಾದೃಶ್ಯವನ್ನು ಕಂಡೆನು. ಸರಪಳಿಗಳಲ್ಲಿ ನಿ ೧೦
ನ್ನ ದವಡೆಯು ಕಂಠಮಾಲೆಗಳಲ್ಲಿ ಕೊರಳೂ ಎಷ್ಟೋ ರಮ್ಯವಾಯಿತು. ನಾವು ನಿ ೧೧
ನಗೆ ಚಿನ್ನದ ಸರಗಳನ್ನು ಬೆಳ್ಳಿಯ ಬೊಟ್ಟುಗಳು ಕೂಡ ಮಾಡಿಸುವೆವು.

(ಶೂಲಮಿತ್ತಿ) ಅರಸನು ಮೇಜಿನ ಸುತ್ತ ಇರುವವರೆಗೆ ನನ್ನ ಜಟಾಮಾಂಸಿ ಸು ೧೨
ಗಂಧವನ್ನು ಹೊರಡಿಸಿದೆನು. ನನ್ನ (ಪ್ರಿಯ)ನು ನನಗೆ ಸ್ತನ ಮಧ್ಯದಲ್ಲಿರುವ ೧೩
ಬೋಳದ ಚೀಲದ ಹಾಗಿದ್ದಾನೆ. ಎಂಗದಿಯ ತೋಟಗಳಲ್ಲಿ ಪಚ್ಚೆ ತೆನೆಯ ಹಾಗೆ ೧೪
ಯೂ ನನಗೆ (ಪ್ರಿಯ)ನು ಆಗಿರುತ್ತಾನೆ. (ಸೊಲೊಮೋನ) ಇಗೋ, ನನ್ನ (ಪ್ರಿಯ)ಳೇ! ೧೫
ನೀನು ಸುಂದರಿ, ಇಗೋ, ಸುಂದರಿ, ನಿನ್ನ ಕಣ್ಣುಗಳು ಪಾರಿವಾಳಗಳೇ.

(ಶೂಲಮಿತ್ತಿ) ಇಗೋ, ನನ್ನ (ಪ್ರಿಯ)ನೇ, ನೀನು ಸುಂದರನು ಮನೋಹರನೂ ೧೬
ಆಗಿದ್ದೀ. ನಮ್ಮ ಶಯನವು ಹಸುರು ಗಾವಲು, ನಮ್ಮ ಮನೆಗಳ ತೊಲೆಗಳು ೧೭
ದೇವದಾರುಗಳೂ ಮಚ್ಚಿಗೆ ತುರಾಯಿ ಮರಗಳೂ ಆಗಿವೆ. ನಾನು ಶಾರೋನಿನ ಕುಸುಮ— ೨, ೧.
ಅರಳಿ ಹೂವು, ತಗ್ಗುಗಳ ತಾವರೆಯೂ ಆಗಿದ್ದೇನೆ.

೧೫.

೨ನೆ ಸಂಧಿ.

೧ (ನೇಪಥ್ಯೇ) ಮನುಷ್ಯರ ಮಧ್ಯದಲ್ಲಿ ರಾಜನೇ ಶ್ರೇಷ್ಠನು, ಹಾಗೆ ಬಾಲೆ
೨ ಯರಲ್ಲಿ ನನ್ನ (ಪ್ರಿ)ಯಳು. (ಶಕುಂತಲೆ) ಕಾಡು ಮರಗಳಲ್ಲಿ ಸಾರಂಗವು ಶ್ರೇಷ್ಠವು,
ಹಾಗೆಯೇ ಬಾಲೆಯರಲ್ಲಿ ನನ್ನ (ಪ್ರಿ)ಯಳು. ಈ ನೆರಳಲ್ಲಿ ಸುಖವು ಕಾಣುತ್ತಿದ್ದ ನಾನು ಈಚೆ
೪ ಬೆನು, ಅವರ ಧ್ಯಾನ ನನ್ನ ಬಾಯಿಗೆ ಮಧುರ. ಈತನು (ದು)ಷ್ಯಂತನು ಮನೆಗೆ ನನ್ನ
೫ ನ್ನು ಹೋಗಿಸಿದನು. ನನ್ನ ಮೊಲೆಗಳ ಈತನ ದೃಷ್ಟಿಯು ಹೋಯಿತು. ನಾನು ಕಾಮನ್ಯದ
ಲ್ಲಿಗೆ ಇರುವದರಿಂದ (ದು)ಷ್ಯಂತನಿಗೆಲ್ಲ ಕಾಣ್ಬ ಸಮದಾಯಿಸರಿ, ಶಿವನಿಗೆಯೆ
೬ ದ ಈಚರಿಸರಿ! ಈತನ ಒಡನೆಯನ್ನು ನನ್ನ ತಲೆಯ ಕೆಳಗೆ ಇರಿಸಿ ಬಿಟ್ಟ
೭ ನನ್ನನ್ನು ಈಕ್ಷಿಸುವ ಮಾಡುತ್ತಿರುತ್ತದೆ. ಒಳ್ಳ, ಅಯಿರಾವತೆ, ಬಿಳಿ ಸುಮುಖ
ಗಳು. (ಪ್ರಿ)ಯನೇ ಇಷ್ಟವಾಗುವವರಿಗೆ ಒಬ್ಬಿಸಬೆಳೆದರಿ, ಒಬ್ಬರಿಸಬೆಳೆದರಿ. ರಾಜ
ದಲ್ಲಿರುವ ಬಿಂಕಿಗಳನ್ನು ಮೃಗಗಳನ್ನು ನಾನು ಇನ್ನು ಹಾಕಿ ಬೆಳೆದಿ ಕಾಣುತ್ತೇನೆ.

II. ಅಂಕೊನ್ನ ರಮಣೀಯ.

(– ೨, ೫.)

ಶಕುಂತಲೆ ದೊರೆಯಲ್ಲಿ ಮಾಸಿಸ (ಪ್ರಿ)ಯನು ಬರುವಂಥಾದ್ದು ಕಂಡು (೧೦) ಇಬ್ಬರೂ ಮಾತಾಡಿದ್ದು (೧೫) ಈಗಿಂಯ ಹಾಡಿ (೨, ೧) ವಿವರಿಸಿದ್ದು.

೮ ಹಾ, ನನ್ನ (ಪ್ರಿ)ಯನ ಶಬ್ದವು! ಆಗೋ, ಮವ್ವೆಗಳಲ್ಲಿ ಹಾರಿ ಗುಡ್ಡಗಳ
೯ ಮೇಲೆ ಸುಗಿಯುತ್ತ ಬರುತ್ತಾನೆ. ನನ್ನ (ಪ್ರಿ)ಯನು ಜಿಂಕೆಗೆ ಅಥವಾ ಮಪ್ಪುಮರಿಗೆ
ಸಮನು. ಇಗೋ, ಇವತ್ತಿಗೆ ಹೊರಗೆ ನಿಂತು ಕಿಟಿಕಿಗಳಲ್ಲಿ ನೋಡಿ ಜಾಲಂದರ
೧೦ ಗಳಿಂದ ಕಾಯುತ್ತಿರುತ್ತಾನೆ. (ಪ್ರಿ)ಯನು ನನ್ನ ಸಂಗಡ ಮಾತಾಡಿದನು: ನನ್ನ (ಪ್ರಿ)
೧೧ ಯಳೇ, ನನ್ನ ಸುಂದರಿಯೇ, ಎದ್ದು ಬಾ! ಇಗೋ, ಚಳಿಗಾಲವು ದಾಟಿತು, ಮಳೆ
೧೨ ಯು ನಿಂತು ಹೋಯಿತು, ಪುಷ್ಪಗಳು ನೆಲದಲ್ಲಿ ಕಾಣುತ್ತವೆ. ಹಾಡಿನ ಸಮಯ

ವೆ-ಸಮೀಪಿಸಿತು: ಬೆಳವದ ಶಬ್ದವು ನಮ್ಮ ಊರಲ್ಲಿ ಕೇಳಬಂತು. ಅಂಜೂರದ ೧೩
ಗಿಡವು ತನ್ನ ಕಾಯಿಗಳನ್ನು ಕೆಂಪಗೆ ಮಾಡುತ್ತದೆ. ದ್ರಾಕ್ಷೆ ಗಿಡಗಳು ಹೂ ಬಿಟ್ಟು
ಸೌರಭ್ಯವನ್ನು ಚೆಲ್ಲುತ್ತವೆ. ನನ್ನ ಪ್ರಿಯಳೇ, ನನ್ನ ಸುಂದರಿಯೇ ಎದ್ದು ತಿರುಗಾಡು!
ಎಲಾ, ಬಂಡೆಯ ಬಿರುಕುಗಳಲ್ಲಿಯೂ ಬೆಟ್ಟದ ಮರೆಯಲ್ಲಿಯೂ ಇರುವ ನನ್ನ ೧೪
ಪಾರಿವಾಳವೇ! ನಿನ್ನ ರೂಪವನ್ನು ಪ್ರತ್ಯಕ್ಷ ತೋರಿಸಿ ಸ್ವರವನ್ನು ಕೇಳಿಸು. ನಿನ್ನ ಸ್ವರವು
ಮಧುರವೂ ರೂಪವು ಮನೋಹರವೂ ಆಗಿದೆಯೆಂದು ಹೇಳಿದನು. (ನ ೧೫
ಅಮುಕ್ತಿ ಮಾಡುವರು.) ನರಿಗಳನ್ನು ಹಿಡಿಯಿರಿ, ದ್ರಾಕ್ಷೆ ತೋಟಗಳನ್ನು ಹಾಳು
ಮಾಡುವ ಸಣ್ಣ ನರಿಗಳನ್ನು (ಹಿಡಿಯಿರಿ). ನಮ್ಮ ತೋಟಗಳು ಹೂವು ಬಿಡುತ್ತವಲ್ಲ!
ನನ್ನ ಪ್ರಿಯನು ನನವನು ನಾನು ಅವನವಳು. ಇರುವಂಥವನು. ತಾವರೆಗಳ ಮಧ್ಯ ೧೬
ದಲ್ಲಿ ಮೇಯಿಸುವವನಿಗೆ. ಹೊತ್ತು ತಂಪಾಯಿತು, ಬಿಸಿಲಾರಿತು, ನೆರಳುಗಳು ಓ
ಡಿ ಹೋಗುವ ವರೆಗೆ ನನ್ನ ಪ್ರಿಯನೆ, ನೀನು ತಿರುಗಿ ಜಿಂಕೆಗೆ ಅಥವಾ ದುಪ್ಪಿಯ
ಮರಿ ಹುಲ್ಲೆಗೆ (ಎ.) ಶಿಖರವಾಗಿರುವ ಪರ್ವತಗಳನ್ನು ದಾಟಿ ಬಾ!

೩ನೆ ಸಂಧಿ.

ರಾತ್ರಿಗಳಲ್ಲಿ ಹಾಸಿಗೆಯ ಮೇಲೆ ನಾನು (ಸ್ವಪ್ನದಲ್ಲಿ) ಆತ್ಮಸ್ನೇಹಿತನನ್ನು ಹು ೧
ಡುಕಿದೆನು. ಹುಡುಕಿದರೂ ಅವನನ್ನು ಕಾಣಲಿಲ್ಲ. ನಾನು ಎದ್ದು ಹೋದೆ. ಪ ೨
ಟ್ಟಣದಲ್ಲಿ ಬೀದಿಗಳಲ್ಲಿ ಸಂಚರಿಸಿ ಆತ್ಮಸ್ನೇಹಿತನನ್ನು ಹುಡುಕುವೆ! ಎಂದ್ಯೋಚಿ
ಸಿದರೂ ಸಿಕ್ಕಲಿಲ್ಲ. ಪಟ್ಟಣದಲ್ಲಿ ಸಂಚರಿಸುವ ಕಾವಲುಗಾರರು ನನ್ನನ್ನು ಕಂಡು
ಕೊಂಡರು, ~~#~~ ನನ್ನಾತ್ಮಸ್ನೇಹಿತನನ್ನು ನೀವು ಕಂಡಿರಾ? ಎಂದು ಅವರನ್ನು ಬಿಟ್ಟು ೩
ಸ್ವಲ್ಪ ಆಚೆಗೆ ಹೋಗಲು ಆತ್ಮಸ್ನೇಹಿತನನ್ನು ನಾನು ಕಂಡುಕೊಂಡೆನು. ಅವ ೪
ನನ್ನು ಹಿಡಿದು ಮಾತೃಭವನದಲ್ಲಿ ಜನನಿಯ ಕೊಠಡಿಗೆ ಕರೆತರುವ ವರೆಗೆ
ಬಿಡದೆ ಇದ್ದೆನು. (ತವ) ಎಲಾ, ಯೆರೂಸಲೇಮಿನ ಕುಮಾರ್ತೆಗಳೇ, ಪ್ರೇಮವು ೫

(ಪ್ರೀತಿಯು) ಇಷ್ಟವಾಗುವವರೆಗೆ ಎಬ್ಬಿಸಬೇಡಿರಿ, ಎಚ್ಚರಿಸಬೇಡಿರಿ. ಹೊಲದಲ್ಲಿರುವ ಹೆಣ್ಣು ಜಿಂಕೆಗಳನ್ನೂ ಹುಲ್ಲೆಗಳನ್ನೂ ನಾನು ಆಣೆಯಿಟ್ಟು ಬೇಡಿಕೊಳ್ಳುತ್ತೇನೆ. (೨,೭)

III. ಮದುವೆ. (— ೫,೧.)

ಸೊಲೊಮೋ ಶುಲಮಿತ್ತಿಗೆ ಮದುವೆ ನಿಶ್ಚಯಿಸಿ ಆಡಂಬರದಿಂದ ನಗರಪ್ರವೇಶವನ್ನು ಮಾಡಿದನಂತರ ಆದ್ಯಸಂಗಡ ಅಂದು (೫,೧) ಮರುದಿನ ಉತ್ಸವದಲ್ಲಿಯೂ ಹಾಡಿದ್ದು.

೬ ಆಹಾ, ಮರುಭೂಮಿಯಿಂದ ಹೊಗೆಯ ಸ್ತಂಭಗಳಂತೆ, ಮರಿ ಬೋಳ ಸಾಂಬ್ರಾಣಿ ಮುಂತಾದ ವರ್ತಕ ಚೂರ್ಣದಿಂದಿರುವ ಧೂಪದಿಂದಲೂ ಏರಿಬರುವಾಕೆ ಯಾರು? ಆಹಾ,

೭ ಸೊಲೊಮೋನನ ಶಿಬಿಕೆ (In Mal ಶಿವಿಗ = Palanquine) ಇದು; ಇಸ್ರಾಯೇಲಿನ ವೀರರಲ್ಲಿ ಅರುವತ್ತು ಶೂರರು ಅದರ ಸುತ್ತಲು ಇದ್ದಾರೆ,

೮ ಅವರೆಲ್ಲರೂ ಆಯುಧಧಾರಿಗಳು, ಯುದ್ಧಶಿಕ್ಷಿತರು, ರಾತ್ರಿಯ ಭಯದ ನಿಮಿತ್ತ ಒಬ್ಬೊಬ್ಬನ ಸೊಂಟದಲ್ಲಿ ಖಡ್ಗ (ನೇಡುಕದೆ),

೯ ಪಾಲಕಿಯನ್ನು ಸೊಲೊಮೋ ಅರಸನು ಲೆಬನೋನಿನ ಮರಗಳಿಂದ ಮಾಡಿಸಿದನು;

೧೦ ಸ್ತಂಭಗಳು ಬೆಳ್ಳಿಯವು; ಕೈಹಾಕುವ ಚಿನ್ನ, ಹಾಸಿಗೆ ರತ್ನಾಂಬರದಿಂದ ಮಾಡಿಸಿದನು. ಮಧ್ಯ ಅಡಿಗಳು ಯೆರೂಸಲೇಮು ಪುತ್ರಿಗಳ ಸ್ನೇಹದಿಂದ ಅಲಂಕರಿಸಲ್ಪಟ್ಟದ್ದು.

೧೧ ಚೀಯೋನಿನ ಕುಮಾರ್ತೆಗಳೇ, ನೀವು ಹೊರಟು ಸೊಲೊಮೋ ರಾಜನನ್ನು ನೋಡಿರಿ! ಆ ಕಿರೀಟವನ್ನು ಆತನ ಹೃದಯಸಂತೋಷ ದಿನವಾಗಿರುವ ಮದುವೆ ದಿನದಲ್ಲಿ ತಾಯಿಯು ತೊಡಿಸಿದ್ದಾಳೆ.

೪ನೆ ಸಂಧಿ.

೧ (ಸೊಲೊಮೋ.) ಇಗೋ ನನ್ನ ಪ್ರಿಯಳೇ, ನೀನು ಸುಂದರಿ, ಆಹಾ ಸುಂದರಿ (೧,೧೫), ಮುಸುಕಿನೊಳಗಿಂದ ಪಾರಿವಾಳದ ಕಣ್ಣುಗಳಂತೆ ತೋರುತ್ತದೆ.

೨ ನಿನ್ನ ಕೂದಲು (ತಲೆ) ಗಿಲ್ಯಾದ ಪರ್ವತದಲ್ಲಿ ಮೇಯುವ ಮಂದೆಗೆ ಹೋಲ್ತದೆ. ನಿನ್ನ

ಹಲ್ಲುಗಳು ಕತ್ತರಿಸಿ ಮೀಯುವದರಿಂದ ಏರಿಬರುವ ಕುರಿಮಂದೆಗೆ ಸಮ, ಅದರ
ಲ್ಲಿ ಬಂದಾಗಲೂ ಅವಳಿ ಜವಳಿ ಈದದ್ದೂ ಮರಿಗಳು ಕಳಕೊಳ್ಳದ್ದೂ ಇಲ್ಲದಿರುತ್ತದೆ.
ನಿನ್ನ ತುಟಿಗಳು ಕೆಂಪು ನೂಲಿಗೆ ಒಪ್ಪುವಂಥಾದ್ದು ಬಾಯಿ ರಮ್ಯವಾಗಿಯೂ ಇದ್ದು ೩
ಇರುತ್ತದೆ. ಮುಸುಕಿನ ಒಳಗಿನ (ಕೆಂಪು) ಕದಪು ದಾಳಿಂಬೆ ಹಣ್ಣಿನ
ಹೋಳಿನ ಹಾಗೆ ತೋರುತ್ತದೆ. ಆಯುಧಗಳಾಗಿ ಕಟ್ಟಿದ್ದಾಗಿ ವೀರರನ್ನು ಪಾರುಮಾಡುವ ೪
ಸಾವಿರ ಗುರಾಣಿಗಳನ್ನು ತೂಗಿಸಿರುವ ದಾವೀದನ ಗೋಪುರದಂತೆ ನಿನ್ನ ಕುತ್ತಿ
ಗೆಯು. ಸ್ತನ ಯುಗ್ಮ ಕಮಲಗಳ ಮಧ್ಯದಲ್ಲಿ ಮೇಯುವ ಜೋಡು ಜಿಂಕೆಯ ೫
ಮರಿಗಳಿಗೆ ಸಮ.

(ಕುಲಮುಕ್ತಿ) ಹೊತ್ತು ಹೋಗಿ ಬಿಸಿಲು ನೆರಳುಗಳು ಓಡಿಹೋಗುವವರೆ ೬
ಗೆ (೨,೧೭) ನಾನು ರಕ್ತಬೋಳದ ಹೂವಿನ ಪರ್ವತಕ್ಕೂ ಸಾಂಬ್ರಾಣಿಯ ಗುಡ್ಡಕ್ಕೂ
ಹೋಗುವೆ!

(ನಾಯಕನು) ನನ್ನ ಪ್ರಿಯಳೇ, ನೀನು ಕಲೆ ಏನೂ ಇಲ್ಲದೆ ಸರ್ವಾಂಗಸುಂ ೭
ದರಿಯಾಗಿದ್ದೀ. ನನ್ನ ವಧುವಾದ ಕಾಂತೆ, ನೀನು ಲೆಬನೋನನ್ನು ಬಿಟ್ಟು ನನ್ನ ಸಂಗಡ ೮
ಲೆಬನೋನಿಂದ ಬಾ; ಸಿಂಹಗಳ ಗವಿಗಳು ಚಿರತೆಯ ಪರ್ವತಗಳು ಉಳ್ಳ
ಅಮಾನಾಗಿರಿಯಿಂದಲೂ ಸೆನೀರ ಹೆರ್ಮೋನಿನ ಶಿಖರಗಳಿಂದಲೂ ನೋಡಿ ಕಾಣು. ೯
ಕಾಂತೆಯಾದ ಸಹೋದರಿಯೇ, ನೀನು ನನ್ನ ಹೃದಯವನ್ನು ಅಪಹರಿಸಿ ಕಣ್ಣು
ಗಳಲ್ಲಿ ಒಂದರಿಂದಲೂ ಕುತ್ತಿಗೆಯ ಸರಗಳಲ್ಲಿ ಒಂದರಿಂದಲೂ
ನನ್ನ ಹೃದಯ ಹರಿಸಿದಿ. ಕಾಂತೆಯಾದ ಸಹೋದರಿಯೇ ನಿನ್ನ ಪ್ರೇಮವು ಎ ೧೦
ಷ್ಟು ಶೋಭಿತೆಯುಳ್ಳದ್ದು! ದ್ರಾಕ್ಷಾರಸಕ್ಕಿಂತ ನಿನ್ನ ಪ್ರೇಮವು ಎಲ್ಲಾ ಸುಗಂಧಗ
ಳಿಗಿಂತ ನಿನ್ನ ತೈಲ ವಾಸನೆಯೂ ಎಷ್ಟು ಒಳ್ಳೆಯದು. ಹೇ, ಕಾಂತೆ, ನನ್ನ ಅಧರ ೧೧
ಗಳು ಮಧುವನ್ನು ಸುರಿಸುತ್ತವೆ. ನಾಲಿಗೆಯ ಅಡಿಯಲ್ಲಿ ಜೇನೂ ಹಾಲೂ
ಉಂಟು. ನಿನ್ನ ವಸ್ತ್ರದ ವಾಸನೆಯು ಲೆಬನೋನಿನ ವಾಸನೆಯಂತೆಯಾಗಿದೆ.

೧೨ ಶಾಂತಿಯಾದ ಸರೋವರದ ಅಲೆಯು ಮುಚ್ಚಿದ ತೋಟವು, ಮುಚ್ಚಿದ ಬುಗ್ಗೆಯು, ಮು

೧೩ ಮುದ್ರೆ ಹಾಕಿದ ಒರತೆಯು ಆಗಿದ್ದಾಳೆ. ನಿನ್ನಲ್ಲಿ ಬೆಳೆಯುವ ಉಂಟಾಗುವವು ಉತ್ತ ಮ ಹಣ್ಣುಗಳುಳ್ಳ ದಾಳಿಂಬೆ ತೋಟವೂ ಕರ್ಪೂರ ಜಟಾಮಾಂಸಿ ಪತ್ರೆ

೧೪ ಯೂ, ಕುಂಕುಮ ಬಜೆ ಲವಂಗ ಚಕ್ಕೆ ವಿಧ ಸಾಂಬ್ರಾಣಿ ಗಿಡಗಳು ಬೋಳವೂ ಅಗರು ಮುಂತಾದ ಸುಗಂಧ ಜಾತಿ ಪದಾರ್ಥಗಳು ಇರುವ ಉಪವನವು.

೧೫ ತೋಟಗಳಿಗೆ ಬೇಕಾದ ನೀರು ಉಕ್ಕುವ ಬುಗ್ಗೆಯೂ ಲೆಬನೋನಿಂದ ಹರಿಯುವ ದ

೧೬ ಹನಿಗಳೂ (In Mal ಬೀಳುವ ಹಾಗೆ Waterfall) ಆಗಿವೆ; (ಶುಲಮ್ಮಿತಿ) ಉತ್ತರ ಗಾಳಿಯೇ ನೀ ಎಚ್ಚರವಾಗು ದಕ್ಷಿಣ ಗಾಳಿಯೇ ನೀನು ಬಂದು ನನ್ನ ತೋಟದಲ್ಲಿ ಬೀಸಿ ಅದರ ಸುಗಂಧಗಳನ್ನು ಸುರಿಸಿ ಹಬ್ಬಿಸು.

೧೭. (ಶುಲಮ್ಮಿತಿ) ನನ್ನ ಪ್ರಿಯನು ತನ್ನ ತೋಟದಲ್ಲಿ ಬಂದು ಫಲದಲ್ಲಿ ತನಗೆ ಶ್ರೇಷ್ಠವಾದದ್ದು ತಿನಬೇಕಲಿ.

ಅನ್ಯ ಸಂಧಿ.

೧. (ಸೊಲೊಮೋ.) ನರೋವರಿಯಾದ ಶಾಂತಿಯೇ ನನ್ನ ತೋಟದಲ್ಲಿ ನಾನು ಬಂದು ನನ್ನ ಬೋಳವನ್ನೂ ಸುಗಂಧ ದ್ರವ್ಯವನ್ನೂ ನನ್ನ ಜೇನು ಹುಟ್ಟಿಯ ಸಹಿತ ಮಧುವನ್ನು ತಿಂದು ನನ್ನ ಹಾಲನ್ನೂ ದ್ರಾಕ್ಷಾರಸವನ್ನೂ ಕುಡಿದೆನು. ಹೇ, ಗೆಳೆಯರೇ, ನೀವೂ ತಿಂದು ಕುಡಿದು ಪ್ರೇಮ ಸಂತೋಷದಿಂದ ಮತ್ತರಾಗಿರಿ.

IV. ಪ್ರೇಮ ಬಾಂಧವ್ಯವು ಹೋದದ್ದು. (೫.೨)

ಶುಲಮ್ಮಿತಿಯು ಶಾಂತನನ್ನು ತನ್ನನ್ನಲ್ಲಿ ತರಕೆ ಪಡಿಸದ ಪ್ರೀತಿ ತನ್ನ ಕಿವಿಗೆ ತಿರಸ್ಕಾರ (೩.) ಅವರು ತಪ್ಪಿದ್ದಕ್ಕೆ ಉತ್ತರವಾಗಿ (೪೦) ಶಾಂತನನ್ನು ಬಿಟ್ಟ (೬.೫) ಬಿಡದ ಸ್ನೇಹವನ್ನು ಧೃಢಪಡಿಸದಾಗ (೪) ಅರಸನು ಬಂದು ಅಕೆಯನ್ನು ಸ್ತುತಿಸಿದ್ದು.

೨ ನಾನು ನಿದ್ದೆಗೈದರೂ ಹೃದಯವು ಎಚ್ಚತ್ತಿರುತ್ತದೆ, ಅದೋ, ನನ್ನ ಪ್ರಿಯನು (ಬಾಗಿಲಲ್ಲಿ) ತಟ್ಟುವ ಶಬ್ದ! ಹಾ. ನರೋವರಿಯೇ, ನನ್ನ ಪ್ರಿಯಳೇ, ನನ್ನ

ಪಾರಿವಾಳವೇ, ನನ್ನ ನಿರ್ಮಳಳೇ, ನನಗೆ ತೆರೆ; ತಲೆಯು ಮಂಜಿನಿಂದಲೂ, ಕುರುಳು
ರಾತ್ರಿಯ ಬಿಂದುಗಳಿಂದಲೂ ತೋಯ್ದು ಹೋಯಿತು. ಅಂತಾದರೆ ನಾನು ವಸ್ತ್ರ ಬಿಚ್ಚಿ ೩
ಹ್ಯಾಗೆ ಉಡಲಿ? ನಾನು ತೊಳೆದ ಕಾಲ್ನ ಹ್ಯಾಗೆ ಮೈಲಿಗೆ ಮಾಡಲಿ? ಆದರೆ ನನ್ನ ೪
ಪ್ರಿಯನು ಕದವಿನ ದ್ವಾರದಿಂದ ಕೈಚಾಚಿದಾಗ ನನ್ನ ಕರುಳು ಆತನಲ್ಲಿ ಕರಗಿ
ತು. ಪ್ರಿಯನಿಗೆ ತೆರೆಯಲಿಕ್ಕೆ ನಾನು ಎದ್ದೆನು. ಅಗುಳಿಯ ಹಿಡಿಯ ಮೇಲೆ (ಮಾಟ ೫
ದ) ಬೊಟ್ಟು ನನ್ನ ಕೈಗಳ ಮೇಲೆಯೂ ಉತ್ತಮ ಅಗರು ಬೆರಳುಗಳ ಮೇಲೆ
ಯೂ ಸುರಿಯಿತು. ನಾನು ಪ್ರಿಯನಿಗಾಗಿ ತೆರೆದಾಗ ಆತನು ಹಿಂಜರಿದು ಸರಿದು ೬
ಬಿಟ್ಟನು. ಆತನು ಮಾತಾಡಿದ್ದರಿಂದ ನನ್ನ ಜೀವವು ಹಾರಿಹೋಯಿತು, ಅವನನ್ನು
ಹುಡುಕಿದರೂ ಸಿಕ್ಕಲಿಲ್ಲ, ಕರೆದರೂ ಉತ್ತರ ಕೊಡಲಿಲ್ಲ; ನಗರದಲ್ಲಿ ಸಂಚರಿಸು ೭
ವ ಕಾವಲುಗಾರರು ನನ್ನನ್ನು ಕಂಡು ನನ್ನನ್ನು ಹೊಡೆದು ಗಾಯಮಾಡಿ ಅಲಂ
ಗ ಕಾಯುವವರು ನನ್ನ ಮುಸುಕನ್ನು ಕಸುಕೊಂಡರು.— ಯೆರೂಸಲೇಮಿನ ೮
ಕುಮಾರಿಯರೇ, ನೀವು ನನ್ನ ಪ್ರಿಯನನ್ನು ಕಂಡರೆ ಅವನಿಗೆ ಏನು ತಿಳಿಸ
ಬೇಕು, ನಾನು ಕಾಮ ಮೋಹಿತಳಾಗಿ ಇದ್ದೇನೆಂತ ಆಣೆ ಇಟ್ಟು ಬೇಡಿಕೊಳ್ಳುತ್ತೇ
ನೆ.

(ಕನ್ನಿಕೆಗಳು) ಸ್ತ್ರೀಗಳಲ್ಲಿ ಅತಿಸುಂದರಿಯೇ, ಪ್ರಿಯರಲ್ಲಿ ನಿನ್ನ ಪ್ರಿಯನಿಗೆ ೯
ಏನು ವಿಶೇಷ? (In Mal ವಿಶೇಷತೆ) ~~ಕಂಡು ಹೀಗೆ ಆ~~ ಪ್ರಿಯನಲ್ಲಿ ಏ
ನು ವಿಶೇಷ ಕಂಡು ಹೀಗೆ ಆಣೆ ಇಡುತ್ತೀ?

(ಸುಲಮಿತ್ತಿ) ನನ್ನ ಪ್ರಿಯನು ಧವಳನೂ ಕೆಂಪಗನೂ ಲಕ್ಷ ಮಂದಿಗಿಂ ೧೦
ತ ಪ್ರಮುಖನೂ ಆಗಿರುತ್ತಾನೆ. ಅವನ ತಲೆಯು ಉತ್ತಮ ಬಂಗಾರ; ಅವ ೧೧
ರಂಜಿ, ಕುಂತಲಗಳು ಮಟ್ಟೆ ಸೋಗೆಯಂತೆ ನೀಳವಾದ ಕಾಗೆ ಕಪ್ಪಾಗಿಯೂ ಇರುತ್ತದೆ.
ಕಣ್ಣುಗಳು ತೊರೆಯಲ್ಲಿ ಇರುವ ನೀರಿನ ಕಾಲುವೆಗಳಲ್ಲಿರುವ ಪಾರಿವಾಳಗಳೂ ೧೨
ಹಾಲಿನಿಂದ ತೊಳೆದಿರುವ ಮಣಿಗಳೂ ಹೌದು. ದವಡೆ ಸುಗಂಧ ನೆಟ್ಟ ಮಡಿಯ ಹಾಗೆ ೧೩
ಯೂ ಪರಿಮಳ ಮಣ್ಣುಗಳು ಬೆಳೆಯುವ ಏರಿ (In Mal ... garden-bed in square space wherein the seeds are sown) ಯಂತೆಯೂ ಆಗಿದೆ.

೧೪ ಅಧರಗಳು ಉತ್ತಮವಾದ ಬೋಳವನ್ನು ಸುರಿಯುವ ನೆಲದಾವರೆಗಳು. ಕೈಗಳು ಪುಷ್ಯ
ರಾಗವು ಖಚಿತವಾದ ಚಿನ್ನದ ಕೋಲುಗಳು; ಹೊಟ್ಟೆಯು ನೀಲರತ್ನಗಳು ಹುದುಗಿಸಿದ
೧೫ ನುಣುಪು ಮಾಡಿದ ದಂತವು, ಕಾಲುಗಳು ಚಿನ್ನದ ಗದ್ದಿಗೆಗಳ ಮೇಲೆ ನಿಲ್ಲಿಸಿದ
ಬಿಳಿ ಕಲ್ಲುಕಂಬಗಳು, ರೂಪವು ಲೆಬನೋನಿನ ಸಾದೃಶ್ಯವೂ ದೇವದಾರುಗಳಂತೆ
೧೬ ಶ್ರೇಷ್ಠವೂ ಆಗಿದೆ. ಬಾಯಿ ಅತಿ ಮಧುರವೂ ಆತನಲ್ಲಿ ಸಮಸ್ತವೂ ಮನೋಹರವೂ
ಆಗಿದೆ. ಯೆರೂಸಲೇಮಿನ ಕುಮಾರಿಯರೇ, ಇವನೇ ನನ್ನ ಪ್ರಿಯನು ಇವನೇ
ನನ್ನ ಸ್ನೇಹಿತನು.

೬ನೇ ಸಂಧಿ.

೧. (ಸಖಿಯರು) ಸ್ತ್ರೀಗಳಲ್ಲಿ ಅತಿಸುಂದರಿಯೇ, ನಿನ್ನ ಪ್ರಿಯನು ಎಲ್ಲಿಗೆ ಹೋ
ದನು, ಪ್ರಿಯನು ಎಲ್ಲಿಗೆ ತಿರುಗಿದ್ದಾನೆ, ನಾವು ನಿನ್ನ ಜೊತೆಗೆ ಅವನನ್ನು ಹುಡುಕು
೨ ವಾ! (ಶುಲಮಿತೆ) ನನ್ನ ಪ್ರಿಯನು ತೋಟಗಳಲ್ಲಿ ಮೇಯಿಸುವದಕ್ಕೂ ತಾವರೆಗಳನ್ನು
೩ ಕೀಳುವದಕ್ಕೂ ಸುಗಂಧ ಪಾತಿಗಳಿಗೆ ಇಳಿದು ಹೋಗಿದ್ದಾನೆ. ನಾನು
ನನ್ನ ಪ್ರಿಯನಿಗೂ ಪ್ರಿಯನು ನನಗೂ ಇರುವವರು. ತಾವರೆಗಳ ಮಧ್ಯದಲ್ಲಿ ಮೇ
ಯಿಸುವವನು (೨,೧೬.)

೪. (ಸೊಲೊಮೋ.) ನನ್ನ ಪ್ರಿಯಳೇ, ನೀನು ತಿರ್ಚಾನಗರದಂತೆ ಸೌಂದರ್ಯವೂ,
ಯೆರೂಸಲೇಮಿನಂತೆ ಮನೋಹರವೂ ಧ್ವಜದ ಸೈನ್ಯಗಳಿರುವ ಗಣಗಳಂತೆ ಭ
೫ ಯಂಕರವೂ ಉಳ್ಳವಳು. ನನ್ನನ್ನು ಜಯಿಸ ಮಾಡುವದರಿಂದ ನಿನ್ನ ಕಣ್ಣುಗಳನ್ನು
ನನ್ನ ಕಡೆಯಿಂದ ತಿರುಗಿಸು! ನಿನ್ನ ಕುಂತಲವು ಗಿಲ್ಯಾದ ಪರ್ವತದಲ್ಲಿ ಇರುವ
೬ ಮೇಕೆ ಮಂದೆಗೆ ಹೋಲ್ಲು (೪,೧) ನಿನ್ನ ಹಲ್ಲುಗಳು ಮೀಯುವದರಿಂದ ಏರಿಬ
ರುವ ಕುರಿಮಂದೆಗೆ ಸಮ. ಅದರಲ್ಲಿ ಬಂಜೆಯಾದದು ಅವಳಿ ಜವಳಿ ಇದ್ದದ್ದಾ ಮ
೭ ರಿಗಳು ಕಲ್ಪಸ್ಥವು ಆಗಿದೆ (೪,೨). ಮುಸುಕಿನ ಹಿಂದೆ ನಿನ್ನ ಕಪೋಲವು
೮ ದಾಳಿಂಬರ ಹಣ್ಣಿನ ಹೋಳಿನ ಹಾಗೆ ತೋರುತ್ತದೆ. (೪,೩.) ರಾಣಿಗಳು ಅರುವತ್ತು, ಉ
೯ ಪಪತ್ನಿಗಳು ಎಂಬತ್ತು, ಕನ್ನಿಕೆಯರು ಲೆಕ್ಕವಿಲ್ಲದೆಯೂ ಇರುತ್ತಿರಲಿಕ್ಕೆ, ಒಬ್ಬಳೇ
ನನ್ನ ಪಾರಿವಾಳವೂ ನನ್ನ ನಿರ್ಮಲಳೂ ಆಗಿದ್ದಾಳೆ. ತಾಯಿಗೆ ಒಬ್ಬಳೂ, ಜನನಿಗೆ

ಉಂಟುಪಡಿಸಿದವರೂ (In Mal ಪರಿಷ್ಕೃ) ಆದವರು. ಆನೆಯನ್ನು ಬಾಲೆಯರು ಕಂಡು ಧನ್ಯರೆಂದು ಕೊಂಡಾಡಿದರು, ರಾಣಿಗಳೂ ಉಪಪತ್ನಿಗಳೂ ಕಂಡು ಸಂ-ತಸಿದರು.

V.) ರಾಣಿಯ (ಪ್ರ)ಶ್ನೆಯೂ ವಿನಯವೂ (-೮,೪.)

ಕುಲಮತಿ ಕನ್ನಿಕೆಗಳನ್ನು ಶಿಷ್ಯರನ್ನು ಅಂಗಿಗಳಿಲ್ಲದೆ ರಾಜಕೆ, ಜನ್ನುಮಠದ ತೋಟವನ್ನು ನೋಡುವುದಕ್ಕೆ ಹೋಗಿ (೨,೧) ಕನ್ನಿಕೆಗಳು ಬೇರೆ ಬದಿಯಿಂದ ನಾಟ್ಯವಾಡಿದ ಕಿರುವಾಂಟ (೨) ಅರಸನು ಬಂದು ಸಂತೋಷಿಸಿದ್ದು.

(ಕನ್ನಿಕೆಗಳು) ಇಗೋ, ಚಂ(ದ್ರ)ನೋಡಿಕೆಯೂ ಬಿಸಿಲಿನ (ಪ್ರ)ಕಾಶೆಯೂ ಆಗಿ ಸ್ಥಿರ ೧೦
ದಕ್ಕೆ ಬರುವ ಸ್ವಾಗತ್ವಂತೆ ಶಿಕ್ಷೆಯುಂಟಾಗುವದಾಗಲು (೬,೪.) ಅರ್ಥವಾದ ಯಾರು ಬಂ-ತೆ ಇಲ್ಲಿ ಬೆಳಗುವ ಸಂಪಾದ್ಯ ಯಾರು?

(ಕುಲಮತಿ) ನಾನು ಕಣ್ಣಿನ ಹಸುರು ನೋಡಲಿಕ್ಕೆ (ಧ)ನ್ಯೆ, ಬಲ್ಲ ಬಿಸಿಲಿದೆಯೋ ೧೧
ಮಾದ್ಯಗಳು ಹುಬ್ಬಿದೆಯೋ ಯೆಂತಾ ನೋಡಲಿಕ್ಕೆ (ನೆನಪು) ಆ(ತ್ಮ)ದ ಕೋ-ಟದಲ್ಲಿ ಇದ್ದು ಹೋದಾಗ, ನನ್ನದೇ, ಈಯು ನನ್ನ ಜನರ (ಪ್ರ)ಮೋದವಿಲ(ದೆ), ರಥ- ೧೨
ದ ಮೇಲೆ ನನ್ನನ್ನು ಮಾಡಿದ ಎಂದು ತಿಳಿಯದೆ ಇದ್ದೆನು. ///

(ಕನ್ನಿಕೆಗಳು:) ಹೋ, ಕುಲಮತಿಯೇ, ಕಿರುಸು, ಕಿರುಸು, ನಾವು ನಿನ್ನನ್ನು ನೋಡಲಿಕ್ಕೆ ೨,೧ ಕರೆದ ಬಾ! (ಆನೆಯು) ಕುಲಮತಿಯಲ್ಲಿ ಯೇನು ನೋಡುವದು? (ಕನ್ನಿಕೆಗಳು) ಮಹಾರಾಯನ ನಾಟ್ಯದಂತೆ.

೨ನೇ ಸಂಧಿ.

ಯೆಲಾ, ಉದಾರ ಪು(ತ್ರ)ಯೇ! ಕೆರಗಳಲ್ಲಿ ನಿನ್ನ ನಡೆಗಳು ಎಷ್ಟು ಧಂದವಾ- ೧
ದವುಗಳು! ಕಾಡೆಗಳ ಕಿರುಗಣೆಗಳು ಅನ್ನಸಾಗಿನ ಕೈಗೆಲಸವಾದ ಮುತ್ತು ಕಾ-ವಡವೇ. ನಿನ್ನ ನಾಭಿಯು ದುಂಡಗಿರುವ ಬಟ್ಟಲು. ಅದರಲ್ಲಿ ರಸ ಮದ್ಯವಿರಲಿ ೨

೭ನೆ ಸಂಧಿ

ಯಾಗ ಬಾರದು. ಹೊಟ್ಟೆಯು ತಾವರೆಗಳು ಸುತ್ತಿಕೊಂಡಿರುವ ಹುರುಳ ಗೋಧಿಯ ರಾಶಿ.
೪. ಸ್ತನ ಯುಗ್ಮ ಅವಳಿ ಜಿಂಕೆ ಮರಿಗಳಿಗೆ ಸಮ. (೪,೫.) ಕತ್ತಿನೆಲುಬು ದಂತದ
ಗೋಪುರಕ್ಕೆ, ಕಣ್ಣುಗಳು ಜನಪುಷ್ಟಿಯುಳ್ಳ ಹೆಷ್ಬೋನಿನ ಬಾಗಿಲ ಹತ್ತಿರ ಇದ್ದ ಕೆರೆಗಳು,
೬ ಮೂಗು ದಮಸ್ಕಿನ ಕಡೆಗೆ ನೋಡುವ ಲೆಬನೋನಿನ ಗೋಪುರಕ್ಕೆ ಸಮ. ತಲೆ ನಿನ್ನ
ಮೇಲೆ ನಿಲ್ಲುವದು ಕರ್ಮೇಲು ಎಂಬ ಹಾಗೆ, ನಿನ್ನ ತಲೆ ನಾರು ರಕ್ತಾಂಬರದಂತೆ; ಸುರು
ಳಿನಲ್ಲಿ ಅರಸನು ಕಟ್ಟಲ್ಪಟ್ಟಿದ್ದಾನೆ.
೭ (ಸೊಲೊಮೋ.) ಪ್ರೇಮ ಭೋಗಗಳಲ್ಲಿ ನೀನು ಎಷ್ಟು ಚಂದವೂ ಎಷ್ಟು ಸೊಗಸೂ
೮ ವೂ ಆಗಿದ್ದೀ! ಈ ನಿನ್ನ ಬೆಳೆಯು ವಿಶೇಷ ತಾಳೆ, ಮರಕ್ಕೆ ಮೊಲೆಗಳು ಖರ್ಜೂರ
೯ ಗೊಂಚಲುಗಳಿಗೂ ಸಾದೃಶ್ಯ. ನಾನು ನೆನಸಿದ್ದು ಆ ತಾಳೆ ಮರಕ್ಕೆ ಹತ್ತಿ ಮಟ್ಟೆಗ
ಳನ್ನು ಹಿಡಿಯುವೆ. ನಿನ್ನ ಮೊಲೆಗಳು ನನಗೆ ದ್ರಾಕ್ಷೆ ಬಳ್ಳಿಯ ಗೊಂಚಲುಗಳಾ
N.L. (ಕಲಪ್ಪಾ)
೧೦ ಸೇ ವಾಸನೆಯೂ ನಾರಂಗದ ಹಾಗಿರಲಿ, ನಿನ್ನ ಅಂಗುಳು ಉತ್ತಮ ದ್ರಾಕ್ಷಾರಸವಾದು
೧೧ ನನ್ನ ಪ್ರಿಯನಿಗೆ ಚೆನ್ನಾಗಿ ಇಳಿದು ನಿದ್ರಿತರ ಅಧರಗಳನ್ನು ಅಲ್ಲಾಡಿಸುತ್ತದೆ. ನಾನು
ನನ್ನ ಪ್ರಿಯನವಳು (೬,೩.) ಅವನ ಇಚ್ಛೆಯು ನನ್ನ ಮೇಲೆ ಇರುತ್ತದೆ.
೧೨ ಬಾ ನನ್ನ ಪ್ರಿಯನೇ, ನಾವು ಹೊರಗೆ ಹೊರಟು ಗ್ರಾಮಗಳಲ್ಲಿ (ರಾತ್ರಿ) ವಸ್ತಿ
೧೩ ಯಾಗಿರೋಣ! ಹಾಗಾದರೆ ಹೊತ್ತಿನಲ್ಲಿ ತೋಟಗಳಿಗೆ ಬಂದು ಬೆಳಗ್ಗೆ ಎದ್ದು ದ್ರಾಕ್ಷೆ
ಬಳ್ಳಿ ಚಿಗುರಿದೆಯೋ, ಹೂವು ವಿಕಸಿತವಾದೆಯೋ, ದಾಳಿಂಬಗಳು ಹೂ ಬಿಟ್ಟಿದೆ
ಯೋ (೬,೧೧) ಎಂತ ನೋಡಿಕೊಳ್ಳುವ! ಅಲ್ಲಿ ನನ್ನ ಪ್ರೇಮವನ್ನು ನಿನಗೆ ಕೊಡು
೧೪ ವೆನು. ದೂದಾಯಿಗಳು (In Mal [illegible] = Brazillian hill-berry.)
ಪರಿಮಳವನ್ನು ಸೂಸುತ್ತವೆ. ನಮ್ಮ ಬಾಗಿಲ ಮೇಲೆ ಎಲ್ಲಾ ತರದ ಫಲಗಳುಂಟು;
ನನ್ನ ಪ್ರಿಯನೇ, ನಾನು ಹೊಸದು ಹಳೆದು ಎಂಬವುಗಳನ್ನು ನಿನಗಾಗಿ ಸಂಗ್ರಹ
ಮಾಡಿದ್ದೇನೆ.

೮ನೇ ಸಂಧಿ.

ಹಾ! ನೀನು ನನಗೆ ಒಂದು ತಾಯಿಯ ಮೊಲೆ ಕುಡಿದು ಬೆಳೆದ ಸಹೋದರನಾಗಿ ೧
ದ್ದರೆ ವಾಸಿ! ಹಾಗಾದರೆ ಬೀದಿಯಲ್ಲಿ ನಿನ್ನನ್ನು ಕಂಡು ಮುದ್ದಿಟ್ಟರೂ ಯಾರೂ ನಿಂ
ದಿಸುತ್ತಿದ್ದಿಲ್ಲ. ನಾನು ನಿನ್ನನ್ನು ಕರಕೊಂಡು ತಾಯಿಯ ಮನೆಯಲ್ಲಿ ಬರಮಾಡುವೆನು, ೨
ನೀನು ನನಗೆ ಕಲಿಸುವಿ, ನಾನು ರಸ ಬೆರಸಿದ (ದ್ರಾ)ಕ್ಷಾರಸವನ್ನೂ ~~ಮಾದಲ~~ ದಾಳಿಂಬರ ಹಣ್ಣಿನ ರ
ಸವನ್ನೂ ನಿನ್ನನ್ನು ಕುಡಿಸುವೆನು. ಅವನ ಎಡಕೈ ನನ್ನ ತಲೆಯ ಕೆಳಗೆ ಇಟ್ಟು ಬಲ ೩
ಕೈ ನನ್ನನ್ನು ಆಲಿಂಗನ ಮಾಡುತ್ತಿರುತ್ತದೆ. (೨,೬.) — ಯೆರೂ, ಯೆರೂಸಲೆಮಿ ೪
ನ ಕುಮಾರಿಗಳೇ, (ಪ್ರೀ)ಯಳು ತಾನು ಇಷ್ಟಪಡುವವರೆಗೆ ಎಬ್ಬಿಸಬೇಡಿರಿ, ಎಬ್ಬರಿಸಬೇ
ಡಿರಿ! ಎಂತ ನಾನು ಆಣೆ ಇಟ್ಟು ಬೇಡಿಕೊಳ್ಳುತ್ತೇನೆ. (೨,೭.)

VI.) ಅರಣ್ಯದ ಹಿಂದಿರುಗಾವ್ಯ.

ಸುಲಮಿತ್ತಿಯು ಕಾಂತನ ಸಂಗಡ ಊರಿಗೆ ತಿರಿಗಿ ಶುನೇಮೆಂಬ ಜನ್ಮಸ್ಥಳಕ್ಕೆ ಮುಟ್ಟಿ (ಪ್ರೇ)ಮವನ್ನು ಕೊಂಡಾಡಿ (೮.) ಒಡಹುಟ್ಟಿದವರ ಸಂಗಡ ತಂಗಿಯನ್ನು ಕುರಿತು ಸಂಭಾಷಣೆ ಮಾಡಿ (೧೦) ತನ್ನನ್ನು ಕಾದ ಸಹೋದರರಿಗಾಗಿ ಇನಾಮು ಬೇಡಿ (೧೨) (ಪ್ರಿ)ಯನ ಸಂಗಡ ಹಾಡಿ ತಿರುಗಾಡುತ್ತಾಳೆ.

(ಊರವರು) ಅಗೋ, ಮರುಭೂಮಿಯಿಂದ ಏರಿ (೩,೬.) ತನ್ನ (ಪ್ರಿ)ಯನ ಮೇ ೫
ಲೆ ಒರಗಿಕೊಳ್ಳುತ್ತಲೂ ಬರುವ ಈಕೆ ಯಾರು? (ಸೂ.ಗ.ಮೊ.) ಈ ನಾರಂಗದ ಕೆ ೬
ಳಗಿನಿಂದ ನಾನು ನಿನ್ನನ್ನು ಎಬ್ಬರಿಸಿದೆನಲ್ಲವೋ? ಅಲ್ಲಿ ನಿನ್ನ ತಾಯಿ ನಿನ್ನನ್ನು ಹಡದಳು.
ಜನನಿ ನಿನ್ನನ್ನು ಹೆತ್ತಳು. (ಸುಲಮಿತ್ತಿ) ಮು(ದ್ರೆ) ಉಂಗುರದಂತೆ ನಿನ್ನ ಹೃದಯದಲ್ಲಿಯೂ
ಉಂಗುರದಂತೆ ಭುಜದಲ್ಲಿಯೂ ನನ್ನನ್ನು ಇಟ್ಟುಕೋ! ಯಾಕಂದರೆ (ಪ್ರೀ)ತಿಯು
ಮರಣದ ವರೆಗೆ (ಅಥವಾ ಹಾಗೆ) ಘಟ್ಟಿಯಾದದ್ದು. ಉರಿಯು ಪಾತಾಳದಂತೆ
ಕಡುದು. ಅದರ ಜ್ವಾಲನವು ಮಿಂಚೂ ಯಾಹನ ಜ್ವಾಲೆಯೂ ಅಷ್ಟೆ. ಅನೇಕ ನೀ ೭
ರುಗಳಿಗೂ (ಪ್ರೀ)ತಿಯನ್ನು ಆರಿಸಲಿಕ್ಕೆ ಕೂಡದು. ನದಿಗಳು ಸಹಾ ಅದನ್ನು

ಮುಳುಗಿಸಿ ಬಿಡಲಾರವು. ಒಬ್ಬನು ಸ್ವಂತ ಸಂಪತ್ತೆಲ್ಲಾ (ಪ್ರೀತಿಗಾಗಿ) ಕೊಟ್ಟರೂ ಅವನನ್ನು ನಿಂದಿಸಿ ಬಿಡುವರಷ್ಟೆ.

೮. ನಮಗೆ ಒಬ್ಬ ತಂಗಿ ಇದ್ದಾಳೆ. ಆಕೆಗೆ ಇನ್ನೂ ಸ್ತನಗಳು ಬರಲಿಲ್ಲ. ಆಕೆಯನ್ನು ಕುರಿತು ಮದುವೆ ಮಾತು ಬರುವ ದಿನದಲ್ಲಿ ನಾವು ಆಕೆಗೆ ಏನು ಮಾಡಲಿ?

೯ (ಸಹೋದರರು) ಆಕೆಯು ಗೋಡೆಯಾಗಿದ್ದರೆ ಅದರ ಮೇಲೆ ಬೆಳ್ಳಿ ಕೋಟೆ ಕಟ್ಟುವೆವು. ಕದ ಎಂತಾದರೆ ದೇವದಾರು ಹಲಗೆಯಿಂದ ಅದನ್ನು ಹಾಕಿ ಮುಚ್ಚುವೆವು.

೧೦ (ಯುವತಿ) ನಾನು ಗೋಡೆಯೂ ಸ್ತನಗಳು ಗೋಪುರಗಳಂತೆಯೂ ಆಯಿತು ಸತ್ಯ; ಹೀಗೆ ಆತನ ಕಣ್ಣುಗಳಲ್ಲಿ ನಾನು ಸಮಾಧಾನ ತಂದು ಕೊಡುವವಳಂತೆ ಆದೆನು.

೧೧ ಸೊಲೊಮೋನನಿಗೆ ಬಾಳ್‌ಹಾಮೋನಿನಲ್ಲಿ ತೋಟ ಇರುವಂತಾದ್ದು ಕಾವಲುಗಾರರಿಗೆ (ಗೇಣಿಗೆ) ಕೊಟ್ಟನು. ಅವರಲ್ಲಿ ಹುಟ್ಟುವಳಿಗಾಗಿ ಒಬ್ಬೊಬ್ಬನು ಸಾವಿರ ಹಣ ತರಲಿಕ್ಕೆ ಒಡಂಬಟ್ಟನು.

೧೨ ಆದರೆ ನನ್ನ ತೋಟವು, ಅಗೋ, ನನ್ನದು ನನ್ನ ಕೈವಶದಲ್ಲಿಯೇ. ಹೇ! ಸೊಲೊಮೋನ, ನಿನಗೆ ಸಾವಿರವೂ ಅದರ ಫಲವನ್ನು ಕಾಯುವವರಿಗೆ ಇನ್ನೂರೂ ಆಗಲಿ!

೧೩ (ಸೊಲೊಮೋ.) ತೋಟಗಳಲ್ಲಿ ವಾಸ ಮಾಡುವವಳೇ, ಗೆಳೆಯರು ನಿನ್ನ ಶಬ್ದಕ್ಕೆ ಕಿವಿಗೊಡುತ್ತಾರೆ. ನನ್ನನ್ನು ಕೇಳಿಸು!

೧೪ (ಯುವತಿ —) ನನ್ನ ಪ್ರಿಯನೇ, ನೀನು ಜಿಂಕೆಗೆ ಅಥವಾ ಹುಲ್ಲೆಮರಿಗೆ ಸಮನಾಗಿ ಪರಿಮಳ ಪರ್ವತಗಳ ಮೇಲೆ ಓಡಿ ಬರುವಂತೆ ಆಗಲಿ! (೨,೧೭).

ಗಿದರೆ, ಅವನ ಗದ್ದಿಗೆಯು ನೀತಿಯಲ್ಲಿ ನೆಲೆಯಾಗಿರುವದು (ಕೀರ್ತ. ೧೦೧.). ೬. ಅರಸನ ಮುಂದೆ ಮೆರೆ ಮೆ
ಯ ಬೇಡ. ಇದಲ್ಲದೆ ದೊಡ್ಡವರ ಎಡೆಯಲ್ಲಿ ನಿಲ್ಲ ಬೇಡ. ೭. ಯಾಕೆಂದರೆ ನಿನ್ನ ಕಣ್ಣುಗಳು ಕಂಡ ಹೆಗ್ಗಡೆ
ನ ಮುಂದೆ ಅವರು ನಿನ್ನನ್ನು ತಗ್ಗಿಸುವದಕ್ಕಿಂತ ಇತ್ತಲೇರು ಎಂದು ಹೇಳೋಣವು ಲೇಸು. ೮. ದಂದಿಗೆ
ಗೆ ಹೋರಾಡ ಬೇಡ. ಹೋರಾಟರೆ, ನಿನ್ನ ನೆರೆಯವನು ನಿನ್ನನ್ನು ಚುನ್ನವಾಡಿದ ಬಳಿಕ, ಏನು ಮಾಡುವಿ? ೯. ನಿನ್ನ
ದವನ್ನು ನಿನ್ನ ನೆರೆಯವನ ಸಂಗಡ ಆಡು. ಆದರೆ ಮತ್ತೊಬ್ಬನ ಗುಟ್ಟನ್ನು ಸಾರ ಬೇಡ. ೧೦. ಸಾರಿದರೆ, ಕೇಳುವವ
ನಿನ್ನನ್ನು ದೂರುವನು. ಬಳಿಕ ನಿನ್ನ ಕುಂದೆಯು ತೀರದೆ ಇರುವದು. ೧೧. ತನ್ನ ಹೊತ್ತಿಗೆ ನುಡಿದ ನುಡಿಯು
(… ೧೫, ೨೩.) ಬೆಳ್ಳಿಯ ತಟ್ಟೆಗಳಲ್ಲಿಯ ಚಿನ್ನದ ಕಾಯಿಗಳಾಗಿವೆ. ೧೨. ಕೇಳುವ ಕಿವಿಯ ಬಳಿಯ ಗದರಿಸುವ
ಜ್ಞಾನಿ ಹೊನ್ನಿನ ಕುಂಡಲ ಕುಂದಣದ ಒಡವೆ ಇವುಗಳ ಹಾಗೆ. ೧೩. ಸುಗ್ಗಿಯ ದಿವಸದಲ್ಲಿ ಹಿಮದ ತಂಪು ಹ್ಯಾ
ಗೆ ಹಾಗೆಯೇ ನಂಬಿಕೆಯುಳ್ಳ ಆಳು ಅವನನ್ನು ಕಳುಹಿದವರಿಗೆ ಇದ್ದಾನೆ. ಅವನು ತನ್ನ ಒಡೆಯನ ಪ್ರಾಣವನ್ನು
ತಂಪಿಸುತ್ತಾನಲ್ಲಾ (೧೧ನೆ ೧೫ನೆ ವಚನಗಳನ್ನು ಹರಿ ನೋಡ ಬಹುದು). ೧೪. ಕಳ್ಳ ಕಾಣಿಕೆಗಳಿಂದ ಹೊಗಳಿ ಕೊಳ್ಳುವವ
ನು ಮಳೆಯಿಲ್ಲದ ಮಂಜುಗಳು ಗಾಳಿಯು ಇವುಗಳೋಪಾದಿಯಾಗಿದ್ದಾನೆ. ೧೫. ತಾಳ್ಮೆಯ ಮನಸ್ಸಿನಿಂದ ಹೆಗ್ಗಳಿಕನ
ನ್ನು ಗೆಲ್ಲುವದೂ, ಮೆತ್ತಗಾದ ನಾಲಿಗೆಯಿಂದ ಎಲುಬನ್ನು ಮುರಿಯುವದೂ, ಉಂಟು. ೧೬. ಜೇನನ್ನು ಕಂಡು ಕೊಂಡರೆ,
ಳಿಸಿ ಕೊಂಡು ಕಾರದಂತೆ, ಸಾಕಾಗುವಷ್ಟೇ ತಿನ್ನು (ಈ ಮಾತಿಗೆ ಆತ್ಮಿಕವಾದ ಅಭಿಪ್ರಾಯವೂ ಉಂಟು.). ೧೭. ನಿನ್ನ
ಡಿಯನ್ನು ನಿನ್ನ ನೆರೆಯವನ ಮನೆಯಲ್ಲಿ, ಅವನು ಸಾಕಾಯಿತೆಂದು, ನಿನ್ನನ್ನು ಹಗೆಮಾಡದಂತೆ, ಬಳಕೆಯಾಗಲೀಯ
ದಿರು. ೧೮. ತನ್ನ ನೆರೆಯವನ ಮೇಲೆ ಕಳ್ಳ ಸಾಕ್ಷಿಯನ್ನು ನುಡಿಯುವವನು ಕೊಡತಿಯೂ, ಕತ್ತಿಯೂ, ಹದವಾದ
ಂಬೂ, ಆಗಿದ್ದಾನೆ. ೧೯. ಇಕ್ಕಟ್ಟಿನ ದಿವಸದಲ್ಲಿ ಎರಡು ಬಗೆಯುಳ್ಳವನ ಮೇಲೆ ಇಡುವ ನಂಬಿಗೆಯು ಮುರುಕು
ಹಲ್ಲೂ, ಕೀಲು ತಪ್ಪಿದ ಕಾಲೂ, ಆಗಿವೆ. ೨೦. ಮಾಗಿ ದಿವಸದಲ್ಲಿ ಉಡಿಗೆಯನ್ನು ತೆಗೆದು ಹಾಕುವವನೂ ಸೋರುಪ್ಪಿನ
ಮೇಲಣ ಹುಳಿಯೂ, ಜೋಡು, ಬೇಗುದಿಯಾದ ಹೃದಯದ ಬಳಿಯ (ರೋಮ. ೧೨; ೧೫ಲ್ಲಿ ಬರೆದದ್ದನ್ನು ಅನುಸರಿಸ
ದೆ) ಹಾಡುಗಳಿಂದ ಹಾಡುವವನು ಸಹ. ೨೧. ನಿನ್ನ ಹಗೆಯವನು ಹಸಿದರೆ, ಅವನನ್ನು ರೊಟ್ಟಿ ತಿನ್ನಿಸು. ಅವನು
ಬಾಯಾರಿದರೆ, ಅವನನ್ನು ನೀರು ಕುಡಿಸು. ೨೨. ಯಾಕೆಂದರೆ ಉರಿಕೆಂಡಗಳನ್ನು (ಇಂತು) ಅವನ ತಲೆಯ ಮೇಲೆ
ಗಡಿಸಿಡುವಿ. ಇದಲ್ಲದೆ ಯೆಹೋವಾಹನು ನಿನಗೆ ಈಡು ಮಾಡುವನು. ೨೩. ಬಡಗ ಗಾಳಿಯು ಮಳೆಯನ್ನು, ಮ
ಱಲ್ಲಿಯ ನಾಲಿಗೆಯು ಬೇಗುದಿಯಾದ ಮೋರೆಯನ್ನು, ಉಂಟು ಮಾಡುವದು. ೨೪. ಜಗಳಗಂಟಿಯಾದ ಹೆಂ
ಡತಿಯು, ಜೊತೆ ಮನೆಯು ಇವುಗಳಿಗಿಂತ ಮೇಲ್ಮಾಳಿಗೆಯ ಮೂಲೆಯಲ್ಲಿ ಇಕ್ಕೆಯಾಗಿರೋಣವು ಲೇಸು. (ಸ. ೨೧, ೯)
೨೫. ದಣಿದ ಪ್ರಾಣದ ಮೇಲೆ ಬರುವ ತಣ್ಣೀರೂ, ದೂರದೇಶದಿಂದ ಬರುವ ಒಳ್ಳೆ ಸುದ್ದಿಯೂ, ಜೋಡು. ೨೬.
ಡ ನೀರು ಕೆಟ್ಟ ಬಾವಿಯು ಇವುಗಳೂ, ಕೆಡಕನ ಮುಂದೆ ಕದಲುವ ನೀತಿವಂತನೂ, ಜೋಡು. ೨೭. ಅಳುಂಬು
ಜೇನನ್ನು ತಿನ್ನುವದು ಒಳ್ಳೇದಲ್ಲ. ಆದರೆ ಕಠಿಣವಾದ ಕಾರ್ಯಗಳ ವಿಚಾರಣೆಯು ಕಠಿಣವಾಗಿದೆ. ೨೮. ಗೋ
ಡೆಯಿಲ್ಲದ ಹಾಳಾದ ಊರೂ, ತನ್ನ ಆತ್ಮಕ್ಕೆ ಅಂಕೆಯಿಲ್ಲದ ಆಳೂ, ಜೋಡು.

೨೬. (ವ. ೧—೧೨. ಜ್ಞಾನವಿಲ್ಲದವರ ವಿಷಯವಾದ ಸಾಟಿಗಳು) ೧. ಬೇಸಗೆಯಲ್ಲಿ ಹಿಮವೂ, ಸುಗ್ಗಿಯಲ್ಲಿ ಮ
ಳೆಯೂ, ಹ್ಯಾಗೋ, ಹಾಗೆಯೇ ಹುಚ್ಚನಿಗೆ ಮೇಲ್ಮೆಯು ಅನುವಾಗಿರುವದಿಲ್ಲವು. ೨. ರೆಕ್ಕೆಯನ್ನು ಗದಗದಿಸು
ವ ಗುಬ್ಬಿಯಂತೆಯೂ, ಹಾರಾಡುವ ಬಾನಕ್ಕಿಯಂತೆಯೂ ಬೀಯವಾದ ಶಾಪವು ಬರುವದಿಲ್ಲವು. ೩. ಕುದು

ಕೆಗೆ ಚಮುಕು ಕತ್ತೆಗೆ ಮೂಗದಾರವು ಹ್ಯಾಗೋ, ಹಾಗೆಯೇ ಮೂಢನ ಬೆನ್ನಿಗೆ ಬೆತ್ತ; ಪ. ೪. ಮೂಢನಿಗೆ, ನೀನೂ ಅವನನ್ನು ಹೋಲದಂತೆ, ಅವನ ಹುಚ್ಚಿನಂತೆ ಮಾರ್ನುಡಿಯ ಬೇಡ. ೫. ಮೂಢನಿಗೆ, ಅವನು ತನ್ನ ಕಣ್ಣುಗಳಲ್ಲಿ ಜ್ಞಾನಿಯಾಗದಂತೆ, (ಅವನಿಗೆ ಗೋಚರಿಸು) ಅವನ ಹುಚ್ಚಿನಂತೆ ಮಾರ್ನುಡಿ. ೬. ಮೂಢನ ಕೈಯಿಂದ ಕೆಲಸಗಳನ್ನು ನಡಿಸುವವನು ಕಾಲುಗಳನ್ನು ಕಡಿದು, ಕಾಂದು, ಕೇಡನ್ನು ಕುಡಿಯುವವನಾಗಿದ್ದಾನೆ. ೭. ಕುಂಟನಿಂದ ತೊಡೆಗಳೂ, ಮೂಢನ ಬಾಯಲ್ಲಿ ಸಾಮ್ಯಹೇಳಿಯೂ, ಜೋಲಾಡುವದು. ೮. ಕಲ್ಲನ್ನು ಕವಣೆಯಲ್ಲಿ ಕಟ್ಟುವವನೂ, ಮೂಢನಿಗೆ ಮರ್ಯಾದೆಯನ್ನು ಕೊಡುವವನೂ, ಜೋಡು. ೯. ಅಮಲೇರಿದವನ ಕೈಯಲ್ಲಿ ಏತ್ತಿದ ಮುಳ್ಳಿನ ಗಿಡವೂ, ಮೂಢರ ಬಾಯಿಯಲ್ಲಿಯೂ ಸಾಮ್ಯಹೇಳಿಯೂ, ಜೋಡು. ೧೦. ಕಂಡವರನ್ನೆಲ್ಲಾ ತಿವಿಯುವ ಬಿಲ್ಲುಗಾರನೂ, ಮೂಢರನ್ನು ಕೂಲಿಗೆ ಕರೆಯುವವನೂ, ಹಾದು ಹೋಗುವವರನ್ನು ಕೂಲಿಗೆ ಕರೆಯುವವನೂ, ಸರಿ. ೧೧. ನಾಯಿಯು ತಾನು ಕಾರಿದ್ದಕ್ಕೆ ತಿರುಗುವಂತದಿ, ಮೂಢನು ತನ್ನ ಹುಚ್ಚುತನಕ್ಕೆ ಮರಳುವನು. ೧೨. ತನ್ನ ಕಣ್ಣುಗಳಲ್ಲಿ ಜ್ಞಾನಿಯಾದ ಮನುಷ್ಯನನ್ನು ಕಂಡೆಯಾ? (ಮತ್ತ. ೯, ೧೨ ಮುಂ) ಅವನಿಗಿಂತ ಮೂಢನಿಗಾಗಿ ಹೆಚ್ಚು ಆಶೆಯುಂಟು. (೧೩–೧೬ ಕೆಲಸಗಳ್ಳನ ವಿಷಯವಾದ ಸಾಮೆಗಳು) ೧೩. ಗರ್ಜಿಸುವ ಮೃಗವು ಮಾರ್ಗದಲ್ಲಿಯದೆ. ಬೀದಿಗಳ ನಡುವೆಯಲ್ಲಿ ಸಿಂಹವದೆ ಎಂದು, ಕೆಲಸಗಳ್ಳನನ್ನುವನು. (ಸ. ೨೨, ೧೩.) ೧೪. ಕದವು ಅದರ ತಿರುಗಣೆಯಲ್ಲಿ, ಮೈಗಳ್ಳನು ಅವನ ಹಾಸಿಗೆಯಲ್ಲಿ ತಿರುಗುವದು. ೧೫. (ಇದಕ್ಕೆ ೧೯, ೨೪. ಸರಿ ನೋಡು) ೧೬. ಬುದ್ಧಿಯಿಂದ ಮಾರ್ನುಡಿಯುವ ಏಳು ಮಂದಿಗಿಂತ ಮೈಗಳ್ಳನು ತನ್ನ ಕಣ್ಣುಗಳಲ್ಲಿ ಜ್ಞಾನಿಯಾಗಿದ್ದಾನೆ. ೧೭. ಹಾದು ಹೋಗಿ, ತನ್ನದಲ್ಲದ ದಂಡಿಗಾಗಿ ಉರಿಗೊಳ್ಳುವವನು, ನಾಯಿಯ ಕಿವಿಗಳನ್ನು ಹಿಡಿಯುವವನು, ಜೋಡು. ೧೮. ಉರಿಕೊಳ್ಳಿಗಳನ್ನೂ, ಅಂಬುಗಳನ್ನೂ, ಸಾವನ್ನೂ, ಕರೆಸುವ ಎರಚಿತ್ತಿಯವನೂ, ೧೯. ನೆರೆಯವನಿಗೆ ಮೋಸವನ್ನು ಮಾಡಿ, ವಿನೋದಮಾಡುವವನಲ್ಲವೋ ಎಂದು, ಹೇಳುವ ಮನುಷ್ಯನೂ, ಜೋಡು. ೨೦. ಕಟ್ಟಿಗೆಯು ಸರಿಯಾಗಿ ಹೋಗಲು, ಬೆಂಕಿಯು ಆರುವದು, ಚಾಡಿಗಾರನು ಇಲ್ಲದಿರುವಲ್ಲಿ ದಂಡಿಯು ಇಳಿಯುವದು. ೨೧. ಇದ್ದಲಿಯು ಉರಿಕೆಂಡಗಳಿಗಾಗಿಯೂ, ಕಟ್ಟಿಗೆಯು ಬೆಂಕಿಗಾಗಿಯೂ, ಉಂಟು. ಜಗಳಗಂಟನು ಜಗಳವನ್ನು ಹಚ್ಚುವದಕ್ಕಾಗಿದ್ದಾನೆ. ೨೨. ಇದಕ್ಕೆ ಸ. ೧೮, ೮. ~~[illegible]~~ ಸರಿಯಾದದ್ದು. (೨೩–೨೮. ಕಪಟದ ವಿಷಯವಾದ ಸಾಮೆಗಳು) ೨೩. ಹಂಚಿನ ಮೇಲೆ ಹಚ್ಚಿದ ಬೆಳ್ಳಿ ನೀರೂ, ಉರಿಯುವ ತುಟಿಗಳುಳ್ಳ ಕೆಟ್ಟ ಹೃದಯವೂ, ಜೋಡು. ೨೪. ತನ್ನ ತುಟಿಗಳಿಂದ ಹಗೆಗಾರನು ಮಾಜಿಕೊಳ್ಳುವನು. ತನ್ನ ಒಳಲ್ಲಿ ಮೋಸವನ್ನು ಇಟ್ಟುಕೊಳ್ಳುವನು. ೨೫. ಅವನು ತನ್ನ ಶಬ್ದವನ್ನು ನಯವಾಗಿರಿಸಿದರೆ, ಅವನನ್ನು ನಂಬಬೇಡ. ಯಾಕಂದರೆ ಅವನ ಹೃದಯದಲ್ಲಿ ಏಳು ಹೇಸಿಗೆ. ೨೬. ಹಗೆಯು ಮೋಸದಿಂದ ಮರೆಯಾಗುವದು. ಅವನ ಕೆಟ್ಟತನವು ಕೂಟದಲ್ಲಿ ಬೈಲಾಗುವದು. (ಸ. ೧೦, ೧೮) ಸುಳ್ಳಾದ ಬಾಯಿಯು ಕೆಡಿಸಿ ಬಿಡುವದು. ಸ. ೨೭, ೧. ನಾಳೆ ಹೊತ್ತಿಗಾಗಿ ಹೊಗಳಿಕೊಳ್ಳಬೇಡ, ಯಾಕಂದರೆ ಹೊತ್ತು ಹೆರುವದೇನೆಂದರಿಯೆ. ೨. ನಿನ್ನ ಬಾಯಿಯು ಅಲ್ಲ, ಹೆರವನು, ನಿನ್ನ ತುಟಿಗಳಲ್ಲ ಹೊರಗಿನವನೇ ನಿನ್ನನ್ನು ಹೊಗಳಲಿ. ೩. ಕಲ್ಲಿನ ಭಾರವೂ, ಮರಳಿನ ತೂಕವೂ (ದಾಟ್ಟದು). ಮೂಢನ ಸಿಟ್ಟು ಅವೆರಡಕ್ಕಿಂತ ಭಾರವಾಗಿದೆ. ೪. ಸಿಟ್ಟಿನ ಕ್ರೂರತನವು, ಉರಿಯ ಸೆಳವು (ದಾಟ್ಟದು) ಗಂಡ ಹೆಂಡರ ಹೊಟ್ಟೆ ಉರಿಗೆ ಎದುರು ನಿಲ್ಲುವವನ್ಯಾರು! ೫. ಗುಪ್ತವಾಗಿರುವ ಸದರಿಕೆಯು ಮರೆ

bis Sprüche 27, 5

ಸಾಮತಿಗಳು

೧ ಸಂಧಿ.

ದಾವೀದನ ಮಗನಾದ ಸೊಲೊಮೋನನು ಎಂಬ ಇಸ್ರಾಯೇಲ ೧
ರಾಜನ ಸಾಮತಿಗಳು, ಜ್ಞಾನವನ್ನೂ ಶಿಕ್ಷೆಯನ್ನೂ ತಿಳುಕೊಳ್ಳುವದಕ್ಕೆ ೨
ವಿವೇಕದ ವಾಕ್ಯಗಳನ್ನು ಗ್ರಹಿಸುವದಕ್ಕಾಗಿ - ಬೋಧೆಗಾಗಿಯೂ ನೀತಿ ೩
ನ್ಯಾಯ ನೆಟ್ಟನೆತನಗಳಾಗಿಯೂ ಶಿಕ್ಷೆ ಗ್ರಹಿಸಲಿಕ್ಕಾಗಿ, ಅಜ್ಞರಿಗೆ ಕು ೪
ಶಲತೆಯನ್ನೂ ಬಾಲಂಗೆ ಅರುಹನ್ನೂ ಚಿಂತೆಯನ್ನೂ ಕೊಡಲಿಕ್ಕಾ
ಗಿಯೇ, ಜ್ಞಾನಿ ಕೇಳಿ ವ್ಯುತ್ಪತ್ತಿ (ಕಲಿಕೆ) ಯನ್ನು ಹೆಚ್ಚಿಸುತ್ತಾ ವಿವೇ ೫
ಕವಂತನು ನಯಸಾಮರ್ಥ್ಯ ಸಂಪಾದಿಸುತ್ತಾ (ಇರಲಿ)! ಸಾಮತಿಯೂ ೬
ಕವಿತೆಯೂ ಜ್ಞಾನಿಗಳ ವಾಕ್ಯಗಳೂ ಒಗಟುಗಳೂ ತಿಳಕೊಳ್ಳುವ
ಹಾಗೆಯೇ; ಜ್ಞಾನದ ಆರಂಭವು ಯೆಹೋವನ ಭಯವೇ, ೭
ಜ್ಞಾನವನ್ನೂ ಶಿಕ್ಷೆಯನ್ನೂ ಮೂಢರು ಅಸಡ್ಡೆ ಮಾಡುತ್ತಾರೆ.

(ಬ—) ಜ್ಞಾನವಂತ ತಂದೆಗಳ ನುಡಿಗಳಿಗೆ
ಪಾಲು ಬಿದ್ದ (೧೦) ಪಕೀಕರರೊ ಮಾಡುವ
ಪಾಪಿಗಳನ್ನು ಬಿಟ್ಟಗಲಿ (೨೦) ಜ್ಞಾನವೆಂಬ
ಮಾತೆಯು ಕರೆಯುವದನ್ನೂ (೨೪) ತಿಳಿಯಿ